# 4ನೇ ತರಗತಿ ಪರಿಸರ ಅಧ್ಯಯನ ಕ್ಷೇತ್ರವಾರು ಅವಧಿಗಳ ಹಂಚಿಕೆ

| ಕ್ರ. ಸಂ. | ಮುಖ್ಯ ಪರಿಕಲ್ಪನೆ | ಬೋಧನಾ ಅವಧಿಗಳು |
|---|---|---|
| 1. | ಕುಟುಂಬ ಮತ್ತು ಸ್ನೇಹಿತರು | |
| | 1.1 ಸಂಬಂಧಗಳು | 30 |
| | 1.2 ಕೆಲಸ ಮತ್ತು ಆಟ | 16 |
| | 1.3 ಪ್ರಾಣಿಗಳು | 18 |
| | 1.4 ಸಸ್ಯಗಳು | 25 |
| 2. | ಆಹಾರ | 26 |
| 3. | ವಸತಿ | 32 |
| 4. | ನೀರು | 24 |
| 5. | ಪ್ರಯಾಣ | 11 |
| 6. | ನಮ್ಮ ಇತರ ಅವಶ್ಯಕತೆಗಳು | 11 |
| 7. | ಸ್ವಚ್ಛತೆ ಮತ್ತು ಸುರಕ್ಷತೆ | 28 |
| 8. | ನಮ್ಮ ಭೂಮಿ | 19 |
| | | **240** |

| ಸಿಗುವ ಒಟ್ಟು ಅವಧಿಗಳು | ಪೂರ್ವ ಸಿದ್ಧತೆ | ಪರಿಹಾರ ಬೋಧನೆ | ಬೋಧನೆಗೆ ಸಿಗುವ ಅವಧಿಗಳು |
|---|---|---|---|
| **300** | **30** | **30** | **240** |

# 1. ಕುಟುಂಬ ಮತ್ತು ಸ್ನೇಹಿತರು.

## 1.1. ಸಂಬಂಧಗಳು

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಜನರು ಒಟ್ಟಿಗೆ ವಾಸಿಸುವ ವ್ಯವಸ್ಥೆಯಲ್ಲಿ ಕಾಲ ಕ್ರಮೇಣ ಆದ ಬದಲಾವಣೆಯನ್ನು ಗುರುತಿಸುವರು.<br>• ಬದಲಾವಣೆಯನ್ನು ಸರಳ ವಂಶವೃಕ್ಷದಲ್ಲಿ ದಾಖಲಿಸುವರು.<br>[ಎರಡು ವಂಶ ವೃಕ್ಷಗಳ ಹೋಲಿಕೆ] | ಅವಿಭಕ್ತ ಕುಟುಂಬ ಮತ್ತು ವಿಭಕ್ತ ಕುಟುಂಬದ ಕಲ್ಪನೆ. ಹಿಂದಿನ ಮತ್ತು ಈಗಿನ ಕುಟುಂಬಗಳ ಹೋಲಿಕೆ.<br>ತನ್ನ ಮತ್ತು ಒಂದು ದೊಡ್ಡ ಕುಟುಂಬ (ತನ್ನ ವಂಶದ ತಲೆಮಾರುಗಳಲ್ಲಿನ / ತನ್ನ ಸಂಬಂಧದವರ) ದ ವಂಶವೃಕ್ಷ ಬರೆದು ಬದಲಾವಣೆ ಗುರ್ತಿಸುವುದು. ಹೊಸ ಸದಸ್ಯರ ಸೇರ್ಪಡೆ, ಸದಸ್ಯರ ವರ್ಗಾವಣೆ ಗುರುತಿಸುವುದು. | • ಹಿಂದಿನ ಕುಟುಂಬದ ಸದಸ್ಯರ ಬಗ್ಗೆ ಮತ್ತು ಈಗಿನ ಸದಸ್ಯರ ಬಗ್ಗೆ ಮಕ್ಕಳಿಗೆ ಪರಿಚಯಿಸುವುದು.<br>• ಈಗಿನ ಕೆಲವು ಕುಟುಂಬಗಳಲ್ಲಿ ಕಡಿಮೆ ಸದಸ್ಯರು ಇರಲು ಉದ್ಯೋಗ, ಅವಶ್ಯಕತೆಗಳೇ ಕಾರಣ ಎಂಬುದನ್ನು ಮನವರಿಕೆ ಮಾಡುವುದು. ಸದಸ್ಯರ ಸಂಬಂಧದ ಪಾತ್ರವನ್ನು ಮನದಟ್ಟು ಮಾಡುವುದು.<br>• ಎರಡು ವಂಶವೃಕ್ಷಗಳ ಅಥವಾ ಒಂದು ಮಗುವಿನ ಮೂರು ತಲೆಮಾರುಗಳ ವಂಶವೃಕ್ಷ ಬರೆದು ಅದರಲ್ಲಿನ ಬದಲಾವಣೆಗಳನ್ನು ಕುರಿತು ಚರ್ಚಿಸುವುದು.<br>• ತನ್ನ ಹಿರಿಯರಿಂದ ಅವರ ಹಿಂದಿನ ತಲೆಮಾರುಗಳ ಬಗ್ಗೆ ತಿಳಿಯಲು ಪ್ರೇರೇಪಿಸುವುದು.<br>• ಸರಳ ವಂಶವೃಕ್ಷ ರಚನೆ ಮಾಡಿಸುವುದು.<br>• ಹೊಸದಾಗಿ ಕುಟುಂಬಕ್ಕೆ ಸೇರ್ಪಡೆಯಾದ ಸದಸ್ಯರು, ಬೇರೆ ಕುಟುಂಬಕ್ಕೆ ಹೋದ ಸದಸ್ಯರ ಪರಿಚಯ. | ಮಕ್ಕಳ ಅನುಭವಗಳು<br>ಹಿರಿಯರ ಅನುಭವಗಳು<br>ಸರಳ ವಂಶವೃಕ್ಷ<br>ದೊಡ್ಡ ಕುಟುಂಬ, ಚಿಕ್ಕ ಕುಟುಂಬದ ಸದಸ್ಯರ ಛಾಯಾ ಚಿತ್ರಗಳು | • ಹಿಂದಿನ ಕುಟುಂಬಗಳಲ್ಲಿರುತ್ತಿದ್ದ ಸದಸ್ಯರನ್ನು ಮತ್ತು ಸಂಬಂಧಗಳನ್ನು ಹೆಸರಿಸಿ.<br>• ಸಾಮಾನ್ಯವಾಗಿ ಈಗಿನ ಕುಟುಂಬಗಳಲ್ಲಿರುವ ಸದಸ್ಯರ ಸಂಖ್ಯೆ ಸಂಬಂಧಗಳನ್ನು ಹೇಳಿರಿ.<br>• ನಿಮ್ಮ ಊರಿನ ಅಥವಾ ನೀನು ನೋಡಿರುವ ದೊಡ್ಡ ಕುಟುಂಬದ ಸದಸ್ಯರ ಸಂಬಂಧಗಳನ್ನು ಬರೆ.<br>• ನಿನ್ನ ಕುಟುಂಬದ ಮೂರು ತಲೆಮಾರುಗಳ ವಂಶವೃಕ್ಷವನ್ನು ಬರೆ. ಇದರಲ್ಲಿ ನೀನು ಯಾವ ಬದಲಾವಣೆಗಳನ್ನು ಗುರುತಿಸಿರುವೆ?<br>• ಈ ವಂಶವೃಕ್ಷದಲ್ಲಿ ಬೇರೆ ಕುಟುಂಬದಿಂದ ಬಂದ ಮತ್ತು ಈ ಕುಟುಂಬದಿಂದ ಬೇರೆ ಕುಟುಂಬಕ್ಕೆ ಹೋದ ಸದಸ್ಯರನ್ನು ಗುರುತಿಸಿ. | 7 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಕುಟುಂಬದ ಮೌಲ್ಯಗಳಿಂದ ಸಮಾಜದಲ್ಲಿ ಆದ ಬದಲಾವಣೆಯನ್ನು ಗಮನಿಸುವರು.<br>• ಧರ್ಮ, ಲಿಂಗ, ಮೌಲ್ಯಗಳು, ಸಾಂಸ್ಕೃತಿಕ ಆಚರಣೆಗಳಿಂದ ಕೂಡಿರುವ ಒಂದು ಸಣ್ಣ ಘಟಕವೇ ಕುಟುಂಬ ಎಂದು ಅರಿಯುವರು. | ಶಿಕ್ಷಣ, ಉದ್ಯೋಗ, ಆಹಾರಾಭ್ಯಾಸಗಳಲ್ಲಿ ಮುಂತಾದವಗಳಲ್ಲಿ ಕುಟುಂಬಗಳ ಮೌಲ್ಯಗಳಿಂದ ಸಮಾಜದಲ್ಲಿ ಆಗಿರುವ ಬದಲಾವಣೆಗಳು (ಸ್ವಾತಂತ್ರ್ಯ, ನಂಬಿಕೆ, ಕ್ರಮ, ಅವಲಂಬನೆ ಸಮಾನತೆ). ಬೇರೆ ಬೇರೆ ಕುಟುಂಬಗಳಲ್ಲಿನ ಧರ್ಮ, ಸಾಂಸ್ಕೃತಿಕ ಆಚರಣೆಗಳ ಬಗ್ಗೆ ಮಕ್ಕಳಿಗೆ ಪರಿಚಯ. | • ನಿಮ್ಮ ಕುಟುಂಬದಲ್ಲಿ ಯಾರು ಯಾರು ಯಾವ ಉದ್ಯೋಗವನ್ನ ಮಾಡುತ್ತಿದ್ದಾರೆ?<br>• ನಿಮ್ಮ ಕುಟುಂಬದವರು ಯಾವ ಶಿಕ್ಷಣವನ್ನ (ಎಲ್ಲಿಯವರೆಗೆ) ಪಡೆದಿದ್ದಾರೆ?<br>• ಯಾವ ಆಹಾರವನ್ನ (ಯಾವ ಯಾವ ತಿಂಡಿ / ಪದಾರ್ಥ) ಉಪಯೋಗಿಸುತ್ತೀರಿ? ಮುಂತಾದ ಪ್ರಶ್ನೆಗಳ ಮೂಲಕ ಮಕ್ಕಳ ಕುಟುಂಬದ ಪದ್ಧತಿ, ಆಚರಣೆ, ಮೌಲ್ಯಗಳ ಬಗ್ಗೆ ಚರ್ಚಿಸುವುದು. ಹೆಣ್ಣ ಮಕ್ಕಳಿಗೆ ಶಿಕ್ಷಣ, ಹೆಣ್ಣು ಮಕ್ಕಳಿಗೂ ಉದ್ಯೋಗ, ಹೆಣ್ಣು ಗಂಡು ಸಮಾನತೆ ಮುಂತಾದವುಗಳನ್ನು ಚರ್ಚಿಸಿ ಕುಟುಂಬ ಮತ್ತು ಸಮಾಜದಲ್ಲಿ ಆಗಿರುವ ಬದಲಾವಣೆಗಳನ್ನು ಗುರುತಿಸುವುದು.<br>• ಬೇರೆ ಬೇರೆ ಕುಟುಂಬಗಳ ಧರ್ಮ, ಮೌಲ್ಯಗಳು, ಸಾಂಸ್ಕೃತಿಕ ಆಚರಣೆಗಳ ಬಗ್ಗೆ ಚಿತ್ರಗಳು ಮತ್ತು ಮಕ್ಕಳ ಅನುಭವಗಳಿಂದ ಚರ್ಚಿಸಿ ಇದನ್ನೆಲ್ಲವನ್ನು ಒಳಗೊಂಡ ಕುಟುಂಬ ಒಂದು ಸಣ್ಣ ಘಟಕ ಎಂಬುದನ್ನ ತಿಳಿಸುವುದು. | ಮಕ್ಕಳ ಅನುಭವಗಳು<br>ಬೇರೆ ಧರ್ಮದ ಕುಟುಂಬದ ಆಚರಣೆಗಳ ಚಿತ್ರಗಳು.<br>ಹಿರಿಯರ ಅನುಭವಗಳು<br>ಸಾಮಾಜಿಕ ಪರಿಸರದ ಅರಿವು | • ನಿಮ್ಮ ಮನೆಯಲ್ಲಿ ನಿನ್ನ ತಂದೆ ಮಾಡುವ ಕೆಲಸಗಳಾವುವು? ಇವರು ತಾಯಿಗೆ ಹೇಗೆ ನೆರವಾಗುತ್ತಾರೆ?<br>• ಹೆಣ್ಣು ಮಕ್ಕಳಿಗೆ ಈಗ ಸರ್ಕಾರ ನೀಡುತ್ತಿರುವ ಸೌಲಭ್ಯಗಳಾವುವು?<br>• ನಿನ್ನ ಸ್ನೇಹಿತರ ಮನೆಯಲ್ಲಿ ಯಾವ ಹಬ್ಬಗಳನ್ನ ಆಚರಿಸುತ್ತಾರೆ?<br>• ನಿನ್ನ ಮನೆಯಲ್ಲಿ ಹಬ್ಬದ ದಿನ ಯಾವ ತಿನಿಸುಗಳನ್ನು ಮಾಡುವರು? | 6 |
| • ಕುಟುಂಬದ ಸದಸ್ಯರ ಮತ್ತು ಸ್ನೇಹಿತರ ಗುಣಗಳು ಮತ್ತು ಕೌಶಲ್ಯಗಳನ್ನು ಗುರುತಿಸುವರು.<br>• ಪ್ರತಿ ವ್ಯಕ್ತಿಯೂ ವಿಶಿಷ್ಟ ಎಂಬುದನ್ನು ಗುರುತಿಸುವರು. | ಕುಟುಂಬದ ಸದಸ್ಯರ ವಿಶೇಷ ಗುಣಗಳು ಮತ್ತು ಕೌಶಲಗಳ ಪರಿಚಯ, ಸ್ನೇಹಿತರ ಗುಣಗಳು – ಹಾಡುವುದರಲ್ಲಿ, ಓದುವುದರಲ್ಲಿ , ...... ಇತ್ಯಾದಿ ವಿಶಿಷ್ಟಗುಣಗಳ ಪರಿಚಯ. ಪ್ರತಿಯೊಬ್ಬರಲ್ಲೂ ಇರುವ ಪ್ರತಿಭೆ, ಕೌಶಲಗಳ ಪರಿಚಯ | • ನಿಮ್ಮ ಮನೆಯಲ್ಲಿ ಯಾರು ಚೆನ್ನಾಗಿ ಹಾಡುತ್ತಾರೆ? ಅಡುಗೆ ಯಾರು ಚೆನ್ನಾಗಿ ಮಾಡುತ್ತಾರೆ? ಚಿತ್ರ ಬಿಡಿಸುವಲ್ಲಿ, ಓಡುವುದರಲ್ಲಿ, ನೃತ್ಯ ಮಾಡುವಲ್ಲಿ ಒಬ್ಬರಿಂದ ಮತ್ತೊಬ್ಬರಿಗೆ ಗುಣ, ಸಾಮರ್ಥ್ಯದಲ್ಲಿ ವ್ಯತ್ಯಾಸವಿರುತ್ತದೆ ಎಂಬುದರ ಬಗ್ಗೆ ಚರ್ಚಿಸುವುದು. ವಿಶಿಷ್ಟ ಗುಣಗಳನ್ನು ಗುರುತಿಸಿ ಗೌರವಿಸಬೇಕು ಎಂಬುದನ್ನು ತಿಳಿಸುವುದು.<br>• ಸ್ಥಳೀಯ ಕಲಾವಿದರು, ಆಟಗಾರರ ಬಗ್ಗೆ ಮಕ್ಕಳಿಗೆ ತಿಳಿಸುವುದು. | • ಮಕ್ಕಳ ದೈನಂದಿನ ಅನುಭವಗಳು<br>• ಶಾಲೆಯ ಚಟುವಟಿಕೆಗಳು<br>• ಹಿರಿಯರ ಅನುಭವ<br>• ಸುತ್ತಲಿನ ಸಾಮಾಜಿಕ ಪರಿಸರದ ಜ್ಞಾನ | • ನಿನಗೆ ಯಾವ ಆಟವನ್ನು ಆಡಲು ಇಷ್ಟ?<br>• ನಿನ್ನ ಸ್ನೇಹಿತರಲ್ಲಿ ನೀನು ಮೆಚ್ಚುವ ಗುಣಗಳನ್ನು ಬರೆ?<br>• ನಿನ್ನ ಕುಟುಂಬದ ಸದಸ್ಯರಲ್ಲಿ ನಿನಗೆ ಯಾರನ್ನು ಕಂಡರೆ ತುಂಬಾ ಇಷ್ಟ ಏಕೆ? | 6 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| ಶಾಲೆಯ ಸಮಾರಂಭಗಳಲ್ಲಿ ಮತ್ತು ರಾಷ್ಟ್ರೀಯ ಹಬ್ಬಗಳಲ್ಲಿ ಭಾಗವಹಿಸುವರು. ರಾಷ್ಟ್ರೀಯ ಹಬ್ಬಗಳ ಮಹತ್ವ ಅರಿಯುವರು ರಾಷ್ಟ್ರೀಯ ಸಂಕೇತಗಳನ್ನು ಗುರುತಿಸುವರು ಮತ್ತು ಗೌರವಿಸುವರು. | ಶಾಲೆಯಲ್ಲಿನ ಸಮಾರಂಭಗಳು (ಶಾಲಾ ಪ್ರಾರಂಭೋತ್ಸವ, ಕೆಲವು ದಿನಾಚರಣೆಗಳು ......) ರಾಷ್ಟ್ರೀಯ ಹಬ್ಬಗಳು ಮತ್ತು ಅವುಗಳ ಮಹತ್ವದ ಕಿರು ಪರಿಚಯ. | ಮಕ್ಕಳೊಂದಿಗೆ ಚರ್ಚಿಸುವುದು. (ನಮ್ಮ ಶಾಲೆಯಲ್ಲಿ ಆಚರಿಸುವ ಸಮಾರಂಭಗಳು ಯಾವುವು?)<br>ಆಗಸ್ಟ್ 15, ಸೆಪ್ಟಂಬರ್ 5, ಅಕ್ಟೋಬರ್ 2, ನವೆಂಬರ್ 14, ಜನವರಿ 26 ರ ಆಚರಣೆಯ ಬಗ್ಗೆ ಮಕ್ಕಳಿಗೆ ವಿವರಿಸುವುದು.<br>ಗಾಂಧೀಜಿ, ನೆಹರು, ರಾಧಾಕೃಷ್ಣನ್‌ರವರ ಬಗ್ಗೆ ಇರುವ ಮಕ್ಕಳ ಪುಸ್ತಕಗಳನ್ನು ಓದಿಸುವುದು.<br>ಸ್ವಾತಂತ್ರ್ಯ, ಗಾಂಧೀಜಿಯವರ ಬಗ್ಗೆ ಹಾಡುಗಳನ್ನು ಹೇಳಿ ಕೊಡುವುದು. ರಾಷ್ಟ್ರೀಯ ಚಿಹ್ನೆಗಳನ್ನು ಗುರುತಿಸಿ ಗೌರವಿಸುವುದರ ಬಗ್ಗೆ ಚರ್ಚಿಸುವರು. | ಮಕ್ಕಳ ಅನುಭವಗಳು<br>ಚಿತ್ರ ಪಟಗಳು (ಸ್ವಾತಂತ್ರ್ಯ ಹೋರಾಟಗಾರರ, ರಾಧಾಕೃಷ್ಣನ್ ......), ಗ್ರಂಥಾಲಯದ ಪುಸ್ತಕಗಳು, ಹಾಡುಗಳು, ರಾಷ್ಟ್ರೀಯ ಲಾಂಛನಗಳು. | • ನಿನ್ನ ಕುಟುಂಬದ ಸದಸ್ಯರಲ್ಲಿ ನೀನು ಗುರುತಿಸಿರುವ ಕೌಶಲ ವನ್ನು ಬರೆ. ಮತ್ತು ಯಾರು ಎಂಬುದನ್ನು ಬರೆ.<br>• ನೀನು ಭಾಗವಹಿಸಿರುವ ಶಾಲೆಯ ಸಮಾರಂಭಗಳನ್ನು ತಿಳಿಸಿ.<br>• ಖಾಲಿ ಜಾಗ ತುಂಬು ಜನವರಿ 26ರಂದು ………………… ಆಚರಿಸುತ್ತೇವೆ<br>• ಮಕ್ಕಳ ದಿನಾಚರಣೆಯನ್ನು ನೀವು ಹೇಗೆ ಆಚರಿಸುತ್ತೀರಿ?<br>• ನಮ್ಮ ರಾಷ್ಟ್ರೀಯ ಲಾಂಛನಗಳು ಯಾವುವು? ಅವುಗಳನ್ನ ಏಕೆ ಗೌರವಿಸಬೇಕು? | 6 |
| ವಿಶೇಷ ಅವಶ್ಯಕತೆಯುಳ್ಳವರ ನಡುವಿನ ಸಂವಹನ ವಿಧಾನಗಳನ್ನು ಅರಿಯುವರು. ವಿಕಲ ಚೇತನರ ಬಗ್ಗೆ ಸಂವೇದನಾಶೀಲರಾಗಿ ಪ್ರತಿಕ್ರಿಯಿಸುವರು. | ಬ್ರೈಲ್ ಲಿಪಿ, ಆಂಗಿಕ ಭಾಷೆಯ ಕಿರು ಪರಿಚಯ. ವಿಶೇಷ ಅವಶ್ಯಕತೆಯುಳ್ಳ ಮಕ್ಕಳೊಂದಿಗೆ ಸಂವಹನ ನಡೆಸಲು ನೆರವು. ಈ ಮಕ್ಕಳ ಬಗ್ಗೆ ಮೆಚ್ಚುಗೆ. | • ದೃಷ್ಟಿ ದೋಷದ ಮಕ್ಕಳು ಕಲಿಯಲು (ಓದಲು + ಬರೆಯಲು) ಬಳಸುವ ಬ್ರೈಲ್ ಲಿಪಿಯ ಬಗ್ಗೆ ಮಾಹಿತಿ ನೀಡುವುದು.<br>• ಆಂಗಿಕ ಸನ್ನೆಗಳನ್ನು ಮಕ್ಕಳಿಗೆ ಪರಿಚಯಿಸಿ ಶ್ರವಣದೋಷದ ಮಕ್ಕಳು ಹೇಗೆ ಬೇರೆಯವರೊಂದಿಗೆ ಸಂವಹನ ಮಾಡುತ್ತಾರೆಂದು ಕಲ್ಪನೆ ನೀಡುವುದು.<br>• ಶಾಲೆಯಲ್ಲಿ ಅಥವಾ ತಮ್ಮ ಮನೆಯ ಬಳಿ ಇರುವ ವಿಶೇಷ ಅವಶ್ಯಕತೆಯುಳ್ಳ ಮಕ್ಕಳೊಂದಿಗೆ ಹೇಗೆ ಸಂವಹ ಮಾಡಬಹುದು | ಬ್ರೈಲ್ ಲಿಪಿಯ ಸಾಧನಗಳು<br>IERT ಸಂಪನ್ಮೂಲ ವ್ಯಕ್ತಿಗಳ ಅನುಭವಗಳು<br>ಮಕ್ಕಳ ಅನುಭವ | • ಬ್ರೈಲ್ ಲಿಪಿಯನ್ನು ಬರೆಯಲು ಬಳಸುವ ಸಾಧನಗಳಾವುವು?<br>• ಆಂಗಿಕ ಸನ್ನೆಗಳಲ್ಲಿ ನಿನಗೆ ಗೊತ್ತಿರುವ 3 ಸನ್ನೆಗಳು ಮತ್ತು ಅದರ ಅರ್ಥವನ್ನು ತಿಳಿಸು.<br>• ಶ್ರವಣ ದೋಷ ಮತ್ತು ದೃಷ್ಟಿ ದೋಷದ | 5 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | | ಎಂಬುದರ ಜೊತೆಗೆ ಅವರೊಂದಿಗೆ ನಮ್ಮ ವರ್ತನೆ ಹೇಗಿರಬೇಕೆಂದು ತಿಳಿಸುವುದು.<br>• IERT ಸಂಪನ್ಮೂಲಗಳಿಂದ ಮಕ್ಕಳಿಗೆ ಮಾಹಿತಿ. | | ಮಕ್ಕಳೊಂದಿಗೆ ನಾವು ಹೇಗೆ ಸಂವಹನ ಮಾಡಬಹುದು? | |
| **1.2. ಕೆಲಸ ಮತ್ತು ಆಟ** | | | | | |
| • ಸ್ಥಳೀಯ ಹಾಗೂ ವಿವಿಧ ಪ್ರದೇಶಗಳಲ್ಲಿನ ವಿವಿಧ ಕಸುಬುದಾರರನ್ನು ಗುರ್ತಿಸುವರು.<br>• ದುಡಿಯುವ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸುವರು. | ಸ್ಥಳೀಯ ಕಸುಬುದಾರರು – ಬಡಗಿ, ನೇಕಾರ, ಕಮ್ಮಾರ, ಚಮ್ಮಾರ, ಹೂವಾಡಗಿತ್ತಿ, ...... ಇತ್ಯಾದಿ. ವಿವಿಧ ಪ್ರದೇಶ – ಎಲೆಕ್ಟ್ರೀಷಿಯನ್, ವೈದ್ಯರು, ಟಿ.ವಿ. ರಿಪೇರಿ, ಮೆಕ್ಯಾನಿಕ್, .......... ಇತ್ಯಾದಿ.<br>ಕೆಲವು ಕಸುಬುಗಳಲ್ಲಿ ಮಕ್ಕಳು ತೊಡಗಿದ್ದು ಅವರು ಎದುರಿಸುತ್ತಿರುವ ಸಮಸ್ಯೆಗಳು –<br>ಉದಾ : ರೇಷ್ಮೆ ತೆಗೆಯುವಲ್ಲಿ ಚಿಕ್ಕ ಮಕ್ಕಳು ಬಿಸಿ ನೀರಿನಲ್ಲಿ ಕೈ ಹಾಕುವುದು. ಕಡ್ಲೆ ಪುರಿ ತಯಾರಿಕೆಯ ಭಟ್ಟಿಯಲ್ಲಿ ಸಣ್ಣ ಮಕ್ಕಳು ಉರಿಯಲ್ಲಿ ಬೇಯುವುದು. | ಊರಿನ / ಸ್ಥಳೀಯವಾಗಿ ಇರುವ ಕಸುಬುದಾರರನ್ನು ಗುರ್ತಿಸಿ ಪಟ್ಟಿ ಮಾಡುವುದು (ವೀಕ್ಷಣೆ) ಭೇಟಿ ಮಾಡುವುದು. ಗುಡಿಕೈಗಾರಿಕೆಗಳನ್ನು ಪರಿ ಮಾಡುವುದು.<br>ಬೇರೆ ಬೇರೆ ಕಸುಬುದಾರರ ಬಗ್ಗೆ ಮಕ್ಕಳಿಗೆ ಪರಿಚಯಿಸುವುದು ಅವರಿಂದ ನಮಗಾಗುವ ಸಹಾಯವನ್ನು ಕುರಿತು ಚರ್ಚಿಸುವುದು.<br>ದುಡಿಯುವ ಮಕ್ಕಳು ಎದುರಿಸುವ ಸಮಸ್ಯೆಗಳನ್ನು ಕುರಿತು ಕೆಲವು ಕಥೆಗಳ ಮೂಲಕ ತಿಳಿಸುವುದು. (ಶಿವಕಾಶಿ)<br>ಅವರು ಕೆಲಸ ಮಾಡುವ ಸನ್ನಿವೇಶವನ್ನು ವರ್ಣಿಸುವುದು.<br>ವಿವಿಧ ಕಸುಬುದಾರರ ಚಿತ್ರಗಳನ್ನು ಸಂಗ್ರಹಿಸುವರು. | ಮಕ್ಕಳ ದಿನನಿತ್ಯದ ಅನುಭವಗಳು<br>ಸ್ಥಳೀಯ ಪರಿಸರ<br>ಕಥೆಗಳು<br>ಕಸಬುದಾರರ ಚಿತ್ರಗಳು | • ನಿಮ್ಮ ಊರಿನಲ್ಲಿರುವ ವಿವಿಧ ಕಸಬುದಾರರ ಹೆಸರನ್ನು ಬರೆಯಿರಿ.<br>• ನಿಮಗೆ ತಿಳಿದಿರುವ ಇತರ ಕಸಬುದಾರರನ್ನು ಹೆಸರಿಸಿ.<br>• ಚಿತ್ರ ನೋಡಿ ಇವರ ಕಸಬನ್ನು ಗುರುತಿಸಿ.<br>• ದುಡಿಯುವ ಮಕ್ಕಳು ಎದುರಿಸುವ 4 ಸಮಸ್ಯೆಗಳನ್ನು ಬರೆಯಿರಿ. | 6 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಆಟಗಳು ಮತ್ತು ನಿಯಮಗಳ ಪರಿಚಯ ಮಾಡಿಕೊಳ್ಳುವರು.<br>• ಆಟದಿಂದ ಸಾಮಾಜಿಕ ಸಂಬಂಧಗಳ ವೃದ್ಧಿಯಾಗುವುದೆಂದು ಗುರುತಿಸುವರು.<br>(ತಮ್ಮ ಜಿಲ್ಲೆಯ ಪ್ರಸಿದ್ಧ ಆಟಗಳನ್ನು ಪರಿಚಯ ಮಾಡಿಕೊಳ್ಳುವರು.) | ಒಂದು ಆಟ ಮತ್ತು ಅದರ ನಿಯಮಗಳ ಪರಿಚಯ.<br>ಆಟ ಆಡುವಾಗ ಗುಂಪಿನಲ್ಲಿರುವ ಹೊಂದಾಣಿಕೆ, ಸದಸ್ಯರ ಸಾಮರಸ್ಯ, ತಂಡ ಸ್ಪೂರ್ತಿ ಮುಂತಾದವುಗಳನ್ನು ಗುರುತಿಸಿ ಹೇಗೆ ಸಂಬಂಧಗಳು ವೃದ್ಧಿಯಾಗುವುದೆಂಬ ತಿಳುವಳಿಕೆ. | • ಆಡುವ ಆಟಗಳ ಪಟ್ಟಿ ತಯಾರಿಕೆ.<br>• ಕಣ್ಣಮುಚ್ಚಾಲೆ ಆಟವನ್ನು ಉದಾಹರಣೆಯಾಗಿ ತೆಗೆದುಕೊಂಡು ಆ ಆಟದ ನಿಯಮಗಳ ಬಗ್ಗೆ ಚರ್ಚೆ. ಕಬ್ಬಡಿ ಆಟದ ನಿಯಮಗಳ ಪರಿಚಯ.<br>• ನಿಯಮಗಳಿಗೆ ಅನುಸಾರವಾಗಿ ಆಡಿಸುವುದು.<br>ಆಟ ಆಡುವಾಗ ಮಕ್ಕಳ ವರ್ತನೆಗಳನ್ನು ಗಮನಿಸುವಂತೆ ತಿಳಿಸುವುದು. ಆಟದಲ್ಲಿರುವ ಸಹಕಾರ, ಸಾಮರಸ್ಯ ಹೊಂದಾಣಿಕೆಯ ಬಗ್ಗೆ ಚರ್ಚಿಸುವುದು. | ಆಟಗಳ ಪಟ್ಟಿ<br>ಕೆಲವು ಆಟಗಳ ನಿಯಮಗಳು<br>ಮಕ್ಕಳ ಅನುಭವಗಳು<br>ಆಟದ ಮೈದಾನ | • ನೀನು ಆಡುವ ಆಟಗಳನ್ನು ಹೆಸರಿಸು.<br>• ಒಂದು ಆಟದ ನಿಯಮಗಳನ್ನು ಹೇಳು ಅಥವಾ ಈ ಆಟವನ್ನು ಹೇಗೆ ಆಡುವೆ? | 5 |
| ಜಾತ್ರೆ ಮತ್ತು ಸರ್ಕಸ್ಸಿನ ಮೂಲಕ ದೊರೆಯುವ ಮನರಂಜನೆಯ ಬಗ್ಗೆ ವಿವರಿಸುವರು<br>(ತಮ್ಮ ಸುತ್ತಲಿನ ಜಿಲ್ಲೆಗಳ ಪ್ರಸಿದ್ಧ ಜಾತ್ರೆ ಮಹೋತ್ಸವದ ಬಗ್ಗೆ ತಿಳಿಯುವರು) | ಜಾತ್ರೆಯಲ್ಲಿನ ಮನರಂಜನೆ – ದೊಂಬರಾಟ, ಗುರಿ ಹೊಡೆದು ವಸ್ತು ಗಳಿಸು, ಬೆಲೂನು ಆಟ, ತಿರುಗುವ ಚಕ್ರ, ಜಾನಪದ ನೃತ್ಯ, ತೇರು ..... ಇತ್ಯಾದಿ. ಸರ್ಕಸ್‌ನಲ್ಲಿ ಪ್ರಾಣಿಗಳ ನಡಿಗೆ, ಆಟ, ನೃತ್ಯ, ಜೋಕರ್, ಜನರ ತೂಗುಯ್ಯಾಲೆ ..... ಇತ್ಯಾದಿಗಳ ಮೂಲಕ ದೊರೆಯುವ ಮನ ರಂಜನೆಯ ಪರಿಚಯ. | • ಮಕ್ಕಳು ನೋಡಿರುವ ಜಾತ್ರೆಯನ್ನು ಮತ್ತು ಸರ್ಕಸ್ಸನ್ನು ಕುರಿತು ಚರ್ಚಿಸುವುದು.<br>• ಮಕ್ಕಳ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ನೀಡುವುದು.<br>• ಅಲ್ಲಿ ದೊರೆಯುವ ವಿವಿಧ ಮನರಂಜನೆಯನ್ನು ಕುರಿತು ಮಕ್ಕಳಿಂದ ಮಾಹಿತಿ.<br>• ಅವಕಾಶವಿದ್ದಲ್ಲಿ ಸ್ಥಳೀಯವಾಗಿ ನಡೆಯುವ ಜಾತ್ರೆ / ಸಂತೆಗೆ ಭೇಟಿ / ಸರ್ಕಸ್ಸಿಗೂ ಭೇಟಿ.<br>• ಇಲ್ಲಿ ಮನರಂಜನೆಗೆ ಸಂಬಂಧಿಸಿದ ಚಿತ್ರಗಳ ಸಂಗ್ರಹ. | ಮಕ್ಕಳ ಅನುಭವಗಳು<br>ಸರ್ಕಸ್ / ಜಾತ್ರೆಗೆ ಭೇಟಿ.<br>ಚಿತ್ರಗಳ ಸಂಗ್ರಹ. | • ನೀನು ನೋಡಿರುವ ಒಂದು ಜಾತ್ರೆಯಲ್ಲಿನ ಮನರಂಜನೆಯನ್ನು ಕುರಿತು 6 ಸಾಲುಗಳಲ್ಲಿ ಬರೆ.<br>• ಜಾತೆಯಲ್ಲಿ ಮನರಂಜನೆಗಾಗಿ ಯಾವ ಯಾವ ಆಟಗಳನ್ನು / ಚಟುವಟಿಕೆಗಳನ್ನು ಮಾಡುತ್ತಾರೆ.<br>• ಸರ್ಕಸ್ ನೋಡುವುದು ತುಂಬಾ ಖುಷಿ. ಏಕೆ? | 5 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| **1.3. ಪ್ರಾಣಿಗಳು** | | | | | |
| • ಪ್ರಾಣಿಗಳಿಗೂ ಮತ್ತು ಮಾನವರಿಗೂ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಗುರುತಿಸುವರು.<br>• ಪ್ರಾಣಿಗಳಿಗೂ ಮಾನವರಿಗೂ ಇರುವ ಸಂಬಂಧ (ಅವಲಂಬನೆ) ವನ್ನು ಅರಿಯುವರು. | ಪ್ರಾಣಿಗಳಿಗೂ ಮಾನವರಿಗೂ ನಡುವೆ ಇರುವ ಗಾತ್ರ, ಆಕಾರ, ಆಹಾರ ಸೇವನೆ, ವರ್ತನೆ, ಯೋಚನಾ ಶಕ್ತಿ ಇತ್ಯಾದಿಗಳಲ್ಲಿ ಕಂಡು ಬರುವ ವ್ಯತ್ಯಾಸ ಮತ್ತು ಹೋಲಿಕೆಯನ್ನು ಗುರುತಿಸುವುದು.<br>ಪ್ರಾಣಿಗಳು ಮತ್ತು ಮಾನವರಿಗೂ ನಡುವೆ ಇರುವ ಸಂಬಂಧ ಪರಸ್ಪರ ಅವಲಂಬನೆಯನ್ನು ಮನಗಾಣುವರು. | • ಪ್ರಾಣಿಯ ಮತ್ತು ಮಾನವರ ಚಿತ್ರಪಟವನ್ನು ತೋರಿಸುತ್ತಾ ಇವೆರಡಕ್ಕು ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ತೋರಿಸುತ್ತಾ ಪರಿಕಲ್ಪನೆಯನ್ನು ಮೂಡಿಸುವುದು.<br>• ಮಕ್ಕಳೊಂದಿಗೆ ಚರ್ಚಿಸುತ್ತಾ ನಮಗೂ ಪ್ರಾಣಿಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ಪಟ್ಟಿ ಮಾಡಿಸಿ ಕಲ್ಪನೆಯನ್ನು ಮೂಡಿಸುವುದು.<br>• ನಮಗೆ ಪ್ರಾಣಿಗಳಿಂದ ಏನೇನು ದೊರೆಯುತ್ತವೆ.<br>• ಪ್ರಾಣಿಗಳಿಂದ ನಮಗೇನು ಉಪಯೋಗ? ಪ್ರಶ್ನೆಗಳನ್ನು ಕೇಳುತ್ತಾ ಪ್ರಾಣಿಗಳು ಮತ್ತು ಮಾನವರು ಹೇಗೆ ಪರಸ್ಪರ ಅವಲಂಬನೆಗೆ ಒಳಪಟ್ಟಿದ್ದಾರೆಂಬ ಕಲ್ಪನೆಯನ್ನು ಮೂಡಿಸುವುದು. | ಚಿತ್ರಪಟಗಳು ಮಕ್ಕಳ ಅನುಭವಗಳು.<br>ಚರ್ಚೆ<br>ಪ್ರಶ್ನೆಗಳು | • ಪ್ರಾಣಿಗಳಿಗಿಂತ ಮಾನವ ಹೇಗೆ ಭಿನ್ನವಾಗಿದ್ದಾನೆ?<br>• ಪ್ರಾಣಿಗಳಿಗೂ ಮಾನವರಿಗೂ ಇರುವ 2 ಹೋಲಿಕೆ ಬರೆ.<br>• ಮಾನವ ಹೇಗೆ ಪ್ರಾಣಿಗಳನ್ನು ಅವಲಂಬಿಸಿದ್ದಾನೆ ? | 6 |
| • ಪ್ರಾಣಿಗಳ ವರ್ತನೆಯನ್ನು ವೀಕ್ಷಿಸುವರು. | ಪ್ರಾಣಿಗಳು ಒಂಟಿಯಾಗಿದ್ದಾಗ, ತನ್ನ ಗುಂಪಿನಲ್ಲಿದ್ದಾಗ, ಇತರೆ ಪ್ರಾಣಿಗಳೊಂದಿಗೆ ಸಹಕಾರ, ಸಹಬಾಳ್ವೆ, ಹೊಂದಾಣಿಕೆ, ಒಗ್ಗಟ್ಟು ಹಂಚಿ ತಿನ್ನುವ ಗುಣ, ಜಗಳ, ಪ್ರೀತಿ ವಿಶ್ವಾಸ ಮುಂತಾದ ವರ್ತನೆಗಳನ್ನು ವೀಕ್ಷಿಸಿ ಗುರುತಿಸುವುದು.<br>ಉದಾ . ಆನೆ, ಇರುವೆ, ಕಾಗೆ, ಜೇನು ಇತ್ಯಾದಿಗಳ ಮೂಲಕ. | • ಆನೆ, ಕಾಗೆ, ಇರುವೆ ಮುಂತಾದ ಪ್ರಾಣಿ ಮತ್ತು ಪಕ್ಷಿಗಳು ಹೇಗೆ ತಮ್ಮ ಗುಂಪಿನಲ್ಲಿ ವರ್ತಿಸುತ್ತವೆ ಎಂಬ ಕಥೆಗಳನ್ನು ಹೇಳುವುದರ ಮೂಲಕ ಕಲ್ಪನೆಯನ್ನು ಮೂಡಿಸುವುದು. ಉದಾ. ಬೆಕ್ಕು ತನ್ನ ಮರಿಗಳೊಂದಿಗೆ, ಕೋಳಿ ತನ್ನ ಮರಿಗಳೊಂದಿಗೆ, ಹಂದಿ ತನ್ನ ಮರಿಗಳೊಂದಿಗೆ ಹೇಗೆ ಸಹಬಾಳ್ವೆ ನಡೆಸುತ್ತದೆಂದು ಉದಾಹರಣೆ ಮೂಲಕ ಚರ್ಚಿಸುವ ಕಲ್ಪನೆ ಮೂಡಿಸುವುದು.<br>• ಜೇನು ಹುಳುವನ್ನು ಉದಾಹರಣೆ ನೀಡಿ ಅವುಗಳ ಪರಸ್ಪರ ಸಹಕಾರ ಹೊಂದಾಣಿಕೆ ಕೂಡಿ ಬಾಳುವಿಕೆಯ ಕಲ್ಪನೆ ಮೂಡಿಸುವುದು. | ಕಥೆಗಳು<br>ಉದಾಹರಣೆಗಳು<br>ಮಕ್ಕಳ ಅನುಭವಗಳು | • ನಿಮ್ಮ ಮನೆಯಲ್ಲಿ ಸಾಕಿರುವ ಬೆಕ್ಕು ತನ್ನ ಇತರ ಪ್ರಾಣಿಗಳೊಂದಿಗೆ ಹೇಗೆ ವರ್ತಿಸುತ್ತದೆ. ವೀಕ್ಷಿಸಿ.<br>• ಹಸುಗಳು ತಮ್ಮ ಗುಂಪಿನಲ್ಲಿದ್ದಾಗ ಹೇಗೆ ವರ್ತಿಸುತ್ತವೆ? | 6 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| ಜೇನು ಸಂಗ್ರಹಣೆಯ ವಿಧಾನವನ್ನು ಮತ್ತು ಉಪಯೋಗವನ್ನು ಅರಿಯುವರು. | ಜೇನು ಸಾಗಣಿಕೆಯಲ್ಲಿ ಬಳಸುವ ವಸ್ತುಗಳು ಹೇಗೆ ಸಾಕಬೇಕು. ಅವುಗಳ ವಿಧಾನ, ಜೇನು ಸಾಕಾಣಿಕೆಯಿಂದಾಗುವ ಉಪಯೋಗಗಳ ಬಗೆ ತಿಳಿಯುವುದು. | • ಜೇನು ಹುಳು ಹೂವಿನಿಂದ ಜೇನನ್ನು ಸಂಗ್ರಹಿಸುವ ವಿಧಾನಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುತ್ತಾ ಕಲ್ಪನೆ ಮೂಡಿಸುವುದು.<br>• ಜೇನಿಗೆ ಸಂಬಂಧಪಟ್ಟ ಚಿತ್ರಗಳನ್ನು ತೋರಿಸಿ ಸಂಗ್ರಹಣೆ ಮತ್ತು ಉಪಯೋಗಗಳ ಬಗ್ಗೆ ಚರ್ಚಿಸಿ ಕಲ್ಪನೆ ಮೂಡಿಸುವುದು.<br>• ಸ್ಥಳೀಯವಾಗಿ ಜೇನು ಕಟ್ಟಿರುವುದರ ಬಳಿ ಹೋಗಿ ವೀಕ್ಷಿಸುವುದು.<br>• ಲಭ್ಯವಿದ್ದರೆ ಜೇನು ಸಾಕಾಣಿಕಾ ಕೇಂದ್ರಗಳಿಗೆ ಭೇಟಿ ನೀಡಿ ಅಲ್ಲಿನ ಕಾರ್ಯ ವಿಧಾನಗಳ ವೀಕ್ಷಣೆ ಮತ್ತು ವರದಿ ಮಾಡುವುದು. | ಜೇನಿಗೆ ಸಂಬಂಧಪಟ್ಟ ಚಿತ್ರಪಟಗಳು<br>ಜೇನು ಸಾಕಾಣಿಕಾ ಕೇಂದ್ರಕ್ಕೆ ಭೇಟಿ.<br>ಚರ್ಚೆ, ವೀಕ್ಷಣೆ, ವರದಿ ತಯಾರಿಕೆ. | • ಜೇನು ಹುಳು ಹೇಗೆ ಜೇನನ್ನು ಸಂಗ್ರಹಿಸುತ್ತದೆ?<br>• ಜೇನಿನಿಂದ ಯಾವ ರೀತಿಯ ಉಪಯೋಗಗಳನ್ನು ಪಡೆಯಬಹುದು ಪಟ್ಟಿ ಮಾಡಿ.<br>• ಜೇನು ಹೇಗೆ ತನ್ನ ಗುಂಪಿನಲ್ಲಿ ಸಹಜೀವನ ನಡೆಸುತ್ತದೆಂದು ವೀಕ್ಷಿಸಿ ವರದಿ ಮಾಡಿ. | 6 |
| **1.4. ಸಸ್ಯಗಳು** | | | | | |
| • ಮನೆಯ ಹತ್ತಿರದ ಮತ್ತು ಕಾಡಿನ ಮರಗಳ ಬಗ್ಗೆ ತಿಳಿಯುವರು.<br>• ಕಾಡಿನಲ್ಲಿ ವಾಸಿಸುವ ಜನರು ತಿನ್ನುವ ಹಣ್ಣುಗಳನ್ನು ಪರಿಚಯ ಮಾಡಿಕೊಳ್ಳುವರು.<br>• ಮರ ಕಡಿಯಬಾರದು ಇದು ನಮ್ಮದು ಎಂಬ ಭಾವನೆ ಬೆಳೆಸಿಕೊಳ್ಳುವರು. | ಸ್ಥಳೀಯ ಮರಗಳಾದ ತೆಂಗು, ಹುಣಸೆ, ಬೇವು, ಹೊಂಗೆ ಇತ್ಯಾದಿ ಮತ್ತು ಕಾಡಿನ ಮರಗಳಾದ ಸಾಮಾನ್ಯವಾಗಿ ತೇಗ, ಬೀಟೆ, ಹೊನ್ನ, ದೇವದಾರು ಇತ್ಯಾದಿ ಮರಗಳ ಪರಿಚಯ.<br>ಕಾಡಿನಲ್ಲಿ ವಾಸಿಸುವ ಜನರು ತಿನ್ನುವ ಹಣ್ಣುಗಳಾದ ಹಲಸು, ನೇರಳೆ, ನೆಲಿಕಾಯಿ, .... ಇತ್ಯಾದಿ ಹಣ್ಣುಗಳ ಪರಿಚಯ. | ಹೊರ ಸಂಚಾರಕ್ಕೆ ಮಕ್ಕಳನ್ನು ಕರೆದುಕೊಂಡು ಹೋಗಿ ಸ್ಥಳೀಯ ಮರಗಳಾದ ತೆಂಗು, ಹುಣಸೆ, ಬೇವು, ಹೊಂಗೆ ಇತ್ಯಾದಿ ಮರಗಳ ಪರಿಚಯ ಮಾಡಿಸುವುದು. ಮಗುವಿನ ಅನುಭವದ ಆಧಾರದ ಮೇಲೆ ಪ್ರಶ್ನಿಸಿ ಸ್ಥಳೀಯ ಮರಗಳ ಬಗ್ಗೆ ಪಟ್ಟಿ ಮಾಡಿಸುವುದು.<br>ಕಾಡಿನ ಮರಗಳಾದ ತೇಗ, ಬೀಟೆ ಹೂವನ್ನೆ ..... ಮುಂತಾದ ಮರಗಳ ಚಿತ್ರಪಟಗಳ ಸಹಾಯದಿಂದ ಪರಿಚಯಿಸುವುದು.<br>ಚಿತ್ರಪಟದ ಸಹಾಯದಿಂದ ಕಾಡಿನಲ್ಲಿ ವಾಸಿಸುವ ಜನರು ತಿನ್ನುವ ಹಣ್ಣುಗಳಾದ ಹಲಸು, ನೇರಳೆ, ನೆಲಿಕಾಯಿ... ಇತ್ಯಾದಿಗಳ ಪರಿಚಯ ಹಾಗೂ ಈ ಹಣ್ಣುಗಳ ಉಪಯೋಗದ ಬಗ್ಗೆ ಚರ್ಚೆ. | ಹೊರ ಸಂಚಾರ<br>ಮಕ್ಕಳ ಅನುಭವ<br>ಕಾಡಿನ ಮರಗಳ ಚಿತ್ರಪಟ | • ನಿಮ್ಮ ಊರಿನ ಸುತ್ತಮುತ್ತ ಇರುವ ಮರಗಳನ್ನು ಪಟ್ಟಿ ಮಾಡಿ.<br>• ಹೊರ ಸಂಚಾರದಲ್ಲಿ ನೀನು ಕಂಡ ಮರಗಳನ್ನ ಪಟ್ಟಿ ಮಾಡು.<br>• ಕಾಡಿನಲ್ಲಿ ಬೆಳೆಯುವ ಮರಗಳಾವುವು?<br>ಕಾಡಿನಲ್ಲಿ ವಾಸಿಸುವ ಜನರು ತಿನ್ನುವ ಹಣ್ಣುಗಳಾವುವು?<br>ಮಾನವರಿಗೆ ಹಣ್ಣುಗಳಿಂದಾಗುವ ಉಪಯೋಗಗಳಾವುವು? | 6 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಗಿಡಗಳನ್ನು ನೆಟ್ಟು ಬೆಳೆಸುವ ಅಗತ್ಯತೆಯನ್ನು ಮನಗಾಣುವರು. | ಮರದ ಉಪಯೋಗದ ಅರಿವಿನಿಂದ ಮರ ಕಡಿಯಬಾರದು.<br>• ಸಸ್ಯಗಳನ್ನು ಪೋಷಿಸುವ ಅಗತ್ಯತೆ ಅರಿಯುವುದು. | ಮಕ್ಕಳಿಗೆ ಹಿರಿಯರ ಸಹಾಯದಿಂದ ಮರದ ಉಪಯೋಗಗಳ ಬಗ್ಗೆ ಚರ್ಚಿಸಿ ತರಗತಿಯಲ್ಲಿ ವರದಿ ಮಾಡುವಂತೆ ಮಾಡುವುದು.<br>ಮರದ ಕಥೆ / ಹಾಡು.<br>• ತಾನು ನೆಟ್ಟು ಬೆಳೆಸಿದ ಸಸ್ಯಗಳ ಬಗ್ಗೆ ವರದಿ ಮಾಡುವುದು. | ಹಿರಿಯರೊಡನೆ ಚರ್ಚೆ | • ಮರದಿಂದ ಮನುಷ್ಯರಿಗೆ ಆಗುವ ಅನುಕೂಲಗಳ ಬಗ್ಗೆ ಹಿರಿಯರೊಡನೆ ಚರ್ಚಿಸು.<br>• ಮರವನು ಕಡಿಯಬಾರದು ಏಕೆ?<br>• ನೀನು ಈ ವರ್ಷ ನೆಟ್ಟ ಸಸ್ಯಗಳ ಹೆಸರುಗಳನ್ನು ಪಟ್ಟಿ ಮಾಡು. | |
| • ಬೇರಿನ ಕಾರ್ಯಗಳನ್ನು ಪಟ್ಟಿ ಮಾಡುವರು.<br>• ಕೆಲವು ಸಸ್ಯದ ಬೇರುಗಳು ಆಹಾರವಾಗಿ ಮಾರ್ಪಾಟು ಹೊಂದಿರುವ ಬಗ್ಗೆ ಗಮನಿಸುವರು. | • ಬೇರಿನ ಕಾಯಕಗಳ ಕಿರು ಪರಿಚಯ.<br>• ಕೆಲವು ಸಸ್ಯದ ಬೇರುಗಳು ಆಹಾರ ಸಂಗ್ರಹಣೆಗಾಗಿ ಮಾರ್ಪಾಟು ಹೊಂದಿರುವ ಬಗ್ಗೆ ಪರಿಚಯ.<br>ಉದಾ : ಗೆಣಸು, ಕ್ಯಾರೇಟ್, ಮೂಲಂಗಿ ಇತ್ಯಾದಿ. | • ಸಸ್ಯಗಳು ಬೆಳೆಯಲು ಬೇರು ಬೇಕು ಎಂಬುದಕ್ಕೆ ಕರ್ಣ ಕುಂಡಲ ಸಸ್ಯದ ಪ್ರಯೋಗ.<br>• ಬೇರುಗಳ ಕಾರ್ಯದ ಬಗ್ಗೆ ತಿಳಿಯಲು ಎರಡು ಸಸ್ಯಗಳನ್ನು ಬೆಳಸಿ, ಒಂದು ಸಸ್ಯಕ್ಕೆ ಕಾಂಡ ಕತ್ತರಿಸಿ ವೀಕ್ಷಿಸುವ ಚಟುವಟಿಕೆ.<br>• ಚಿತ್ರಪಟಗಳ ಸಹಾಯದಿಂದ ಕೆಲವು ಸಸ್ಯದ ಬೇರುಗಳಾದ ಮೂಲಂಗಿ, ಕ್ಯಾರೇಟ್, ಗೆಣಸು .... ಇತ್ಯಾದಿಗಳು ಆಹಾರ ಸಂಗ್ರಹಣೆಗಾಗಿ ಮಾರ್ಪಟು ಹೊಂದಿರುವ ಬಗ್ಗೆ ವಿವರಿಸುವುದು. | ಕರ್ಣ ಕುಂಡಲ ಸಸ್ಯದ ಪ್ರಯೋಗ<br>ಎರಡು ಸಸ್ಯಗಳನ್ನು ಬೆಳಸುವ ಚಟುವಟಿಕೆ.<br>ಆಹಾರ ಸಂಗ್ರಹಣೆಗಾಗಿ ಮಾರ್ಪಾಟು ಹೊಂದಿರುವ ಮೂಲಂಗಿ, ಕ್ಯಾರೇಟ್, ಗೆಣಸು .... ಇತ್ಯಾದಿಗಳ ಚಿತ್ರಪಟ. | • ಬೇರಿನ ಕಾರ್ಯಗಳಾವುವು?<br>• ಸಸ್ಯಗಳನ್ನು ಭೂಮಿಗೆ ಬಂದಿಸಲ್ಪಟ ಭಾಗ ಯಾವುದು?<br>• ಮೂಲಂಗಿ ಸಸ್ಯ ಆಹಾರವನ್ನು ಯಾವ ಭಾಗದಲ್ಲಿ ಸಂಗ್ರಹಿಸಿಟ್ಟಿರುತ್ತದೆ?<br>• ಬೇರಿನ ರೂಪಾಂತರಗಳಿಗೆ ಎರಡು ಉದಾಹರಣೆ ತಿಳಿಸು. | 7 |
| • ವಿವಿಧ ರೀತಿಯ ಹೂಗಳನ್ನು ಸಂಗ್ರಹಿಸಿ ಅವುಗಳ ಆಕಾರ, ಬಣ್ಣ, ದಳ, ವಾಸನೆಯ ಬಗ್ಗೆ ಚರ್ಚಿಸುವರು. ಕೆಲವು ಋತುಗಳಲ್ಲಿ ಹೂ ಅರಳುವುದನ್ನು ಗಮನಿಸುವರು. | ಸ್ಥಳೀಯ ಹೂಗಳಾದ ದಾಸವಾಳ, ಮಲ್ಲಿಗೆ, ಸೇವಂತಿಗೆ, ಜಾಜಿ, ...... ಇತ್ಯಾದಿ ಹೂಗಳನ್ನು ಸಂಗ್ರಹಿಸಿ ಅವುಗಳ ಆಕಾರ, ಬಣ್ಣ, ವಾಸನೆಯ ಬಗ್ಗೆ ಚರ್ಚೆ.<br>ಕೆಲವು ಋತುಗಳಲ್ಲಿ ಹೂ ಅರಳುವುದರ ಬಗ್ಗೆ ವೀಕ್ಷಣೆ. | • ಮಕ್ಕಳನ್ನು ಹೊರ ಸಂಚಾರಕ್ಕೆ ಕರೆದುಕೊಂಡು ಹೋಗಿ ಸ್ಥಳೀಯ ಹೂಗಳನ್ನು ಸಂಗ್ರಹಿಸಿ ಅವುಗಳ ಆಕಾರ, ಬಣ್ಣ, ದಳ, ವಾಸನೆಯ ಬಗ್ಗೆ ಚರ್ಚಿಸುವುದು.<br>• ಮಕ್ಕಳ ಅನುಭವದ ಆಧಾರದ ಮೇಲೆ ಪ್ರಶ್ನಿಸಿ, ಕೆಲವು ಕಾಲಗಳಲ್ಲಿ ಮಾತ್ರ (ಋತುಗಳಲ್ಲಿ) ಹೂ ಅರಳುವುದರ ಬಗ್ಗೆ ಚರ್ಚಿಸುವುದು.<br>• ಮಕ್ಕಳ ಮನೆಯಲ್ಲಿ ಬಳಸುವ ದಿನನಿತ್ಯದ-ಹೂಗಳನ್ನು ಪಟ್ಟಿ ಮಾಡಿಸುವುದು. | ಹೊರ ಸಂಚಾರ<br>ಮಕ್ಕಳ ಅನುಭವ<br>ಮಕ್ಕಳ ಅನುಭವ | • ನೀವು ವೀಕ್ಷಿಸಿದ ಹೂಗಳ ಹೆಸರುಗಳನ್ನು ಬರೆಯಿರಿ.<br>• ನೀವು ಪಟ್ಟಿ ಮಾಡಿರುವ ಹೂಗಳ ಆಕಾರ, ಬಣ್ಣ, ದಳ, ವಾಸನೆಗಳನ್ನು ಪಟ್ಟಿ ಮಾಡಿ.<br>• ಮಲ್ಲಿಗೆ ಯಾವ ಕಾಲದಲ್ಲಿ ಹೂ ಬಿಡುತ್ತದೆ? | 7 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ದಿನ ನಿತ್ಯದಲ್ಲಿ ಹೂವಿನ ಬಳಕೆಯನ್ನು ಗುರುತಿಸುವರು. | ಉದಾ : ಬೇಸಿಗೆಯಲ್ಲಿ ಮಲ್ಲಿಗೆ, ಮಳೆಗಾಲದಲ್ಲಿ ಸೇವಂತಿಗೆ ...... ಇತ್ಯಾದಿ. | | | • ಸೇವಂತಿಗೆ ಯಾವ ಕಾಲದಲ್ಲಿ ಹೂ ಬಿಡುತ್ತದೆ?<br>• ನಿಮ್ಮ ಮನೆಯಲ್ಲಿ ಯಾವ ಕಾರ್ಯಗಳಲ್ಲಿ ಹೂವನ್ನು ಬಳಕೆ ಮಾಡುವಿರಿ. | |
| • ವಿವಿಧ ವಸ್ತುಗಳ ಮೇಲೆ ಚಿತ್ರಿಸಿರುವ ಹೂಗಳನ್ನು ಗುರುತಿಸುವರು.<br>• ಹೂ ಮಾರುವವರು ಬಳಸುವ ಅನೌಪಚಾರಿಕ ಅಳತೆಗಳನ್ನು ತಿಳಿಯುವರು ಮತ್ತು ಹೂ ಮಾರಾಟದ ಬೆಲೆಗಳನ್ನು ತಿಳಿಯುವರು. | • ವಿವಿಧ ವಸ್ತುಗಳಾದ ಗೋಡೆ, ಮಡಿಕೆ, ಹೂದಾನಿ, ಸೀರೆ ...... ಇತ್ಯಾದಿ ವಸ್ತುಗಳ ಮೇಲೆ ಹೂ ಬಿಡಿಸಿರುವುದರ ಪರಿಚಯ<br>• ಸ್ಥಳೀಯವಾಗಿ ಹೂ ಮಾರುವವರು ಬಳಸುವ ಅನೌಪಚಾರಿಕ ಅಳತೆಗಳಿಂದ, ಮೊಳ, ಮಾರು, ಕುಚ್ಚು .... ಇತ್ಯಾದಿ ಅಳತೆಗಳ ಪರಿಚಯ ಮತ್ತು ಹೂ ಮಾರಾಟದ ಬೆಲೆಗಳ ಬಗ್ಗೆ ತಿಳುವಳಿಕೆ. | ಹೂವಿನಿಂದ ಚಿತ್ರಿಸಿರುವ ಮಡಿಕೆ, ಹೂದಾನಿ, ಸೀರೆ .... ಇತ್ಯಾದಿಗಳ ವಸ್ತುಗಳ ಮೇಲೆ ಚಿತ್ರ ಬಿಡಿಸಿರುವುದರ ಬಗ್ಗೆ ಪ್ರದರ್ಶಿಸಿ ಮತ್ತು ಚರ್ಚಿಸುವುದು.<br>• ಮಕ್ಕಳು ನೋಡಿರುವ, ವಿವಿಧ ವಸ್ತುಗಳ ಮೇಲೆ ಚಿತ್ರಿಸಿರುವ ಹೂಗಳು ಹಾಗೂ ವಸ್ತುಗಳನ್ನು ಪಟ್ಟಿ ಮಾಡಿಸುವುದು.<br>• ಮಾರುಕಟ್ಟೆಯಲ್ಲಿ ಹೂವನ್ನು ಮಾರುತ್ತಿರುವ ದೃಶ್ಯವನ್ನು ವೀಕ್ಷಿಸಿ ಹೂ ಮಾರುವವ ಬಳಸುವ ಅನೌಪಚಾರಿಕ ಅಳತೆ ಮತ್ತು ಮಾರಟದ ಬೆಲೆ ಬಗ್ಗೆ ವರದಿ ಮಾಡುವುದು. | ಹೂಗಳ ಚಿತ್ರಗಳಿಂದ ಅಲಂಕೃತಗೊಂಡಿರುವ ವಸ್ತುಗಳು.<br>ಮಕ್ಕಳ ಅನುಭವ<br>ವೀಕ್ಷಣೆ | • ಈ ವಸ್ತುಗಳನ್ನು ವೀಕ್ಷಿಸಿ ಇವುಗಳ ಮೇಲೆ ಚಿತ್ರಿಸಿರುವ ಹೂವಿನ ಹೆಸರನ್ನು ಬರೆಯಿರಿ.<br>• ನಿನ್ನ ಮನೆಯಲ್ಲಿ ಯಾವ ಯಾವ ವಸ್ತುಗಳ ಮೇಲೆ ಹೂವಿನ ಚಿತ್ರ ಬಿಡಿಸಿದ್ದಾರೆ ಪಟ್ಟಿ ಮಾಡಿ.<br>• ಹೂ ಮಾರುವರು ನಿನಗೆ ಯಾವ ಅಳತೆ ಮಾನಗಳಲ್ಲಿ ಹೂವನ್ನು ಕೊಡುತ್ತಾರೆ? | 6 |

## 2. ಆಹಾರ

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಸಮತೋಲನ ಆಹಾರವನ್ನು ವಿವರಿಸುವರು.<br>• ವಿವಿಧ ಪೌಷ್ಠಿಕಾಂಶಗಳ ವರ್ಗೀಕರಣ ಮಾಡುವರು.<br>• ಆಹಾರದ ಸಂರಕ್ಷಣೆ | • ಪೌಷ್ಠಿಕಾಂಶಗಳಾದ ಶರ್ಕರ ಪಿಷ್ಠಗಳು, ಪ್ರೋಟಿನ್‌ಗಳ, ಮೇದಸ್ಸು, ಖನಿಜ ಲವಣ ಮತ್ತು ಜೀವಸತ್ವಗಳು ದೇಹಕ್ಕೆ ಬೇಕಾದ | • ಮಕ್ಕಳು ಸೇವಿಸುವ ಆಹಾರ ಪಟ್ಟಿ ಮಾಡಿಸಿ. ನಂತರ ಆ ಪಟ್ಟಿಯ ಸಹಾಯದಿಂದ ಅವುಗಳನ್ನು ಶರ್ಕರ ಪಿಷ್ಠ ಪ್ರೋಟಿನ್‌ಗಳು, ಮೇದಸ್ಸು ಖನಿಜ ಲವಣ ಮತ್ತು ಜೀವಸತ್ವಗಳಾಗಿ ವರ್ಗೀಕರಿಸುವಂತೆ ಮಾಡುವುದು. | ಮಕ್ಕಳು ಸೇವಿಸುವ ಆಹಾರದ ಪಟ್ಟಿ<br>ವಿವರಣೆ | • ನೀವು ಸೇವಿಸುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡಿ.<br>• ದೇಹಕ್ಕೆ ಶಕ್ತಿ ಕೊಡುವ ಪೌಷ್ಠಿಕಾಂಶಗಳಾವುವು? | 7 |


| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| ವಿಧಾನಗಳನ್ನು ಅಭ್ಯಾಸ ಮಾಡುವರು. | ಪ್ರಮಾಣದಲ್ಲಿರುವಂತಹ ಆಹಾರವೇ ಸಮತೋಲನ ಆಹಾರ ಎಂಬುದರ ಪರಿಚಯ.<br>• ಆಹಾರದ ಮೇಲೆ ಮುಚ್ಚಿಡುವುದು, ಕೆಡದಂತೆ ಕಾಪಾಡುವುದು .... ಇತ್ಯಾದಿ ಆಹಾರ ಧಾನ್ಯಗಳ ಸಂರಕ್ಷಣೆ ವಿಧಾನಗಳನ್ನು ಅಭ್ಯಾಸ ಮಾಡುವುದು. | • ಮಕ್ಕಳು ವರ್ಗೀಕರಿಸಿದ ಪೌಷ್ಠಿಕಾಂಶಗಳ ಆಧಾರದ ಮೇಲೆ ಸಮತೋಲನ ಆಹಾರದ ಬಗ್ಗೆ ವಿವರಿಸುವುದು.<br>• ಮಕ್ಕಳು ಮನೆಯಲ್ಲಿ ಹಿರಿಯರು ಆಹಾರ ಸಂರಕ್ಷ ವಿಧಾನಗಳನ್ನು ವೀಕ್ಷಿಸಿ, ನಂತರ ತರಗತಿಯಲ್ಲಿ ಈ ವಿಧಾನಗಳ ಬಗ್ಗೆ ಚರ್ಚೆ ಮಾಡುವುದು. | ಹಿರಿಯರು ಹಾಗೂ ಮಕ್ಕಳ ಅನುಭವ | • ಆಹಾರದಲ್ಲಿ ಖನಿಜ ಲವಣಗಳಿರುವುದರಿಂದ ನಿನಗೇನು ಪ್ರಯೋಜನ?<br>• ಸಮತೋಲನ ಆಹಾರ ಎಂದರೇನು?<br>• ತೆರೆದ ಆಹಾರ ತಿನ್ನಬಾರದು ಏಕೆ?<br>• ಆಹಾರ ಧಾನ್ಯಗಳನ್ನು ಒಣಗಿಸಿ ಸಂರಕ್ಷಿಸುವುದರಿಂದಾಗುವ ಪ್ರಯೋಜನವೇನು? | |
| • ನಾವು ಆಹಾರವನ್ನು ಎಲ್ಲಿಂದ ಮತ್ತು ಹೇಗೆ ಪಡೆಯುತ್ತೇವೆ ಎಂಬುದನ್ನು ವಿವರಿಸುವರು | ರೈತರು ಬೆಳೆದ ಆಹಾರ ಪದಾರ್ಥ ಮಾರುಕಟ್ಟೆಗೆ – ಮಾರುಕಟ್ಟೆಯಿಂದ ದಿನಸಿ ಅಂಗಡಿ – ದಿನಸಿ ಅಂಗಡಿಯಿಂದ ಮನೆ ಹೀಗೆ ಆಹಾರ ಪಡೆಯುವ ಕ್ರಮ ಪರಿಚಯಿಸುವುದು. | ರೈತರು ಬೆಳೆದ ಆಹಾರ ಪದಾರ್ಥಗಳು ಮಾರುಕಟ್ಟೆಗೆ ಮಾರುಕಟ್ಟೆಯಿಂದ ದಿನಸಿ ಅಂಗಡಿ, ದಿನಸಿ ಅಂಗಡಿಗಳಿಂದ ಮನೆಗಳಿಗೆ ಆಹಾರ ಪೂರೈಕೆಯಾಗುವುದರ ಬಗ್ಗೆ ಮಕ್ಕಳು ಮನೆಗಳಲ್ಲಿ ಹಿರಿಯರೊಡನೆ ಮಾಹಿತಿ ಸಂಗ್ರಹಿಸಿ ನಂತರ ಶಿಕ್ಷಕರು ಕೇಳುವ ಪ್ರಶ್ನೆಗಳಿಗೆ ಚರ್ಚಿಸಿ ವಿವರಿಸುವರು. | ಮಕ್ಕಳು, ಶಿಕ್ಷಕರು ಹಾಗೂ ಹಿರಿಯರ ಅನುಭವ | • ಆಹಾರ ಧಾನ್ಯಗಳನ್ನು ಯಾರು ಬೆಳೆಯುತ್ತಾರೆ?<br>• ರೈತರು ಬೆಳೆದು ಆಹಾರ ಧಾನ್ಯಗಳನ್ನು ಎಲ್ಲಿ ಮಾರಾಟ ಮಾಡುತ್ತಾರೆ?<br>• ದಿನಸಿ ಅಂಗಡಿಯವರು ಎಲ್ಲಿಂದ ಆಹಾರ ಧಾನ್ಯಗಳನ್ನು ಕೊಂಡು ತರುವರು?<br>• ಮನೆಗೆ ಎಲ್ಲಿಂದ ಆಹಾರ ಧಾನ್ಯಗಳನ್ನು ಕೊಂಡು ತರುವೆವು? | 5 |
| • ಸಾಮೂಹಿಕ ಭೋಜನ ಮಾಡುವ ಸಂದರ್ಭಗಳನ್ನು ಗುರುತಿಸುವರು ಇಲ್ಲಿ | ಸಾಮೂಹಿಕ ಭೋಜನ ಮಾಡುವ ಸಂದರ್ಭಗಳಾದ ಮದುವೆ, ಹಬ್ಬ ನಾಮಕರಣ, ಮಧ್ಯಾಹ್ನದ | ಮಕ್ಕಳು ಸಾಮೂಹಿಕವಾಗಿ ಭೋಜನ ಮಾಡುವ ಸಂದರ್ಭಗಳನ್ನು ಅವರ ಅನುಭವದ ಆಧಾರದ ಮೇಲೆ ಪ್ರಶ್ನಿಸುವುದರೊಂದಿಗೆ ಮನವರಿಕೆ ಮಾಡಿಸಿ ಇಂತಹ ಸಂದರ್ಭಗಳಲ್ಲಿ | ಮಕ್ಕಳ ಶಾಲೆ ಮತ್ತು ತರಗತಿಯಲ್ಲಿನ ಅನುಭವ<br>ಮಕ್ಕಳ ಅನುಭವ | • ಶಾಲೆಯಲ್ಲಿ ನೀವು ಯಾವ ಸಂದರ್ಭಗಳಲ್ಲಿ ಸಾಮೂಹಿಕ ಭೋಜನ ಮಾಡುವಿರಿ. | 6 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| ಅನುಸರಿಸಬೇಕಾದ ಕ್ರಮಗಳನ್ನು ರೂಢಿಸಿಕೊಳ್ಳುವರು.<br>• ಆಹಾರ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಮೆಚ್ಚುವರು.<br>ತಮ್ಮ ಜಿಲ್ಲೆಯ ಹಾಗೂ ಸುತ್ತಲಿನ ಜಿಲ್ಲೆಗಳ ಸಾಂಸ್ಕೃತಿಕ ವೈವಿಧ್ಯತೆಯನ್ನು ತಿಳಿಯುವರು. | ಬಿಸಿಊಟ ..... ಇತ್ಯಾದಿ ಸಂದರ್ಭಗಳನ್ನು ಪರಿಚಯಿಸಿ. ಅಲ್ಲಿ ಅನುಸರಿಸಬೇಕಾದ ಕ್ರಮ ಮತ್ತು ರೂಢಿಗಳ ಬಗ್ಗೆ ಅಭ್ಯಾಸ ಮಾಡಿಸುವುದು.<br>• ವಿವಿಧ ಹಬ್ಬಗಳಲ್ಲಿ ತಯಾರಿಸುವ ಆಹಾರ ಮತ್ತು ಸಂಸ್ಕೃತಿಯ ವೈವಿಧ್ಯತೆ ಪರಿಚಯ.<br>• ವಿಭಾಗದ ವಿವಿಧ ಜಿಲ್ಲೆಗಳ ಸಾಂಸ್ಕೃತಿಕ ವೈವಿಧ್ಯತೆಯ ಪರಿಚಯ | ಅನುಸರಿಸಬೇಕಾದ ಕ್ರಮ ರೂಢಿಗಳ ಬಗ್ಗೆ ಚರ್ಚಿಸುವುದು.<br>ಮಕ್ಕಳ ಮನೆಯಲ್ಲಿ ಆಚರಿಸುವ ಹಬ್ಬಗಳಲ್ಲಿ ತಯಾರಿಸುವ ಆಹಾರ ಹಾಗೂ ಆ ಹಬ್ಬದ ಸಂಸ್ಕೃತಿಗೆ ಇರುವ ಸಂಬಂಧವನ್ನು ಅವರ ಅನುಭವದೊಡನೆ ಸಮನ್ವಯಿಕರಿಸಿ ಚರ್ಚಿಸುವುದು.<br>ವಿವಿದೆಡೆ ಇರುವ ಸಾಂಸ್ಕೃತಿಕ ಆಚರಣೆಗಳ ಬಗ್ಗೆ ಚಿತ್ರ ಸಹಿತವಾಗಿ ಚರ್ಚಿಸುವುದು. | ಚಿತ್ರಗಳು | • ಮನೆಯಲ್ಲಿ ನೀವು ಯಾವ ಯಾವ ಸಂದರ್ಭಗಳಲ್ಲಿ ಸಾಮೂಹಿಕ ಭೋಜನ ಮಾಡುವಿರಿ<br>• ಮಧ್ಯಾಹ್ನದ ಬಿಸಿಯೂಟದ ಸಂದರ್ಭದಲ್ಲಿ ಅನುಸರಿಸುವ ರೂಢಿಗಳಾವುವು ?<br>• ಮನೆಯಲ್ಲಿ ಆಚರಿಸುವ ಹಬ್ಬಗಳು ಹಾಗೂ ಆ ಹಬ್ಬದಲ್ಲಿ ಯಾವ ಯಾವ ವಿಶೇಷ ಆಹಾರ ತಯಾರಿಸುತ್ತಾರೆ ಪಟ್ಟಿ ಮಾಡಿ.<br>• ನಿಮ್ಮ ಪ್ರದೇಶದಲ್ಲಿ ಹೆಚ್ಚಾಗಿ ಉಪಯೋಗಿಸುವ ಆಹಾರ ಧಾನ್ಯ ಯಾವುದು? | |
| • ಪ್ರಾಣಿ ಮತ್ತು ಪಕ್ಷಿಗಳ ಆಹಾರಭ್ಯಾಸಗಳ ಬಗ್ಗೆ ಚರ್ಚಿಸುವರು ಇವುಗಳ ಆಹಾರ ಕ್ರಮಕ್ಕೆ ಮತ್ತು ಕೊಕ್ಕು ಹಲ್ಲುಗಳಿಗಿರುವ ಸಂಬಂಧವನ್ನು ಅರಿಯುವರು. | ಸಸ್ಯಹಾರಿ, ಮಾಂಸಹಾರಿ ಮತ್ತು ಮಿಶ್ರಹಾರಿ ಪ್ರಾಣಿಗಳ ವಿಂಗಡನೆ.<br>• ಮಾಂಸಹಾರಿ ಪ್ರಾಣಿಗಳು ಹಾಗೂ ಹಲ್ಲುಗಳ ರಚನೆ.<br>• ಪಕ್ಷಿಗಳ ಆಹಾರಾಭ್ಯಾಸ ಮತ್ತು ಕೊಕ್ಕು. | • ಮಕ್ಕಳು ಸೇವಿಸುವ ಆಹಾರಗಳನ್ನು ಪಟ್ಟಿ ಮಾಡಿಸಿ ಅವುಗಳನ್ನು ಸಸ್ಯಹಾರಿ, ಮಾಂಸಹಾರಿ ಮತ್ತು ಮಿಶ್ರಹಾರಿಗಳನ್ನು ವರ್ಗಿಕರಿಸಿ ಚರ್ಚಿಸುವುದು.<br>• ಪ್ರಾಣಿಗಳ ಚಿತ್ರಪಟ ಪ್ರದರ್ಶಿಸಿ ಅವುಗಳನ್ನು ಸಸ್ಯಹಾರಿ, ಮಾಂಸಹಾರಿ ಮತ್ತು ಮಿಶ್ರಹಾರಿ ಪ್ರಾಣಿಗಳಾಗಿ ವಿಂಗಡಿಸಲು ಉತ್ತೇಜಿಸುವುದು. | ಮಕ್ಕಳ ಅನುಭವ<br>ಪ್ರಾಣಿಗಳ ಚಿತ್ರಪಟ | • ನೀವು ಯಾವ ಯಾವ ಆಹಾರ ಸೇವಿಸುತ್ತೀರಿ.<br>• ಸಸ್ಯಹಾರಿ ಆಹಾರ ಎಂದರೇನು?<br>• ಮಾಂಸಹಾರಿ ಆಹಾರ ಎಂದರೇನು? | 8 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | | • ಮಾಂಸಹಾರಿ ಪ್ರಾಣಿಗಳ ಚಿತ್ರಪಟದ ಸಹಾಯದಿಂದ, ಈ ಪ್ರಾಣಿಗಳ ಹಲ್ಲುಗಳ ರಚನೆ ಆಹಾರಭ್ಯಾಸಕ್ಕೆ ಹೊಂದಿಕೊಂಡಿರುವುದರ ಬಗ್ಗೆ ಚರ್ಚೆ.<br>• ಪಕ್ಷಿಗಳ ಚಿತ್ರಪಟದ ಸಹಾಯದಿಂದ ಇವುಗಳ ಕೊಕ್ಕು ಆಹಾರಭ್ಯಾಸಕ್ಕೆ ಹೇಗೆ ಹೊಂದಿಕೊಂಡಿದೆ ಎಂಬುದರ ಬಗ್ಗೆ ಚರ್ಚೆ. | ಮಾಂಸಹಾರಿ ಪ್ರಾಣಿಗಳ ಚಿತ್ರಪಟ<br>ಪಕ್ಷಿಗಳ ಚಿತ್ರಪಟ | • ಮಿಶ್ರಹಾರಿ ಆಹಾರ ಎಂದರೇನು?<br>• ಈ ಚಿತ್ರಪಟದಲ್ಲಿ ಪ್ರಾಣಿಗಳನ್ನು ಸಸ್ಯಹಾರಿ, ಮಾಂಸಹಾರಿ ಮತ್ತು ಮಿಶ್ರಹಾರಿಗಳಾಗಿ ವಿಂಗಡಿಸಿ.<br>• ಮಾಂಸಹಾರಿ ಪ್ರಾಣಿಗಳಲ್ಲಿ ಹಲ್ಲುಗಳು ಮೊಣಚಾಗಿರಲು ಕಾರಣಃವೇನು?<br>• ಹುಲಿಯ ಹಲ್ಲುಗಳು ಮೊಣಚಾಗಿರುವುದರಿಂದ ಆಗುವ ಅನುಕೂಲವೇನು?<br>• ಪಕ್ಷಿಗಳಿಗೆ ಕೊಕ್ಕು ನಿಂದಾಗುವ ಉಪಯೋಗವೇನು? | |
| **3. ವಸತಿ** | | | | | |
| • ಕಾಲದಿಂದ ಕಾಲಕ್ಕೆ ಮನೆಗಳು ನಿರ್ಮಾಣದಲ್ಲಿರುವ ವ್ಯತ್ಯಾಸಗಳನ್ನು ಗುರುತಿಸುವರು.<br>• ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿನ | • ಮನೆಗಳು ಕಾಲದಿಂದ ಕಾಲಕ್ಕೆ ನಿರ್ಮಾಣದಲ್ಲಿರುವ ವ್ಯತ್ಯಾಸಗಳು. ಉದಾ : ಗುಡಿಸಲು – ಕಚ್ಚಾ – ಮನೆ – ಮಹಡಿ ಮನೆ ಇತ್ಯಾದಿಗಳನ್ನು ಪರಿಚಯಿಸುವುದು. | • ವಿವಿಧ ಮನೆಗಳ ಚಿತ್ರಪಟಗಳ ಸಹಾಯದಿಂದ ಕಾಲದಿಂದ ಕಾಲಕ್ಕೆ ಮನೆಗಳ ನಿರ್ಮಾಣದಲ್ಲಿ ವ್ಯತ್ಯಾಸಗಳಾಗಿರುವುದರ ಬಗ್ಗೆ ಪರಿಚಯಿಸುವುದು.<br>• ಮಕ್ಕಳ ಅನುಭವದ ಆಧಾರದ ಮೇಲೆ ಪ್ರಶ್ನಿಸುವುದರೊಂದಿಗೆ ಮನೆಗಳ ನಿರ್ಮಾಣದಲ್ಲಿ ಕಾಲದಿಂದ ಕಾಲಕ್ಕೆ ವ್ಯತ್ಯಾಸಗಳಾಗಿರುವುದನ್ನು ಗುರುತಿಸುವಂತೆ ಮಾಡುವುದು. | ವಿವಿಧ ಮನೆಗಳ ಚಿತ್ರಪಟ<br>ಮಕ್ಕಳ ಅನುಭವ | • ಈ ಚಿತ್ರಗಳನ್ನು ಗಮನಿಸಿ, ಮನೆಗಳ ವಿಧಗಳನ್ನು ಬರೆಯಿರಿ<br>• ನೀನು ನೋಡಿರುವ ಮನೆಗಳ ವಿಧಗಳನ್ನು ಬರೆ. | 8 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| ಮನೆಗಳಿಗಿರುವ ವ್ಯತ್ಯಾಸವನ್ನು ಕಂಡುಕೊಳ್ಳುವರು.<br>• ನಗರಗಳಲ್ಲಿರುವ ಬಹುಮಹಡಿ ಕಟ್ಟಡ ಮತ್ತು ಕೊಳಚೆ ಪ್ರದೇಶಗಳ ಬಗ್ಗೆ ತಿಳಿಯುವರು | • ಗ್ರಾಮಗಳಲ್ಲಿ ಮನೆಗಳು ಸಾಮಾನ್ಯವಾಗಿ ಗುಡಿಸಲು, ಕಚ್ಚಾ ಮನೆ, ಮಹಡಿ ಮನೆಗಳು ಮತ್ತು ನಗರ ಪ್ರದೇಶಗಳಲ್ಲಿನ ಮನೆಗಳು, ಬಹುಮಹಡಿ ಕಟ್ಟಡಗಳಿಗೆ ಇರುವ ವ್ಯತ್ಯಾಸಗಳು.<br>• ನಗರಗಳಲ್ಲಿರುವ ಬಹುಮಹಡಿ ಕಟ್ಟಡ ಮತ್ತು ಕೊಳಚೆ ಪ್ರದೇಶಗಳಲ್ಲಿನ ಗುಡಿಸಲು, ಕಚ್ಚಾ ಮನೆಗಳ ಬಗ್ಗೆ ಪರಿಚಯ. | • ಎರಡು ಚಿತ್ರಪಟಗಳ ಸಹಾಯದಿಂದ ಗ್ರಾಮದ ಮತ್ತು ನಗರದ ಪ್ರದೇಶಗಳಲ್ಲಿನ ಮನೆಗಳಿರುವ ವ್ಯತ್ಯಾಸ ಪರಿಚಯಿಸುವುದು.<br>• ಚಿತ್ರಪಟಗಳ ಸಹಾಯದಿಂದ ನಗರಗಳಲ್ಲಿರುವ ಬಹುಮಹಡಿ ಕಟ್ಟಡ ಮತ್ತು ಕೊಳಚೆ ಪ್ರದೇಶಗಳ ಬಗ್ಗೆ ವಿವರಿಸುವುದು. | ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿನ ಚಿತ್ರಪಟ<br><br>ನಗರದಲ್ಲಿನ ಬಹುಮಹಡಿ ಮತ್ತು ಕೊಳಚೆ ಪ್ರದೇಶದಲ್ಲಿನ ಚಿತ್ರಪಟ | • ಈ ಕೆಳಗಿನ ಮನೆಗಳ ವಿಧಗಳನ್ನು ಅನುಕ್ರಮವಾಗಿ ಬರೆ. ಬಹುಮಹಡಿ, ಗುಡಿಸಲು, ಮಹಡಿ ಮನೆ, ಕಚ್ಚಾಮನೆ.<br>• ಗ್ರಾಮ ಮತ್ತು ನಗರ ಪ್ರದೇಶದ ಚಿತ್ರಗಳನ್ನು ಗಮನಿಸಿ ಈ ಎರಡು ಪ್ರದೇಶಗಳೆಲ್ಲಿನ ಮನೆಗಳ ವಿಧಗಳಿಗೆ ಇರುವ ವ್ಯತ್ಯಾಸಗಳನ್ನು ತಿಳಿಸಿ.<br>• ಬಹುಮಹಡಿ ಕಟ್ಟಡ ಎಂದರೇನು?<br>• ಕೊಳಚೆ ಪ್ರದೇಶ ಎಂದರೇನು?<br>• ಬಹುಮಹಡಿ ಕಟ್ಟಡಗಳಿಗೂ ಕೊಳಚೆ ಪ್ರದೇಶಗಳಿಗೆ ಇರುವ ವ್ಯತ್ಯಾಸವೇನು? | |
| ಗ್ರಾಮೀಣ ಮತ್ತು ನಗರದ ತ್ಯಾಜ್ಯಗಳನ್ನು ವರ್ಗೀಕರಿಸುವರು. ತಾಜ್ಯಗಳ ಸರಿಯಾದ ವಿಲೇವಾರಿ ಕ್ರಮಗಳನ್ನು ಅರಿಯುವರು. ಕಸದ ನಿಯಂತ್ರಣದ ಅಭ್ಯಾಸಗಳನ್ನು ರೂಢಿಸಿಕೊಳ್ಳುವರು. | ಗ್ರಾಮೀಣ ತ್ಯಾಜ್ಯಗಳಾದ ಸಗಣಿ, ಕಸ – ಕಡ್ಡಿ, ಧಾನ್ಯಗಳ ಒಟ್ಟು .....ಇತ್ಯಾದಿ. ನಗರ ತ್ಯಾಜ್ಯಗಳಾದ ಪ್ಲಾಸ್ಟಿಕ್ ಕವರ್, ಪ್ಲಾಸ್ಟಿಕ್ ವಸ್ತುಗಳು, ರಾಸಾಯನಿಕಗಳು ..... | • ಸ್ಥಳೀಯ ತ್ಯಾಜ್ಯಗಳನ್ನು ವೀಕ್ಷಣೆ ಮಾಡಿ ವರದಿ ಮಾಡುವಂತೆ ಮಕ್ಕಳಿಗೆ ತಿಳಿಸುವುದು<br>• ಗ್ರಾಮೀಣ ಮತ್ತು ನಗರ ತ್ಯಾಜ್ಯಗಳ ಚಿತ್ರಪಟದ ಸಹಾಯದಿಂದ ಈ ಎರಡು ಪ್ರದೇಶಗಳಲ್ಲಿನ ತ್ಯಾಜ್ಯಗಳನ್ನು ವರ್ಗೀಕರಿಸುವುದು.<br>• ವಿವಿಧ ರೀತಿಯ ಕಸಗಳನ್ನು ಪರಿಚಯಿಸುವುದು. | ವೀಕ್ಷಣೆ<br><br>ಗ್ರಾಮೀಣ ಮತ್ತು ನಗರ ತ್ಯಾಜ್ಯಗಳ ಚಿತ್ರಪಟ | • ನಿಮ್ಮ ಮನೆಯ ಸುತ್ತಮುತ್ತಲಿನ ತ್ಯಾಜ್ಯಗಳನ್ನು ಪಟ್ಟಿ ಮಾಡಿ.<br>• ನಿಮ್ಮ ತರಗತಿಯಲ್ಲಿನ ಕಸಗಳನ್ನು ಪಟ್ಟಿ ಮಾಡಿ.<br>• ಚಿತ್ರಪಟವನ್ನು ವೀಕ್ಷಿಸಿ. | 8 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | ಇತ್ಯಾದಿ. ವಿವಿಧ ರೀತಿಯ ಕಸಗಳು ಒಣಕಸ, ಹಸಿಕಸ, ವಿಷಕಾರಿ ಕಸಗಳ ಪರಿಚಯ. ತ್ಯಾಜ್ಯದ ವಿಲೇವಾರಿ ಕ್ರಮ ಮತ್ತು ನಿಯಂತ್ರಣದ ಅಭ್ಯಾಸಗಳನ್ನು ರೂಢಿಸುವ ಪ್ರಯತ್ನ. | • ಮಕ್ಕಳ ಅನುಭವದ ಆಧಾರದ ಮೇಲೆ ತಾಜ್ಯದ ವಿಲೇವಾರಿ ಕ್ರಮ ಮತ್ತು ನಿಯಂತ್ರಣದ ಅಭ್ಯಾಸಗಳನ್ನು ರೂಢಿಸಿಕೊಳ್ಳುವಂತೆ ಮಾಡುವುದು.<br>• ನಿಮ್ಮ ಬೀದಿಯ ತ್ಯಾಜ್ಯ ಸಂಗ್ರಹಣ ತೊಟ್ಟಿಯ ನಿರ್ವಹಣೆ ಗಮನಿಸಿ ವಿವರಿಸಿ.<br>• ತಮ್ಮ ಊರಿನ ನೈರ್ಮಲ್ಯಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಚರ್ಚಿಸುವರು. | ಮಕ್ಕಳ ಅನುಭವ | ಗ್ರಾಮೀಣ ಮತ್ತು ನಗರ ತ್ಯಾಜ್ಯಗಳನ್ನು ಪಟ್ಟಿ ಮಾಡಿ.<br>• ವಿವಿಧ ರೀತಿಯ ಕಸಗಳಾವುವು ?<br>• ನಿಮ್ಮ ಮನೆಯಲ್ಲಿನ ಕಸವನ್ನು ಹೇಗೆ ವಿಲೇವಾರಿ ಮಾಡುವೆ ?<br>• ನಿಮ್ಮ ತರಗತಿಯಲ್ಲಿನ ಕಸವನ್ನು ಹೇಗೆ ವಿಲೇವಾರಿ ಮಾಡುವೆ<br>• ತ್ಯಾಜ್ಯ ಎಂದರೇನು? | |
| • ಪ್ರಾಣಿಗಳ ಆವಾಸ ಸ್ಥಾನ ಮತ್ತು ವಸತಿಗಳ ವೈವಿಧ್ಯತೆ ಮತ್ತು ಅವುಗಳ ಉದ್ದೇಶವನ್ನು ಪತ್ತೆ ಮಾಡುವರು.<br>ಪಕ್ಷಿ ಮತ್ತು ಗೂಡುಗಳ ರಚನೆ. ಅದಕ್ಕೆ ಬಳಸುವ ಸಾಮಗ್ರಿಗಳಲ್ಲಿನ ವೈವಿಧ್ಯತೆಯನ್ನು ಗುರುತಿಸುವರು. | ಕಾಡು, ನೀರು, ಹಿಮ, ಮರುಭೂಮಿಯಲ್ಲಿ ವಾಸಿಸುವ ಪ್ರಾಣಿಗಳ ಬಗ್ಗೆ ತಿಳಿಸುವುದು. ವಸತಿ ವೈವಿಧ್ಯತೆಗೆ ಅನುಗುಣವಾಗಿ ಪ್ರಾಣಿಗಳ ಶರೀರದ ರಚನೆ.<br>ಪಕ್ಷಿಗಳು ಗೂಡುಗಳನ್ನು ಕಟ್ಟಲು ಬಳಸುವ ಸಾಮಗ್ರಿಗಳ ಪರಿಚಯ. ಉದಾ : ಗೀಜಗ, ಗುಬ್ಬಿ ಕಾಗೆ...... | ಭೂಮಿಯ ಮೇಲಿನ ವಿವಿಧ ಆವಾಸಗಳಲ್ಲಿ ಕಂಡು ಬರುವ ಪ್ರಾಣಿಗಳನ್ನು ಮಕ್ಕಳಿಗೆ ಪರಿಚಯಿಸುವುದು. ವಿವಿಧ ಆವಾಸಗಳಲ್ಲಿನ ವೈವಿಧ್ಯತೆಯನ್ನು ಚಿತ್ರಗಳ ಸಹಾಯದಿಂದ ವಿವರಿಸುವುದು ಹಿಮ ಕರಡಿ ದೇಹವು ಅಲ್ಲಿನ ಆವಾಸಕ್ಕೆ ಹೇಗೆ ಹೊಂದಾಣಿಕೆಯಾಗಿದೆ ಈ ರೀತಿ ಪ್ರಶ್ನೆಗಳೊಂದಿಗೆ ಚರ್ಚಿಸುವುದು.<br>• ಹಕ್ಕಿಗಳ ಗೂಡುಗಳನ್ನು ವೀಕ್ಷಿಸಲು ಮಕ್ಕಳಿಗೆ ಅವಕಾಶ ನೀಡುವುದು. ನಂತರ ಗೂಡುಗಳ ಬಗ್ಗೆ ಚರ್ಚಿಸುವುದು.<br>• ಹಕ್ಕಿಗಳು ಗೂಡು ಕಟ್ಟಲು ಬಳಸುವ ಸಾಮಗ್ರಿಗಳ ಪಟ್ಟಿ ತಯಾರಿಸುವುದು. | ವಿವಿಧ ಆವಾಸಸ್ಥಾನಗಳ ಚಿತ್ರಗಳು<br>ಪ್ರಾಣಿಗಳ ಚಿತ್ರಗಳು<br>ಹಕ್ಕಿಯ ಗೂಡುಗಳು<br>ಮಕ್ಕಳ ಅನುಭವ | • ಒಂಟೆಯು ಮರುಭೂಮಿಗೆ ಹೇಗೆ ಹೊಂದಾಣಿಕೆಯಾಗಿದೆ?<br>• ಚಿಪ್ಪು ಹಂದಿಯ ಆಹಾರವೇನು?<br>• ಪ್ರಾಣಿಗಳ ವಿವಿಧ ಆವಾಸ ಸ್ಥಾನಗಳನ್ನು ಹೆಸರಿಸಿ.<br>• ನೀನು ನೋಡಿರುವ ಹಕ್ಕಿಗಳ ಗೂಡುಗಳನ್ನು ಹೆಸರಿಸು.<br>• ಹಕ್ಕಿಗಳು ಗೂಡು ಕಟ್ಟಲು ಬಳಸುವ ಸಾಮಗ್ರಿಗಳಾವುವು? | 6 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಸ್ಥಳೀಯ ಗುರುತುಗಳಿಗೆ ಅನುಗುಣವಾಗಿ ದಿಕ್ಕನ್ನು ಸೂಚಿಸುವರು.<br>• ನಕ್ಷೆ ಬಿಡಿಸುವ ಪ್ರಾಥಮಿಕ ಹಂತಗಳನ್ನು ಮತ್ತು ಸ್ಥಳವನ್ನು ಗುರ್ತಿಸಲು ವಿವಿಧ ಚಿಹ್ನೆಗಳನ್ನು ಬಳಸಿ ನಕ್ಷೆಯನ್ನು ರಚಿಸುವರು. | ತನ್ನ ಸುತ್ತಲಿನಲ್ಲಿರುವ ದೇವಾಲಯ, ಪಂಚಾಯಿತಿ, ಕೆರೆ, ಶಾಲೆ, ಅಂಗಡಿ .... ಇತ್ಯಾದಿ ಗುರುತುಗಳನ್ನು ಆಧರಿಸಿ ದಿಕ್ಕುಗಳನ್ನು ಸೂಚಿಸುವುದು. ನಕ್ಷೆ ರಚನೆಯ ಪ್ರಾಥಮಿಕ ಹಂತಗಳು – ದೂರ, ದಿಕ್ಕು, ವಸ್ತು ಸ್ಥಳವನ್ನು ಗುರುತಿಸುವುದು, ಸ್ಥಾನದ ಕಲ್ಪನೆ – ಚಿಹ್ನೆಗಳು. ಉದಾ : ಮನೆ, ಮರ, ಶಾಲೆ, ಬಾವಿ, ಬಳಸಿ ಇತ್ಯಾದಿ ನಕ್ಷೆ ರಚನೆ. | • ಸೂರ್ಯೋದಯದ ಸಹಾಯದಿಂದ ದಿಕ್ಕುಗಳನ್ನು ಗುರುತಿಸುವುದು. ನಂತರ ಸ್ಥಳೀಯ ಗುರುತಗಳಿಗೆ ಅನುಗುಣವಾಗಿ ದಿಕ್ಕನ್ನು ಸೂಚಿಸುವುದು.<br>ಉದಾ : ನನ್ನ ಮನೆಯ ದಕ್ಷಿಣದಲ್ಲಿ ಊರಿನ ಕೆರೆ ಇದೆ ಈ ಚಟುವಟಿಕೆಗಳನ್ನು ಮಾಡಿಸುವುದು.<br>ನಕ್ಷೆ ರಚನೆಯಲ್ಲಿ ತಿಳಿದಿರಬೇಕಾದ ಅಂಶಗಳನ್ನು ಕುರಿತು ಚರ್ಚಿಸುವುದು.<br>ಮಕ್ಕಳಿಗೆ ಸಂಕೇತಗಳನ್ನು ಪರಿಚಯಿಸಿ ನಕ್ಷೆ ರಚನೆ ಮಾಡುವುದು. ಮಕ್ಕಳ ಮನೆಯಿಂದ ಶಾಲೆಗೆ ಬರುವ ದಾರಿಯ ನಕ್ಷೆಯನ್ನು ರಚನೆ ಮಾಡಿಸುವುದು. | ಸ್ಥಳೀಯ ಪರಿಸರ<br>ಮಕ್ಕಳ ದಿನನಿತ್ಯದ ಅನುಭವಗಳು<br>ನಕ್ಷೆ ರಚನೆಗೆ ಅಗತ್ಯವಾದ ಸಮಗ್ರಿಗಳು | • ನಿನ್ನ ಮನೆಯ ಪೂರ್ವದಲ್ಲಿ ಏನಿದೆ?<br>• ನಿಮ್ಮ ಊರಿನ ದಕ್ಷಿಣದಲ್ಲಿ ಯಾವ ಮುಖ್ಯ ಸ್ಥಳವಿದೆ?<br>• ನಿಮ್ಮ ಊರಿನ ಹಾಲಿನ ಡೈರಿ ಯಾವ ದಿಕ್ಕಿನಲ್ಲಿದೆ.<br>• ನೀನು ಶಾಲೆಯಿಂದ ಮನೆಗೆ ಹೋಗುವ ದಾರಿಯನ್ನು ಮತ್ತು ನಿನ್ನ ಮನೆಯ ನೆರೆ ಹೊರೆಯನ್ನು ನಕ್ಷೆಯ ಮೂಲಕ ಚಿತ್ರಿಸು.<br>• ಈ ಸಂಕೇತಗಳಿಗೆ ಅರ್ಥ ಬರೆ / ಇವು ಏನನ್ನು ಸೂಚಿಸುತ್ತದೆ.<br> | 8 |
| **4. ನೀರು** | | | | | |
| • ಕುಡಿಯಲು ಯೋಗ್ಯವಾದ ಮತ್ತು ಕುಡಿಯಲು ಆಗದ ನೀರಿನ ಮೂಲಗಳನ್ನು ವರ್ಗೀಕರಿಸುವರು. | • ಕುಡಿಯಲು ಯೋಗ್ಯವಾದ ಅಂದರೆ ಶುದ್ಧವಾಗಿರುವ ನದಿ, ಕೆರೆ, ಕಾಲುವೆ, ಬಾವಿ, ಸರೋವರ, ಕೊಳವೆ ಬಾವಿ ಮುಂತಾದವು ಮತ್ತು ಕುಡಿಯಲು ಆಗದ ಅಂದರೆ ಸಮುದ್ರದ ನೀರು, ಇವುಗಳ ವರ್ಗೀಕರಣ. | • ನೀರಿನ ಉಪಯೋಗಗಳೇನು? ನೀರು ಎಲ್ಲೆಲ್ಲಿ ದೊರೆಯುತ್ತದೆಂದು ಪ್ರಶ್ನೆಗಳನ್ನು ಕೇಳುತ್ತಾ ಚರ್ಚೆ ಮಾಡುತ್ತಾ ಕುಡಿಯಲು ಯೋಗ್ಯವಾದ ಮತ್ತು ಕುಡಿಯಲು ಆಗದ ನೀರಿನ ಮೂಲಗಳ ವರ್ಗೀಕರಣದ ಬಗ್ಗೆ ಕಲ್ಪನೆಯನ್ನು ಮೂಡಿಸುವುದು. | ನೀರಿನ ಮೂಲಗಳು, ಚರ್ಚೆ, ಪ್ರಶ್ನೆಗಳು.<br>ಮಕ್ಕಳ ಅನುಭವಗಳು. | • ಸಮುದ್ರದ ನೀರು ಕುಡಿಯಲು ಯೋಗ್ಯವಲ್ಲ, ಕಾರಣವೇನು?<br>• ನಿಮ್ಮ ಊರಿನಲ್ಲಿ ಸಿಗುವ ನೀರಿನ ಮೂಲಗಳನ್ನು ಹೆಸರಿಸು. | 5 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | ಭೂಮಿಯಲ್ಲಿ ಸಿಹಿನೀರಿನ ಪ್ರಮಾಣ ಕಡಿಮೆ ಇದೆ ಎಂದು ಮನದಟ್ಟು ಮಾಡಿಸುವುದು. | • ಭೂಮಿಯಲ್ಲಿ ದೊರೆಯುವ ನೀರಿನ ಪ್ರಮಾಣದಲ್ಲಿ ಸಿಹಿ ನೀರು ಮತ್ತು ಕುಡಿಯಲು ಯೋಗ್ಯವಲ್ಲದ ನೀರಿನ ಬಗ್ಗೆ ತಿಳಿಯುವುದು. | | | |
| • ನೀರಿನ ಮಾಲಿನ್ಯದ ಕಾರಣಗಳು ಮತ್ತು ದುಷ್ಪರಿಣಾಮಗಳನ್ನು ಅರಿಯುವರು.<br>• ನೀರಿನಿಂದ ಹರಡುವ ರೋಗಗಳನ್ನು ಪಟ್ಟಿ ಮಾಡುವರು<br>ನಿರ್ಜಲೀಕರಣದ ಕಾರಣಗಳು ಹಾಗೂ ಪುನರ್ಜಲೀಕರಣ ದ್ರಾವಣ ತಯಾರಿಕೆ ಅರಿಯುವರು. | ನೀರಿನ ಮಾಲಿನ್ಯಕ್ಕೆ ಕಾರಣಗಳಾದ, ಕೈಗಾರಿಕೆಗಳು, ಚರಂಡಿ ನೀರು, ನೀರಿನ ಬಳಿ ನಡೆಯುವ ದಿನನಿತ್ಯದ ಕಾರ್ಯ ಚಟುವಟಿಕೆಗಳು, ಹೊಲ ಗದ್ದೆಗಳಿಗೆ ಬಳಸುವ ಕೀಟನಾಶಕಗಳು, ಇತ್ಯಾದಿಗಳಿಂದ ಉಂಟಾಗುವ ದುಷ್ಪರಿಣಾಮ ಗಳಿಂದ ಉಂಟಾಗುವ ರೋಗಗಳಿಂದ ವಾಂತಿ, ಭೇದಿ, ಕಾಲರಾ, ಕಾಮಾಲೆ ಮುಂತಾದ ರೋಗಗಳನ್ನು ಪಟ್ಟಿ ಮಾಡುವುದು.<br>ಪುನರ್ಜಲೀಕರಣದ ಅವಶ್ಯಕತೆ ಮನಗಾಣುವರು. | • ನೀರಿನ ಮಾಲಿನ್ಯಕ್ಕೆ ಕಾರಣಗಳೇನೆಂಬುದನ್ನು ಮಕ್ಕಳೊಂದಿಗೆ ಚರ್ಚಿಸುವುದು.<br>• ನೀರಿನಿಂದ ಉಂಟಾಗಬಹುದಾದ ದುಷ್ಪರಿಣಾಮಗಳನ್ನು ಪಟ್ಟಿ ಮಾಡಿಸುವುದು.<br>• ನೀರಿನಿಂದ ಉಂಟಾಗಬಹುದಾದ ರೋಗಗಳನ್ನು ಪಟ್ಟಿ ಮಾಡಿಸುವುದು.<br>• ನೀರಿನ ಮಾಲಿನ್ಯಕ್ಕೆ ಕಾರಣ ಮತ್ತು ದುಷ್ಪರಿಣಾಮಗಳ ಬಗ್ಗೆ ಊರಿನ ಹಿರಿಯರೊಂದಿಗೆ ಚರ್ಚಿಸುವುದು.<br>• ಸ್ಥಳೀಯ ಕೈಗಾರಿಕೆಗಳಿಗೆ ಭೇಟಿ ನೀಡಿ ಅಲ್ಲಿನ ಪರಿಸರ ಮಲಿನಕ್ಕೆ ಹೇಗೆ ಕಾರಣವಾಗುತ್ತಿದೆ ಎಂದು ತಿಳಿದುಕೊಳ್ಳುವುದು.<br>• ಪುನರ್ಜಲೀಕರಣ ದ್ರಾವಣ ತಯಾರಿಕೆ ಅರಿಯುವರು. | ಮಕ್ಕಳೊಂದಿಗೆ ಚರ್ಚೆ.<br>ಹಿರಿಯರೊಂದಿಗೆ ಚರ್ಚೆ.<br>ಓ.ಆರ್.ಎಸ್ ಪೊಟ್ಟಣ | • ನಿಮ್ಮ ಊರಿನಲ್ಲಿರುವ ಕೆರೆಯ ನೀರು ಹೇಗೆ ಮಲಿನವಾಗುತ್ತದೆ?<br>• ನೀರಿನ ಮಲಿನತೆಯಿಂದ ಉಂಟಾಗುವ ದುಷ್ಪರಿಣಾಮ ಗಳನ್ನು ಪಟ್ಟಿ ಮಾಡಿ.<br>• ನೀರಿನಿಂದ ಹರಡುವ / ಬರುವ ರೋಗಗಳಾವುವು?<br>• ಅತಿಭೇದಿಯಾಗಿ ನಿರ್ಜಲೀಕರಣವಾದಾಗ ಪ್ರಥಮ ಚಿಕಿತ್ಸೆಯಾಗಿ ಏನು ಮಾಡುವಿರಿ. | 5 |
| ಜಲಚಕ್ರವನ್ನು ವಿವರಿಸುವರು. | • ಆವೀಕರಣ, ಸಾಂದ್ರಿಕರಣ, ಜಲಚಕ್ರದ ಬಗ್ಗೆ ತಿಳಿಯುವರು. | • ನೀರಿನ ಉಪಯೋಗಗಳ ಬಗ್ಗೆ ತಿಳಿಸುತ್ತಾ ನೀರು ಹೇಗೆ ಆವೀಕರಣ, ಸಾಂದ್ರಿಕರಣಗೊಳ್ಳುತ್ತದೆ ಇದರಿಂದ ಜಲಚಕ್ರ ಹೇಗೆ ರೂಪಗೊಳ್ಳುತ್ತವೆಂದು ಕಲ್ಪನೆಯನ್ನು ಸರಳ ಪ್ರಯೋಗಗಳ ಮೂಲಕ ವಿವರಿಸುವುದು. | ಪ್ರಯೋಗಗಳು.<br>ಮಕ್ಕಳ ಅನುಭವಗಳು.<br>ಹಾಡುಗಳು. | 1. ಆವಿಕರಣ ಎಂದರೇನು?<br>2. ಸಾಂದ್ರಿಕರಣ ಎಂದರೇನು?<br>3. ಜಲ ಚಕ್ರವೆಂದರೇನು? | |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ನೀರಿನ ಅಭಾವ ಮತ್ತು ನೀರಿನ ಅಪವ್ಯಯದಿಂದ ಉಂಟಾಗುವ ಸಮಸ್ಯೆಗಳನ್ನು ಪಟ್ಟಿ ಮಾಡುವರು.<br>ನೀರಿನ ಮರುಬಳಕೆ ಮತ್ತು ಮಳೆಕೊಯ್ಲಿನ ಮಹತ್ವವನ್ನು ಅರಿಯುವರು. | ನೀರಿನ ಅಭಾವ (ಸಿಹಿ ನೀರಿನ) ಕ್ಕೆ ಕಾರಣಗಳು, ನೀರಿನ ಅಪವ್ಯಯ (ನೀರಿನ ಪೋಲು) ದಿಂದ ಉಂಟಾಗುವ ಸಮಸ್ಯೆಗಳನ್ನು ಪಟ್ಟಿ ಮಾಡಿ ತಿಳಿಯುವುದು.<br>ಉಪಯೋಗಿಸಿದ ನೀರನ್ನು ಮರು ಬಳಕೆ ಮಾಡಿಕೊಳ್ಳುವ ವಿಧಾನಗಳು. ಅಂದರೆ, ಬಟ್ಟೆ ಒಗೆದ ನೀರನ್ನು ಸಸ್ಯಗಳಿಗೆ, ಶೌಚಾಲಯಗಳಿಗೆ ಉಪಯೋಗಿಸುವುದು ಹಾಗೂ ಮಳೆ ಕೊಯ್ಲಿನ ಮಹತ್ವವನ್ನು ತಿಳಿಯುವುದು. | • ಹಾಡಿನ ಮೂಲಕ ಜಲಚಕ್ರದ ಕಲ್ಪನೆಯನ್ನು ಮೂಡಿಸುವುದು.<br>ಉದಾ : (1) ಸಾಗರದ ನೀರು ಕಾದು ಆವಿಯಾಗಿ.<br>(2) ಭುವಿಯ ಮೂರು ಭಾಗ ನೀರು ತುಂಬಿದೆ!<br>• ನೀರಿನ ಅಭಾವಕ್ಕೆ ಕಾರಣಗಳು, ನೀರಿನ ಅಪವ್ಯಯದಿಂದ ಉಂಟಾಗುವ ಸಮಸ್ಯೆಗಳನ್ನು ಪಟ್ಟಿ ಮಾಡಿಸುವುದು. ಅವುಗಳ ಬಗ್ಗೆ ಚರ್ಚೆ ನಡೆಸುವುದು.<br>• ನೀರಿನ ಮರುಬಳಕೆ ಮತ್ತು ಮಳೆಕೊಯ್ಲಿನ ಮಹತ್ವವನ್ನು ಚರ್ಚೆ ಮಾಡಿ ವಿಷಯವನ್ನು ತಿಳಿಸುವುದು.<br>• ಸ್ಥಳೀಯವಾಗಿ ಇರುವ ಮಳೆಕೊಯ್ಲಿನ ಅನುಷ್ಠಾನ ಬೆನ್ನು ಮತ್ತು ಅದರ ಉಪಯೋಗವನ್ನು ಕುರಿತು ತಿಳಿಸಲು ಅಲ್ಲಿಗೆ ಕರೆದುಕೊಂಡು ಹೋಗುವುದು. | ಚರ್ಚಿಸುವುದು.<br>ಸ್ಥಳೀಯ ಭೇಟಿ. | • ನೀರಿನ ಅಭಾವಕ್ಕೆ ಕಾರಣಗಳನ್ನು ಪಟ್ಟಿ ಮಾಡಿ.<br>• ನೀರಿನ ಅಪವ್ಯಯದಿಂದ ಉಂಟಾಗುವ ಸಮಸ್ಯೆಗಳನ್ನು ಪಟ್ಟಿ ಮಾಡಿ.<br>• ಮಳೆಕೊಯ್ಲಿನ ಮಹತ್ವವನ್ನು ಬರೆಯಿರಿ.<br>• ನೀನು ನೀರನ್ನು ಮರುಬಳಕೆ ಮಾಡಿಕೊಳ್ಳಬಹುದಾದ 2 ಸಂದರ್ಭಗಳನ್ನು ಬರೆಯಿರಿ. | 5 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ದಿನನಿತ್ಯ ಬಳಸುವ ನೀರನ್ನು ಅನೌಪಚಾರಿಕ ಅಳತೆಗಳ ಮೂಲಕ ಅಳೆಯುವರು. | ಪ್ರತಿನಿತ್ಯ ಬಳಸುವ ನೀರನ್ನು ಅನೌಪಚಾರಿಕ ಅಳತೆಗಳ ಮೂಲಕ ಅಳತೆ ಮಾಡುವುದು.<br>ಉದಾ : ತಂಬಿಗೆ, ಲೋಟ, ಬಕೇಟ್, ಬಿಂದಿಗೆ ಇತ್ಯಾದಿ. | • ದಿನನಿತ್ಯ ಬಳಸುವ ನೀರನ್ನು ಅನೌಪಚಾರಿಕ ಅಳತೆಗಳಿಂದ ತಂಬಿಗೆ, ಲೋಟ, ಬಕೆಟ್, ಬಿಂದಿಗೆ ಇತ್ಯಾದಿಗಳ ಮೂಲಕ ಅಳತೆ ಮಾಡುವ ಕ್ರಮವನ್ನು ಚರ್ಚೆ ಮಾಡಿ ತಿಳಿಸುವುದು. | ಅನೌಪಚಾರಿಕ - ಅಳತೆಗಳು | • ನೀನು ಮುಖ ತೊಳೆಯಲು ಎಷ್ಟು ತಂಬಿಗೆ ನೀರನ್ನು ಉಪಯೋಗಿಸುತ್ತೀಯಾ?<br>• ನೀನು ಕೈ ಕಾಲು ತೊಳೆಯಲು ಎಷ್ಟು ತಂಬಿಗೆ ನೀರನ್ನು ಉಪಯೋಗಿಸುವೆ ?<br>• ಒಂದು ದಿನದಲ್ಲಿ ಈ ಕೆಳಗಿನ ಕೆಲಸಗಳಿಗೆ ನೀನು ಬಳಸುವ ನೀರಿನ ಪ್ರಮಾಣವನ್ನು ತಂಬಿ ಬಕೆಟ್‌ಗಳಲ್ಲಿ ಲೆಕ್ಕ ಹಾಕಿ ಬರೆ.<br>(1) ಶೌಚಕ್ಕೆ<br>(2) ಕುಡಿಯಲು<br>(3) ಸ್ನಾನಕ್ಕೆ<br>(4) ಹಲ್ಲುಜ್ಜಿ ಬಾಯಿ, ಮುಖ ತೊಳೆಯಲು. | |
| **5. ಪ್ರಯಾಣ (ಸಾರಿಗೆ ಮತ್ತು ಸಂಪರ್ಕ)** | | | | | |
| • ಸಾರಿಗೆಯಲ್ಲಿ ಪ್ರಾಣಿಗಳ ಬಳಕೆಯನ್ನು ಗುರುತಿಸುವರು.<br>• ಪ್ರಾಣಿಗಳ ಬಗ್ಗೆ ಸಂವೇದನಾ ಶೀಲರಾಗಿ ವರ್ತಿಸುವರು | • ಸಾರಿಗೆಯಲ್ಲಿ ಕುದುರೆ, ಆನೆ, ಒಂಟೆ, ಕತ್ತೆ, ಹಸುಗಳು ಮುಂತಾದ ಪ್ರಾಣಿಗಳ ಬಳಕೆಯನ್ನು ಗುರುತಿಸುವುದು. | • ಹಿಂದೆ ಭೂಮಿಯ ಮೇಲೆ ವಸ್ತುಗಳ ಸಾಗಣಿಕೆಗೆ, ಪ್ರಯಾಣಕ್ಕಾಗಿ ಪ್ರಾಣಿಗಳ ಬಳಕೆ ಮಾಡಲಾಗುತ್ತಿತ್ತು. ಈಗ ಅದರ ಪ್ರಮಾಣ ಕಡಿಮೆಯಾಗಿದೆ ಎಂದು ಹೇಳುತ್ತಾ ಮಕ್ಕಳೊಂದಿಗೆ ಚರ್ಚೆ ಮಾಡುತ್ತಾ. ಸಾರಿಗೆಯಲ್ಲಿ ಪ್ರಾಣಿಗಳ ಬಳಕೆಯ ಕಲ್ಪನೆಯನ್ನು ಮೂಡಿಸುವುದು. | ಚಿತ್ರಪಟಗಳು<br>ಚರ್ಚೆ, | • ಯಾವ ಯಾವ ಪ್ರಾಣಿಗಳನ್ನು ಸಾರಿಗೆಗಾಗಿ ಬಳಸುತ್ತಾರೆ?<br>• ಮರುಭೂಮಿಯ ಹಡಗು ಎಂದು ಯಾವ ಪ್ರಾಣಿಯನ್ನು ಕರೆಯುತ್ತಾರೆ ? | 5 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | ಅವುಗಳ ಬಗ್ಗೆ ಅನುಕಂಪ, ಕರುಣೆ ಪಡುವಂತಹ ಗುಣವನ್ನು ಬೆಳೆಸಿಕೊಳ್ಳುವಂತೆ ಮಾಡುವುದು. | • ಸಾರಿಗೆಯಲ್ಲಿ ಬಳಸಿಕೊಂಡ ಪ್ರಾಣಿಗಳನ್ನು ಮಾಲೀಕರು ಹೇಗೆ ನೋಡಿಕೊಳ್ಳುತ್ತಾರೆಂಬುದನ್ನು ವಿವರಿಸುತ್ತಾ ಪ್ರಾಣಿಗಳ ಬಗ್ಗೆ ಸಂವೇದನಾಶೀಲತೆ ಇರಬೇಕೆಂಬ ಕಲ್ಪನೆಯನ್ನು ಮೂಡಿಸುವುದು (ಎಲ್ಲಾ ಪ್ರಾಣಿಗಳ ಬಗ್ಗೆಯ).<br>• ಪ್ರಾಣಿಗಳ ಬಳಕೆ, ಅವುಗಳ ಜೊತೆಗಿನ ವರ್ತನೆಯ ಚಿತ್ರಗಳನ್ನು ತೋರಿಸುತ್ತಾ, ಚರ್ಚಿಸಿ ಕಲ್ಪನೆಯನ್ನು ಮೂಡಿಸುವುದು.<br>• ಸ್ಥಳೀಯವಾಗಿ ಸಾರಿಗೆಗೆ ಪ್ರಾಣಿಗಳನ್ನು ಉಪಯೋಗಿಸುತ್ತಿದ್ದರೆ ಅಲ್ಲಿಗೆ ಹೋಗಿ ವೀಕ್ಷಿಸುವುದು.<br>ಉದಾ :ಜಟಕಾ ಬಂಡಿ. | ಮಕ್ಕಳ ಅನುಭವಗಳು,<br>ಉದಾಹರಣೆಗಳು : ಸ್ಥಳೀಯವಾಗಿ ಲಭ್ಯವಿರುವ ಪ್ರಾಣಿಗಳ ಸಹಾಯದಿಂದ ಸಾರಿಗೆ ವೀಕ್ಷಣೆ. | • ವಸ್ತು ಸಾಕಾಣಿಕೆಗೆ ಈಗಲೂ ಬಳಸುತ್ತಿರುವ ಪ್ರಾಣಿಗಳಾವುವು?<br>• ಸಾರಿಗೆಯಲ್ಲಿ ಬಳಸುವ ಪ್ರಾಣಿಗಳ ಜೊತೆ ಅನುಕಂಪ, ಪ್ರೀತಿ ಇರಬೇಕು. ಏಕೆ? | |
| • ಕಾಲದಿಂದ ಕಾಲಕ್ಕೆ ಬದಲಾದ ವಿವಿಧ ರೀತಿಯ ಸಂಪರ್ಕ ಸಾಧನಗಳನ್ನು ಗುರುತಿಸುವರು. | • ಹಿಂದಿನಿಂದ ಈಗಿನವರೆ ಬದಲಾದ ಸಂಪರ್ಕ ಸಾಧನಗಳನ್ನು ಗುರುತಿಸುವುದು.<br>ಹಿಂದೆ ಇದ್ದ ಪಕ್ಷಿಗಳ ಮೂಲಕ ಸಂಪರ್ಕ, ನಂತರ ಪತ್ರ, ಟೆಲಿಗ್ರಾಂ, ವಾರ್ತಾಪತ್ರಿಕೆ, ಟೆಲಿಫೋನ್ (ದೂರವಾಣಿ), ಟೆಲಿವಿಷನ್ (ದೂರದರ್ಶನ), | • ಹಿಂದೆ ಯಾವ ಸಂಪರ್ಕ ಸಾಧನಗಳನ್ನು ಬಳಸುತ್ತಿದ್ದರು ಈಗ ಯಾವ ಸಂಪರ್ಕ ಸಾಧನಗಳನ್ನು ಬಳಸುತ್ತಿದ್ದಾರೆಂದು ಹೇಳಿ ಚರ್ಚಿಸುವುದರ ಮೂಲಕ ಕಲ್ಪನೆ ಮೂಡಿಸುವುದು.<br>ಉದಾ : ಮಾತುಗಳಿಂದ ಅಂತರ್ ಜಾಲದವರೆಗೆ.<br>• ಈಗ ಬಳಸುತ್ತಿರುವ ಸಂಪರ್ಕ ಸಾಧನಗಳನ್ನು ಚಿತ್ರ ಮತ್ತು ಮಾದರಿಗಳ ಸಹಾಯದಿಂದ ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬುದರ ಕಿರು ಪರಿಚಯ ಮಾಡಿಕೊಡುವುದು. | • ಹಿಂದಿನ ಸಂಪರ್ಕ ಸಾಧನಗಳ ಮತ್ತು ಈಗಿನ ಸಂಪರ್ಕ ಸಾಧನಗಳ ಚಿತ್ರಗಳು.<br>• ಮಕ್ಕಳ ಅನುಭವ<br>• ಚರ್ಚೆ<br>• ಹಿರಿಯರ ಅನುಭವ | • ಮುಖ್ಯವಾದ ಸಂಪರ್ಕ ಸಾಧನಗಳಾವುವು?<br>• ಅಂಚೆ ಮತ್ತು ವಾರ್ತಾ ಪತ್ರಿಕೆಯಿಂದ ನಮಗಾಗುವ ಪ್ರಯೋಜನಗಳಾವುವು?<br>• ಗಣಕ ಯಂತ್ರ ಅಂತರ್‌ಜಾಲದ ಮಹತ್ವವೇನು ?<br>• ಕಿರು ಪರಿಚಯ ಬರೆಯಿರಿ. | 6 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | ಮೊಬೈಲ್, ಅಂತರ್‌ಜಾಲ (ಇಂಟರ್‌ನೆಟ್) ಗಳವರೆಗಿನ ಪರಿವರ್ತನೆಗಳನ್ನು ಗುರುತಿಸುವುದು. ಈಗಿರುವ ಸಂಪರ್ಕ ಸಾಧನಗಳನ್ನು ಪರಿಚಯಿಸುವುದು. | • ಹಿಂದಿನ ಮತ್ತು ಈಗಿನ ಸಂಪರ್ಕ ಸಾಧನಗಳ ಬಗ್ಗೆ ಊರಿನ ಹಿರಿಯರೊಂದಿಗೆ ಚರ್ಚೆ ನಡೆಸುವುದು.<br>• ವಿವಿಧ ಸಂಪರ್ಕ ಸಾಧನಗಳ ಚಿತ್ರ ಸಂಗ್ರಹಣೆ ಮಾಡುವುದು. | | 1. ರೇಡಿಯೋ<br>2. ದೂರದರ್ಶನ. | |
| **6. ನಮ್ಮ ಇತರ ಆವಶ್ಯಕತೆಗಳು** | | | | | |
| • ಸ್ವಾಭಾವಿಕ ಸಂಪನ್ಮೂಲಗಳು ಮತ್ತು ಸೃಜನ ಶೀಲತೆಯು ಮಾನವನ ಬದುಕನ್ನು ಹೇಗೆ ಬದಲಾಯಿಸಿದೆ ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸುವರು. | ಆದಿ ಮಾನವನಿಂದ ಆಧುನಿಕ ಮಾನವನವರೆಗೆ ನಡೆದು ಬಂದ ದಾರಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳು ಮತ್ತು ಮಾನವನ ಸೃಜನಶೀಲತೆಯ ಪಾತ್ರವನ್ನು ಸರಳ ಉದಾಹರಣೆಗಳ ಮೂಲಕ ಪರಿಚಯ (ಸರಳವಾದ) ಮಡಕೆ ನಿರ್ಮಾಣ, ಬೆಂಕಿ, ಚಕ್ರ, ಬಟ್ಟೆ ತಯಾರಿಕೆಯ ಉದಾಹರಣೆಗಳು. | ಹಿಂದೆ ಆದಿಮಾನವ ಹಸಿ ಮಾಂಸ ತಿನ್ನುತ್ತಿದ್ದ. ನಂತರ ಬೆಂಕಿಯನ್ನು (ಕಲ್ಲಿನಿಂದ) ಕಂಡು ಹಿಡಿದು ಬೇಯಿಸಿದ ಆಹಾರ ತಿನ್ನಲು ಪ್ರಾರಂಭಿಸಿದ. ಮಣ್ಣಿನಿಂದ ಮಡಕೆ ತಯಾರಿಕೆ (ಚಕ್ರದ ನೆರವಿನಿಂದ) ಉಡುಪು ತಯಾರಿಕೆಯ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು ವಸ್ತುಗಳಲ್ಲಿ ನಾವು ಕಾಣುವ ವೈವಿಧ್ಯತೆಯ ಬಗ್ಗೆ ಚರ್ಚಿಸುವುದು. ಉದಾ : ಮಣ್ಣಿನಿಂದ ತಯಾರಿಸುವ ಹೂಜಿಗಳು (ಚಿತ್ರಗಳ ಮೂಲಕ).<br>ಎಲ್ಲಾ ಮಕ್ಕಳಿಗೂ ಮಣ್ಣನ್ನು ನೀಡಿ ತಮಗೆ ಇಷ್ಟ ಬಂದ ಮಾದರಿ ತಯಾರಿಸಲು ತಿಳಿಸುವುದು. ನಂತರ ಅದರಲ್ಲಿನ ವೈವಿಧ್ಯತೆಯ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು.<br>ಹೊಸ ಹೊಸ ಆವಿಷ್ಕಾರಗಳ ಬಗ್ಗೆ ಸರಳ ಮಾಹಿತಿ ನೀಡುವುದು. | ಮಕ್ಕಳ ಅನುಭವಗಳು<br>ಮಾದರಿಗಳು<br>ಚಿತ್ರಗಳು<br>ಮಣ್ಣು | • ನಮ್ಮ ಮೂಲಭೂತ ಅವಶ್ಯಕತೆಗಳಾವುವು?<br>• ಇವುಗಳನ್ನು ಪಡೆಯಲು ಬೇಕಾದ ನೈಸರ್ಗಿಕ ಸಂಪನ್ಮೂಲಗಳು ಯಾವುವು?<br>• ಮಾನವನ ಸೃಜನಶೀಲತೆಗೆ ನಿಮಗೆ ತಿಳಿದಿರುವ ಎರಡು ಉದಾಹರಣೆ ಕೊಡಿ. | 5 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| ಉಡುಪುಗಳಲ್ಲಿರುವ ವೈವಿಧ್ಯತೆ, ಬಟ್ಟೆ ತಯಾರಿಕೆಯಲ್ಲಿ ಬಳಸುವ ಬಣ್ಣ ಮತ್ತು ವಿನ್ಯಾಸದ ಬಗ್ಗೆ ಚರ್ಚಿಸುವರು.<br>ವಿವಿಧ ಜಿಲ್ಲೆಗಳಲ್ಲಿ ಬಳಸುವ ವಿವಿಧ ಉಡುಪುಗಳ ಬಗ್ಗೆ ತಿಳಿಯುವರು.<br>ಬಟ್ಟೆ ತುಂಡುಗಳನ್ನು ಸಂಗ್ರಹಿಸಿ ಉಡುಪಿನ ಮಾದರಿಗಳನ್ನು ತಯಾರಿಸುವರು. | ವಿವಿಧ ರೀತಿಯ ಉಡುಪುಗಳ ಪರಿಚಯ, ಹೊಲಿಯದ ಹಾಗೂ ಹೊಲಿದ ಉಡುಪಗಳ ಬಳಕೆ. ಬಟ್ಟೆಯ ಬಣ್ಣ ವಿನ್ಯಾಸ, ಬಳಸಿರುವ ನೂಲಿನ ಪರಿಚಯ.<br>ಪ್ರಾದೇಶಿಕತೆಗೆ ಅನುಗುಣವಾದ ವಿವಿಧ ಉಡುಪುಗಳು, ಪ್ರಸಿದ್ಧವಾದ ಬಟ್ಟೆ ತಯಾರಿಕೆಯ ಕೇಂದ್ರ ಗಳನ್ನು ಪರಿಚಯಿಸುವದು. ಉದಾ : ಇಳಕಲ್ ಸೀರೆ, ಮೈಸೂರು ಸಿಲ್ಕ್.<br>ಬಟ್ಟೆ ತುಂಡು ಕತ್ತರಿಸಿ ಲಂಗ, ಕುಪ್ಪಸ ಮಾದರಿ ತಯಾರಿಕೆ. (ಮಕ್ಕಳ ಮಟ್ಟಕ್ಕೆ ತಕ್ಕಂತೆ) | ಬಣ್ಣ, ವಿನ್ಯಾಸ, ಆಕಾರಗಳಿಂದ ವೈವಿಧ್ಯಮಯವಾಗಿರುವ ಬಟ್ಟೆಗಳನ್ನು ಕುರಿತು ಚರ್ಚಿಸುವುದು. ಹೊಲಿಯದೆ (ಕತ್ತರಿಸಿ ಹೊಲೆಯದೆ) ಬಳಸುವ ಲುಂಗಿ, ಚೂಡಿದಾರ್ ದುಪ್ಪಟ (ವೇಲ್) ಮುಂತಾದವುಗಳು ಹಾಗೂ ಕತ್ತರಿಸಿ ಹೊಲೆಯುವ ಬಟ್ಟೆಗಳ ಬಗ್ಗೆ ಚರ್ಚಿಸುವುದು.<br>ಬಟ್ಟೆ ಅಂಗಡಿಗೆ ಮತ್ತು ದರ್ಜಿ ಅಂಗಡಿಗೆ ಭೇಟಿ ನೀಡುವುದು. ಖಾಲಿ ಬಟ್ಟೆಯ ಮೇಲೆ (ಬಿಳಿ, ಹಳದಿ ......) ಮಕ್ಕಳಿಂದ ಬಣ್ಣದ ಹೂವು, ಎಲೆ, ತರಕಾರಿಗಳಿಂದ ಬಣ್ಣದ ಚಿತ್ತಾರ ಹಾಕಿಸುವುದು. (ಬೆಂಡೆಕಾಯಿ, ಹೂಕೋಸು ಇತ್ಯಾದಿಗಳಿಂದ ಬಣ್ಣದ ವಿನ್ಯಾಸ) ಬಟ್ಟೆ ತುಂಡುಗಳನ್ನು ಸಂಗ್ರಹಿಸುವುದು. ಕತ್ತರಿ, ಸೂಜಿ ದಾರದ ಸಹಾಯದಿಂದ ಉಡುಪಿನ ಮಾದರಿ ತಯಾರಿಕೆ ಮಾಡಿಸುವುದು. | ಸ್ಥಳೀಯವಾದ ಬಟ್ಟೆ ಅಂಗಡಿ ದರ್ಜಿ ಅಂಗಡಿ ಬಣ್ಣಗಳು ತರಕಾರಿಗಳು ಬಟ್ಟೆಯ ತುಂಡುಗಳು | • ನೀನು ಧರಿಸುವ ಉಡುಪುಗಳು ಯಾವುವು?<br>• ಸಾಮಾನ್ಯವಾಗಿ ಜನರು ಧರಿಸುವ ಉಡುಪುಗಳನ್ನು ಪಟ್ಟಿ ಮಾಡು.<br>• ನಿನ್ನ ಉಡುಪುಗಳಲ್ಲಿ ನಿನಗೆ ಯಾವುದು ತುಂಬಾ ಇಷ್ಟ ಏಕೆ?<br>• ಬಿಳಿಬಟ್ಟೆಯ ಮೇಲೆ ತರಕಾರಿಗಳಿಂದ ಬಣ್ಣದ ವಿನ್ಯಾಸ ರಚಿಸು.<br>• ನೀನು ತಯಾರಿಸಿರುವ ಉಡುಪಿನ ಮಾದರಿಯನ್ನು ಶಾಲೆಯಲ್ಲಿ ಪ್ರದರ್ಶಿಸು. | 6 |
| **7. ಸ್ವಚ್ಛತೆ ಮತ್ತು ಸುರಕ್ಷತೆ** | | | | | |
| • ದೇಹದಲ್ಲಿ ನಡೆಯುವ ಮುಖ್ಯ ಕ್ರಿಯೆಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಮುಖ್ಯ ಅಂಗಗಳ ಪರಿಚಯ ಮಾಡಿ ಕೊಳ್ಳುವರು.<br>• ಸ್ವಚ್ಛತೆಯ ಅಭ್ಯಾಸದಿಂದ ಈ ಅಂಗಗಳ ಆರೋಗ್ಯ ಕಾಪಾಡಿಕೊಳ್ಳುವ ಅರಿವನ್ನು ಪಡೆಯುವರು. | ದೇಹದಲ್ಲಿ ನಡೆಯುವ ಮುಖ್ಯವಾದ ಕೆಲಸಗಳಾದ ಉಸಿರಾಟ, ಜೀರ್ಣಕ್ರಿಯೆ, ರಕ್ತ ಪಂಚಲನೆ ಕಶ್ಮಲ ವಿಸರ್ಜನೆಯ ಮುಖ್ಯ ಕೆಲಸಗಳು, ಇವುಗಳಿಗೆ ಸಂಬಂಧಪಟ್ಟ ಮುಖ್ಯ | • ದೇಹದ ಹೊರಭಾಗದಲ್ಲಿರುವ ಅಂಗಗಳ ಹೆಸರನ್ನು ಹೇಳುತ್ತಾ, ದೇಹದ ಒಳಗೆ ಯಾವ ಯಾವ ಕ್ರಿಯೆಗಳು ಮುಖ್ಯವಾಗಿ ನಡೆಯುತ್ತವೆಂದು ಹೇಳುತ್ತಾ ಮುಖ್ಯ ಕ್ರಿಯೆಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಅಂಗಗಳ ಕಿರು ಪ್ಪರಿಚ್ಚಯ ಮಾಡಿಕೊಡುವುದು.<br>• ದೇಹದ ಮುಖ್ಯ ಕ್ರಿಯೆಗಳಿಗೆ ಸಂಬಂಧಪಟ್ಟ ಚಿತ್ರಗಳನ್ನು ಮತ್ತು ಮಾದರಿಗಳನ್ನು ತೋರಿಸುತ್ತಾ ಅವುಗಳ ಕಾರ್ಯಗಳನ್ನು ತಿಳಿಸುವುದು. | ದೇಹದ ವಿವಿಧ ಅಂಗಗಳ ಚಿತ್ರಪಟಗಳು ಮಾದರಿಗಳು.<br>ಚಿತ್ರ ಬಿಡಿಸುವುದು ವೈದ್ಯರ ಸಲಹೆ. | • ಉಸಿರಾಟ ಕ್ರಿಯೆಯಲ್ಲಿ ಭಾಗವಹಿಸುವ ಅಂಗಗಳಾವುವು?<br>• ರಕ್ತ ಪರಿಚಲನೆಯ ಅಂಗಗಳು ಯಾವುವು? | 7 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| ಉತ್ತಮ ಆರೋಗ್ಯದ ಅಭ್ಯಾಸಗಳನ್ನು ಅರಿಯುವರು. | ಅಂಗಗಳ ಕಿರು ಪರಿಚಯ ಮಾಡುವುದು.<br><br>ಸ್ವಚ್ಛತೆಯ ಅಭ್ಯಾಸದಿಂದ ಪರಿಚಯಿಸಿದ ಅಂಗಗಳ ಆರೋಗ್ಯ ಕಾಪಾಡಿಕೊಳ್ಳುವ ಅರಿವನ್ನು ಮೂಡಿಸುವುದು.<br><br>ಉತ್ತಮ ಆರೋಗ್ಯಕ್ಕಾಗಿ ಉತ್ತಮ ಅಭ್ಯಾಸಗಳ ಅಗತ್ಯತೆಯನ್ನು ಮನಗಾಣುವರು. | • ಮುಖ್ಯ ಕ್ರಿಯೆಗಳ ಚಿತ್ರ ಬರೆದು ಅವುಗಳ ಮುಖ್ಯ ಕಾರ್ಯಗಳನ್ನು ಅವುಗಳಿಗೆ ಸಂಬಂಧಪಟ್ಟ ಅಂಗಗಳ ಪರಿಚಯ ಮಾಡಿಕೊಡುವುದು.<br>• ಸ್ಥಳೀಯವಾಗಿ ಆಸ್ಪತ್ರೆಗಳಿದ್ದರೆ ಅಲ್ಲಿನ ವೈದ್ಯರನ್ನು ಸಂಪರ್ಕಿಸಿ ಮುಖ್ಯ ಕ್ರಿಯೆಗಳಿಂದ ಉಸಿರಾಟ, ವಿಸರ್ಜನೆ, ರಕ್ತ ಪರಿಚಲನೆ, ಜೀರ್ಣಕ್ರಿಯೆಗಳ ಬಗ್ಗೆ ತಿಳಿದುಕೊಳ್ಳುವುದು.<br>• ಉತ್ತಮ ಆರೋಗ್ಯದ ಅಭ್ಯಾಸಗಳನ್ನು ರೂಢಿಸಿಕೊಳ್ಳುವ ಕ್ರಮವನ್ನು ಮತ್ತು ಉತ್ತಮ ಆರೋಗ್ಯದ ಅಭ್ಯಾಸಗಳನ್ನು ಪಟ್ಟಿ ಮಾಡಿಸುವುದು, (ಶಾಲೆಯಲ್ಲಿ ಬರೆದು ತೂಗು ಹಾಕುವುದು) | ಉತ್ತಮ ಆರೋಗ್ಯದ ಅಭ್ಯಾಸಗಳ ಪಟ್ಟಿ<br>- ಯೋಗಾಸನ<br>- ವ್ಯಾಯಾಮ<br>- ಕ್ರೀಡೆ<br>- ಮನರಂಜನೆ ಇತ್ಯಾದಿ. | • ನೀನು ತಿನ್ನುವ ಆಹಾರವು ಹಾದು ಹೋಗುವ ಜೀರ್ಣಾಂಗಗಳನ್ನು ಕ್ರಮವಾಗಿ ಬರೆಯಿರಿ.<br>• ವಿಸರ್ಜನಾಂಗಗಳಾವುವು? ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ.<br>1. ಹೃದಯ, ಶ್ವಾಸಕೋಶ, ಅಪಧಮನಿ, ಅಭಿದಮನಿ.<br>2. ಬಾಯಿ, ಜಠರ, ಮೂತ್ರನಾಳ, ಸಣ್ಣ ಕರುಳು.<br>3. ಮೂಗು, ಜಠರ, ಶ್ವಾಸನಾಳ, ಶ್ವಾಸಕೋಶ.<br>4. ಮೂತ್ರ ಜನಕಾಂಗ, ಅನ್ನನಾಳ, ಮೂತ್ರಕೋಶ, ಮೂತ್ರನಾಳ.<br>• ಮೂತ್ರಜನಕಾಂಗ ಚಿತ್ರ ಬರೆದು ಭಾಗಗಳನ್ನು ಗುರುತಿಸು.<br>• ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಲು ನೀನು ರೂಢಿಸಿಕೊಂಡಿರುವ 3 ಅಭ್ಯಾಸಗಳನ್ನು ಬರೆ. | |
| • ಸಂಚಾರಿ ಸಂಕೇತಗಳು, ಸುರಕ್ಷತೆಯ ನಿಯಮಗಳು ಮತ್ತು ಅವುಗಳನ್ನು ಅನುಸರಿಸುವ | ಸಂಚಾರಿ ಸಂಕೇತಗಳಿಂದ | • ರಸ್ತೆಯ ಬದಿಯಲ್ಲಿ ಹಾಕಿರುವ ಫಲಕಗಳು, ಸಂಚಾರಿ ದೀಪಗಳ ಬಗ್ಗೆ ತಿಳಿಸುತ್ತಾ ಸಂಚಾರಿ ಸಂಕೇತಗಳ ಅರ್ಥವನ್ನು , ಪರಿಚಯ ಮಾಡಿಕೊಡುವುದು. | ಸಂಚಾರಿ ಫಲಕೇತಗಳು ವಿವಿಧ ರೀತಿಯ ಸಂಚಾರಿ | • ಕೆಳಗಿನ ದೀಪಗಳು ಏನನ್ನು ಹೇಳುತ್ತವೆ? | 6 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| ಅವಶ್ಯಕತೆಯನ್ನು ತಿಳಿಯುವರು. | ತಿರುವುಗಳು, ಸಂಚಾರಿ ದೀಪಗಳು, ಝೀಬ್ರಾ ಪಟ್ಟಿ , ಸೂಚನಾ ಫಲಕಗಳು, ಉಬ್ಬುಗಳು ಇತ್ಯಾದಿಗಳು, ಸಂಚಾರ ಸುರಕ್ಷತೆಗಾಗಿ ಇರುವ ನಿಯಮಗಳು. ಅವುಗಳನ್ನು ಅನುಸರಿಸುವ ಅವಶ್ಯಕತೆಗಳನ್ನು ತಿಳಿಯುವುದು. | • ಸಂಚಾರಿ ಸಂಕೇತಗಳ ಚಿತ್ರಪಟಗಳನ್ನು ತೋರಿಸುತ್ತಾ ಅವುಗಳನ್ನು ಎಲ್ಲಿ ಅಳವಡಿಸಿರುತ್ತಾರೆ, ಏಕೆ ಅಳವಡಿಸಿರುತ್ತಾರೆ, ಅವುಗಳ ಸದ್ಬಳಕೆ, ಅನುಸರಿಸುವ ಅವಶ್ಯಕತೆಯ ಬಗ್ಗೆ ತಿಳಿಸುವುದು.<br>• ಸ್ಥಳೀಯವಾಗಿ ಪೋಲಿಸ್ ಕಛೇರಿ ಅಥವಾ ಆರ್.ಟಿ.ಓ ಕಛೇರಿಗಳಿಗೆ ಭೇಟಿ ನೀಡಿ, ರಸ್ತೆಯ ಸುರಕ್ಷತೆಯ ನಿಯಮಗಳು ಮತ್ತು ಅನುಸರಿಸುವ ಕ್ರಮಗಳ ಅವಶ್ಯಕತೆಯ ಬಗ್ಗೆ ಕೇಳಿ ತಿಳಿಯುವುದು. | ಸಂಕೇತಗಳ ಚಿತ್ರಪಟಗಳು.<br>ಸಂಚಾರ ನಿಯಂತ್ರಿಸುವ ಪೋಲಿಸರು ಮತ್ತು ಆರ್.ಟಿ.ಓ ಕಛೇರಿಗಳ ಭೇಟಿ. | ಕೆಂಪು ದೀಪ –<br>ಹಳದಿ ದೀಪ –<br>ಹಸಿರು ದೀಪ –<br>• ಸಂಚಾರಿ ಸುರಕ್ಷತೆಯ ನಿಯಮಗಳನ್ನು ಪಟ್ಟಿ ಮಾಡಿ (ರಸ್ತೆ ನಿಯಮಗಳನ್ನು ಬರೆ)<br>• ನಿಮ್ಮ ಊರಿನ ರಸ್ತೆಯಲ್ಲಿರುವ ಸಂಚಾರಿ ಸಂಕೇತಗಳ ಚಿತ್ರ ಬರೆ.<br>• ರಸ್ತೆಯಲ್ಲಿ ನಡೆದು ಹೋಗುವಾಗ ಯಾವ ನಿಯಮಗಳನ್ನು ನೀನು ಅನುಸರಿಸುವೆ? | |
| • ರಾಜ್ಯದ ಐತಿಹಾಸಿಕ, ಪ್ರಸಿದ್ಧ ನಿಸರ್ಗದ ಸ್ಥಳಗಳನ್ನು ಗುರುತಿಸುವರು, ಅವುಗಳ ಮಹತ್ವ ತಿಳಿದು ಸಂರಕ್ಷಿಸುವ ಮನೋಭಾವ ಬೆಳೆಸಿಕೊಳ್ಳುವರು. | • ಮುಖ್ಯವಾದ ನಗರಗಳು ಉದಾ : ಬೆಂಗಳೂರು, ಮೈಸೂರು, ಬೇಲೂರು, ಹಳೇಬೀಡು, ಹಂಪೆ, ಬಿಜಾಪುರ, ಸೋಮನಾಥಪುರ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಇತ್ಯಾದಿ<br>• ಪ್ರಸಿದ್ಧ ಸ್ಥಳಗಳು. ಶೃಂಗೇರಿ, ಯಡಿಯೂರು, ಸಿದ್ದಗಂಗೆ, ಉಡುಪಿ, ಮೈಸೂರು, ಗುಲ್ಬರ್ಗಾ, ಬಿಜಾಪುರ, | • ಪ್ರೇಕ್ಷಣೀಯ ಸ್ಥಳಗಳ ಚಿತ್ರಪಟಗಳನ್ನು ತೋರಿಸುತ್ತಾ ಅವುಗಳ ಮಹತ್ವ ಅವುಗಳನ್ನು ರಕ್ಷಿಸುವ ಮನೋಭಾವವನ್ನು ಹೇಗೆ ಬೆಳೆಸಿಕೊಳ್ಳಬೇಕೆಂದು ಕಲ್ಪನೆ ಮೂಡಿಸುವುದು.<br>• ಸ್ಥಳೀಯವಾಗಿ, ಐತಿಹಾಸಿಕ ಸ್ಥಳ, ಪ್ರಸಿದ್ಧ ಸ್ಥಳ, ನಿಸರ್ಗಧಾಮ ಗಳೇನಾದರು ಇದ್ದರೆ ಭೇಟಿ ನೀಡಿ ಅವುಗಳ ಮಹತ್ವವನ್ನು ತಿಳಿಯುವುದು.<br>• ಮುಖ್ಯ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಹೋಗಿ ಅವುಗಳ ಮಹತ್ವವನ್ನು ತಿಳಿಯುವುದು. | • ಚಿತ್ರಪಟಗಳು<br>• ಸ್ಥಳಗಳ ಭೇಟಿ<br>• ಪ್ರವಾಸ | • ನಿಮ್ಮ ಊರಿನ ಸುತ್ತಲಿರುವ ಐತಿಹಾಸಿಕ, ಧಾರ್ಮಿಕ / ನಿಸರ್ಗಧಾಮಗಳ ಹೆಸರುಗಳನ್ನು ಬರೆ.<br>• ಮೈಸೂರಿನಲ್ಲಿರುವ ಪ್ರಮುಖ ಸ್ಥಳಗಳಾವುವು? | 8 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | ಶ್ರವಣಬೆಳಗೊಳ, ಕೊಡಗಿನ ತಲಕಾವೇರಿ, ಇತ್ಯಾದಿಗಳು.<br>• ನಿಸರ್ಗಧಾಮಗಳು<br>ನಂದಿ ಬೆಟ್ಟ, ಬಾಬಾಬುಡನ್‌ಗಿರಿ, ಮುಳ್ಳಯ್ಯನ ಸಿರಿ, ಕೆಮ್ಮಣ್ಣುಗುಂಡಿ, ಕುದುರೆಮುಖ<br>• ಪಕ್ಷಿಧಾಮಗಳು, ಬಂದರುಗಳು ತೀರ ಪ್ರದೇಶಗಳನ್ನು ಗುರುತಿಸುವುದರ ಜೊತೆಗೆ ಅವುಗಳ ಮಹತ್ವ ಮತ್ತು ಅವುಗಳ ಸಂರಕ್ಷಿಸುವ ಮನೋಭಾವವನ್ನು ಬೆಳೆಸಿಕೊಳ್ಳುವುದು. | • ಕಥೆಯ ರೂಪದಲ್ಲಿ ಈ ಸ್ಥಳಗಳ ಮಹತ್ವವನ್ನು ತಿಳಿಸುವುದು.<br>• ಹಾಡುಗಳ ಮೂಲಕ ಪ್ರಮುಖ ಸ್ಥಳಗಳ ಮಾಹಿತಿ ತಿಳಿಯುವುದು.<br>• ಕರ್ನಾಟಕ (ರಾಜ್ಯದ) ನಕ್ಷೆಯಲ್ಲಿ ಪ್ರಮುಖವಾದ ಐತಿಹಾಸಿಕ ಸ್ಥಳಗಳ ವೀಕ್ಷಣೆ.<br>ಉದಾ : ನಗರಗಳು.<br>• ನಿನ್ನ ಊರಿನಲ್ಲಿರುವ ಪ್ರೇಕ್ಷಣೀಯ ಸ್ಥಳದ ಬಗ್ಗೆ ಹಿರಿಯರಿಂದ ವಿಷಯ ಸಂಗ್ರಹಿಸಿ ಕಿರು ಪ್ರಬಂಧ ಬರೆ.<br>• ಕರ್ನಾಟಕ ಇತಿಹಾಸ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಇರುವ ಪುಸ್ತಕವನ್ನು ಗ್ರಂಥಾಲಯದಿಂದ ಪಡೆದು ಓದು. | • ಕಥೆ<br>• ಹಾಡು<br>• ನಕ್ಷೆ (ಭೂಪಟ) | • ಸ್ಮಾರಕಗಳನ್ನು ಏಕೆ ನಾವು ರಕ್ಷಿಸಬೇಕು.<br>• ನೀನು ಭೇಟಿ ನೀಡಿರುವ 4 ಪ್ರೇಕ್ಷಣೀಯ ಸ್ಥಳಗಳ ಹೆಸರನ್ನು ಬರೆ. | |
| • ಸ್ವಾತಂತ್ರ ಹೋರಾಟಗಾರರ ಸಮಾಜ ಸುಧಾರಕರ + ರಾಜ್ಯಕ್ಕೆ ಕೊಡುಗೆ ನೀಡಿದ ಸುಪ್ರಸಿದ್ಧ ವ್ಯಕ್ತಿಗಳ ಪರಿಚಯ ಮಾಡಿಕೊಳ್ಳುವರು. | ಸ್ವಾತಂತ್ರ ಹೋರಾಟದಲ್ಲಿ ಕರ್ನಾಟಕದ ಪ್ರಮುಖ ಹೋರಾಟಗಾರರ ಕಿರು ಪರಿಚಯ.<br>ಉದಾ : ರಾಣಿ ಅಬ್ಬಕ್ಕದೇವಿ, ಹೈದರಲಿ, ಟಿಪ್ಪು ಸುಲ್ತಾನ್, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಮೈಲಾರ ಮಹದೇವಪ್ಪ ಇತ್ಯಾದಿ. ಸಮಾಜ | • ಸ್ವಾತಂತ್ರ್ಯದ ಕಥೆಯನ್ನು ಹೇಳುತ್ತಾ ಕರ್ನಾಟಕದಲ್ಲಿ ಸ್ವಾತಂತ್ರ್ಯಕ್ಕೆ ಹೋರಾಟ ಮಾಡಿದ ಹೋರಾಟಗಾರರ ಕಿರು ಪರಿಚಯ ಮಾಡಿಕೊಡುವುದು.<br>• ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಕರ್ನಾಟಕದ ಹೋರಾಟಗಾರರ ಚಿತ್ರಗಳನ್ನು ತೋರಿಸುತ್ತಾ ಅವರು ಹೋರಾಟ ಮತ್ತು ಅವರ ಬಗ್ಗೆ ಪರಿಚಯ ಮಾಡಿಕೊಡುವುದು. | • ಸ್ವಾತಂತ್ರ ಹೋರಾಟಗಾರರ ಚಿತ್ರಗಳು<br>• ಪಾತ್ರಾಭಿನಯಗಳು | • ಕರ್ನಾಟಕದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪ್ರಮುಖ ಹೋರಾಟಗಾರರಲ್ಲಿ 4 ಜನರನ್ನು ಹೆಸರಿಸು.<br>• ಇವರ ಬಗ್ಗೆ ಕಿರು ಪರಿಚಯ ಬರೆ.<br>ಟಿಪ್ಪು ಸುಲ್ತಾನ, ಕಿತ್ತೂರು ರಾಣಿ ಚೆನ್ನಮ್ಮ. | 7 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | ಸುಧಾರಕರುಗಳು ಶಂಕರಾಚಾರ್ಯರು, ರಾಮಾನುಜರು, ಮಧ್ವಾಚಾರ್ಯರು, ಬಸವಣ್ಣನವರು, ಅಕ್ಕಮಹಾದೇವಿ, ಪುರಂದರರು, ಕನಕದಾಸರು ಇತ್ಯಾದಿ ಕಿರು ಪರಿಚಯ ಮಾಡಿಕೊಡುವುದು. ಸುಪ್ರಸಿದ್ಧ ವ್ಯಕ್ತಿಗಳು ಸರ್.ಎಂ.ವಿ.ಎಂ., ಸರ್.ಸಿವಿ. ರಾಮನ್, ಕುವೆಂಪು ....... | • ಪಾತ್ರಾಭಿನಯಗಳ ಮೂಲಕ ಕೆಲವು ಹೋರಾಟಗಾರರ ಪರಿಚಯ ಮಾಡಿಕೊಡುವುದು.<br>• ರಾಜ್ಯದ ಸಮಾಜ ಸುಧಾರಕರುಗಳ ಮತ್ತು ಪ್ರಸಿದ್ಧ ವ್ಯಕ್ತಿಗಳ ಕಿರು ಪರಿಚಯವನ್ನು ಅವರ ಚಿತ್ರಗಳನ್ನು ತೋರಿಸುವುದರೊಂದಿಗೆ ಮಾಡಿಕೊಡುವುದು.<br>• ಸಮಾಜ ಸುಧಾರಕರ ಛದ್ಮ ವೇಷವನ್ನು ಮಕ್ಕಳಿಗೆ ತೊಡಿಸಿ ಅವರ ಕಿರು ಪರಿಚಯ ಮಾಡಿಕೊಡುವುದು.<br>• ಪ್ರಸಿದ್ಧ ವ್ಯಕ್ತಿಗಳ ಭಾವ ಚಿತ್ರ ಸಂಗ್ರಹಿಸಿ ಚಿತ್ರಕೋಶ ರಚಿಸುವುದು. | • ಸಮಾಜ ಸುಧಾರಕರ ಭಾವ ಚಿತ್ರಗಳು<br>• ಛದ್ಮ ವೇಷ | • ರಾಜ್ಯದ ಪ್ರಮುಖ ಸಮಾಜ ಸುಧಾರಕರುಗಳ ಹೆಸರನ್ನು ಬರೆ<br>• ರಾಜ್ಯದ ಪ್ರಮುಖ ಸಮಾಜ ಸುಧಾರಕರಲ್ಲಿ ಇಬ್ಬರ ಕಿರು ಪರಿಚಯ ಬರೆ.<br>• ಕರ್ನಾಟಕದ ಸುಪ್ರಸಿದ್ಧ ವ್ಯಕ್ತಿಗಳಲ್ಲಿ ಇಬ್ಬರ ಪರಿಚಯ ಮಾಡಿಕೊಡಿ. | |
| **8. ನಮ್ಮ ಭೂಮಿ** | | | | | |
| • ಭೂಮಿಯು ಎಲ್ಲರ ವಸತಿ – ಇಲ್ಲಿ ಜೀವಿಸಲು ಬೇಕಾದ ಗಾಳಿ, ಮಣ್ಣು, ನೀರು ಇದೆ ಎಂದು ಮೆಚ್ಚುವರು.<br>• ಗಾಳಿ ಮತ್ತು ಮಣ್ಣಿನ ಪ್ರಾಮುಖ್ಯತೆಯನ್ನು ಗುರುತಿಸುವರು. | • ಭೂಮಿಯ ವಿವಿಧ ಭೂಸ್ವರೂಪಗಳು – ಮೇಲ್ಮೈಲಕ್ಷಣ (ಸರಳವಾಗಿ) – ಪರ್ವತಗಳು, ಹಿಮ ಪರ್ವತ, ಕಣಿವೆ, ಬೆಟ್ಟ, ಜಲಪಾತ, ಬಯಲು, ಮರುಭೂಮಿ ಪರಿಚಯ.<br>ಜೀವಿಗೆ ಅಗತ್ಯವಾದ ಗಾಳಿ ನೀರು ಆಹಾರ ಎಲ್ಲೆಡೆಯೂ ದೊರೆಯುತ್ತದೆ.<br>ಗಾಳಿ ಮತ್ತು ಮಣ್ಣಿನ ಪ್ರಾಮುಖ್ಯತೆ. | • ಭೂಮಿಯ ವಿವಿಧ ಭೂಸ್ವರೂಪಗಳ ಚಿತ್ರಗಳ ನೆರವಿನಿಂದ ಅಲ್ಲಿನ ಮೇಲ್ಮೈಲಕ್ಷಣಗಳನ್ನು ಕುರಿತು ಮಕ್ಕಳೊಂದಿಗೆ ಚರ್ಚಿಸುವುದು.<br>• ಜೀವಿಗೆ ಅಗತ್ಯವಾದ ಅಂಶಗಳು ಭೂಮಿಯ ಮೇಲೆ ಇದೆ ಎಂಬುದನ್ನು ಗುರುತಿಸುವಂತೆ ಮಾಡುವುದು.<br>• ನಾವು ಬದಲುಕಲು ಗಾಳಿ ಅಗತ್ಯ ಹಾಗೂ ಮಣ್ಣಿನಿಂದ ನಮಗೆ ಆಹಾರ ದೊರೆಯುತ್ತದೆ ಎಂಬುದರ ಬಗ್ಗೆ ಚರ್ಚಿಸಿ ಗಾಳಿ ಮತ್ತು ಮಣ್ಣಿನ ಮಾಲಿನ್ಯ ಹಾಗೂ ಸಂರಕ್ಷಣೆಯ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು. | ವಿವಿಧ ಭೂ ಸ್ವರೂಪಗಳ ಚಿತ್ರಗಳು.<br>ವಿವಿಧ ರೀತಿಯ ಮಣ್ಣುಗಳು. | • ಭೂಮಿಯ ವಿವಿಧ ಭೂಲಕ್ಷಣಗಳನ್ನು ಹೆಸರಿಸಿ.<br>• ಭೂಮಿಯ ಮೇಲೆ ಜೀವಿಗಳು ಬದುಕಲು ಕಾರಣಗಳಾವುವು?<br>• ಗಾಳಿ ಇಲ್ಲದಿದ್ದರೆ ಏನಾಗುತ್ತಿತ್ತು?<br>• ಮಣ್ಣಿಲ್ಲದೆ ನಾವಿಲ್ಲ, ಏಕೆ?<br>• ನಮ್ಮ ಭೂಮಿ – ಎಲ್ಲಾ ಜೀವಿಗಳ ವಸತಿ. ಹೇಗೆ? | 7 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | ಗಾಳಿ ಮತ್ತು ಮಣ್ಣಿನ ರಕ್ಷಣೆ. | | | | |
| • ಬೇರೆ ಬೇರೆ ಕಾಲಗಳಲ್ಲಿನ ಬದಲಾವಣೆಗಳನ್ನು ಗುರುತಿಸುವರು. | ಬೇಸಿಗೆ ಕಾಲ, ಮಳೆಗಾಲ ಮತ್ತು ಚಳಿಗಾಲದಲ್ಲಿ ಆಗುವ ಬದಲಾವಣೆಗಳು.<br>– ಪ್ರಕೃತಿಯಲ್ಲಿ – ವಾತಾವರಣದಲ್ಲಿ.<br>– ಸಸ್ಯಗಳಲ್ಲಿ,<br>– ತಮ್ಮ ಜಿಲ್ಲೆಯಲ್ಲಿ ಬೇರೆ ಬೇರೆ ಕಾಲಗಳಲ್ಲಿ ಧರಿಸುವ ಉಡುಪುಗಳು<br>– ಆಹಾರಭ್ಯಾಸದಲ್ಲಿ (ಮಾನವರಲ್ಲಿ) | • ವಿವಿಧ ಕಾಲಗಳಲ್ಲಿ ಇರುವ ವಾಯುಗುಣವನ್ನು ವಿವರಿಸುವುದು. ಬೇಸಿಗೆ ಕಾಲದಲ್ಲಿ ಗಿಡಮರಗಳು ಒಣಗಿರುತ್ತದೆ, ಬಿಸಿಗಾಳಿ ....... ವಿವರಿಸಿ ಆಹಾರದಲ್ಲಿ ಮಜ್ಜಿಗೆ, ತಂಪು ಪಾನೀಯಗಳ ಬಳಕೆ ಹೆಚ್ಚು ಎಂದು ಮಕ್ಕಳಿಗೆ ವಿವರಿಸುತ್ತಾ ಉಳಿದ ಕಾಲಗಳಲ್ಲಿ ಕಂಡು ಬರುವ ಬದಲಾವಣೆಗಳನ್ನು ಕುರಿತು ಮಕ್ಕಳೊಂದಿಗೆ ಚರ್ಚಿಸುವುದು.<br>ಬೇಸಿಗೆ ಕಾಲದಲ್ಲಿ ಎಂತಹ ಉಡುಪು ಧರಿಸುತ್ತಾರೆ? ಹೀಗೆ ಪ್ರಶ್ನೆಗಳ ಮೂಲಕ ಚರ್ಚೆ.<br>ಪರಿಸರ ವೀಕ್ಷಣೆ, ಮಳೆಗಾಲದ ಗುಡುಗು ಮಿಂಚು, ಕಾಮನ ಬಿಲ್ಲಿನ ಬಗ್ಗೆಯೂ ಚರ್ಚಿಸುವುದು. | ಪರಿಸರ ವೀಕ್ಷಣೆ<br>ಚಿತ್ರಗಳು<br>(ಮಿಂಚು, ಕಾಮನಬಿಲ್ಲು, ಉಡಪುಗಳ, ಎಲೆ ಉದುರುವಿಕೆ, ಬೆಂಕಿಯ ಸುತ್ತ ಜನ ಇತ್ಯಾದಿ) | • ನಿನ್ನ ಪ್ರದೇಶದ ವಾಯುಗುಣದ ಬಗ್ಗೆ ಬರೆ.<br>• ಬೇಸಿಗೆ ಕಾಲದಲ್ಲಿ ಆಗುವ ಬದಲಾವಣೆಗಳನ್ನು ಗುರುತಿಸಿ ಬರೆ.<br>• ನೀನು ಬಳಸುವ ಉಡುಪುಗಳನ್ನು ಮತ್ತು ಅವನ್ನ ಬಳಸುವ ಕಾಲವನ್ನ ಬರೆ.<br>• ಮಳೆಗಾಲದಲ್ಲಿ ಆಕಾಶದಲ್ಲಿ ಆಗುವ ಬದಲಾವಣೆಗಳಾವುವು?<br>• ಚಳಿಗಾಲದಲ್ಲಿ ನಿಮ್ಮ ಮನೆಯಲ್ಲಿ ವಿಶೇಷ ತಿಂಡಿಗಳು ಯಾವುವು? | 6 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| ಭಾರತದ ನಕ್ಷೆಯಲ್ಲಿ ಕರ್ನಾಟಕ ವನ್ನು ಗುರುತಿಸುವರು. ಕರ್ನಾಟಕ ರಾಜ್ಯದ ಪರಿಚಯ ಮಾಡಿಕೊಳ್ಳುವರು. | ಭಾರತದ ಭೂಪಟದಲ್ಲಿ ಕರ್ನಾಟಕದ ಸ್ಥಾನ, ಕರ್ನಾಟಕದ ನೆರೆಹೊರೆಯ ರಾಜ್ಯಗಳು, ಜಿಲ್ಲೆಗಳು, ರಾಜ್ಯದ ವಾಯುಗುಣ, | • ಭಾರತದ ಭೂಪಟದಲ್ಲಿ ಕರ್ನಾಟಕವನ್ನ ತೋರಿಸುತ್ತಾ ಕರ್ನಾಟಕವು ಭಾರತದ ದಕ್ಷಿಣ ಭಾಗದಲ್ಲಿದೆ ಎಂದು ತಿಳಿಸುವುದು.<br>• ಭೂಪಟದ ಸಹಾಯದಿಂದ ಕರ್ನಾಟಕದ ನೆರೆಹೊರೆಯ ರಾಜ್ಯಗಳನ್ನು ಮೇಲ್ಮೈ ಲಕ್ಷಣಗಳನ್ನು ಗುರುತಿಸುವುದು.<br>• ರಾಜ್ಯದ ವಾಯುಗುಣ, ಬೆಳೆಗಳು ನದಿಗಳನ್ನು ಪರಿಚಯಿಸುವುದು. | ಭಾರತದ ಭೂಪಟ<br>ಕರ್ನಾಟಕದ ಭೂಪಟ (ರಾಜಕೀಯ ಮತ್ತು ಭೌಗೋಳಿಕ) | • ಭಾರತದ ಭೂಪಟದಲ್ಲಿ ಕರ್ನಾಟಕವನ್ನು ಗುರ್ತಿಸು.<br>• ಕರ್ನಾಟಕದ ವಾಯುಗುಣವನ್ನು ವಿವರಿಸು.<br>• ಕರ್ನಾಟಕದ ಮುಖ್ಯ ಬೆಳೆಗಳು ಯಾವುವು?<br>• ಕರ್ನಾಟಕದ ಮುಖ್ಯ ನದಿಗಳು ಯಾವುವು?<br>• ಕರ್ನಾಟಕದ ನೆರೆ ರಾಜ್ಯಗಳನ್ನು ಭಾರತದ ಭೂಪಟದಲ್ಲಿ ಗುರ್ತಿಸಿರಿ. | 6 |

# 3ನೇ ತರಗತಿ ಪರಿಸರ ಅಧ್ಯಯನ ಅವಧಿಗಳ ಹಂಚಿಕೆ

| ಕ್ರ. ಸಂ. | ಮುಖ್ಯ ಪರಿಕಲ್ಪನೆ | ಬೋಧನಾ ಅವಧಿಗಳು |
|---|---|---|
| 1. | ಕುಟುಂಬ ಮತ್ತು ಸ್ನೇಹಿತರು | |
| | 1.1 ಸಂಬಂಧಗಳು | 20 |
| | 1.2 ಕೆಲಸ ಮತ್ತು ಆಟ | 16 |
| | 1.3 ಪ್ರಾಣಿಗಳು | 15 |
| | 1.4 ಸಸ್ಯಗಳು | 22 |
| 2. | ಆಹಾರ | 27 |
| 3. | ವಸತಿ | 32 |
| 4. | ನೀರು | 27 |
| 5. | ಪ್ರಯಾಣ | 19 |
| 6. | ನಮ್ಮ ಇತರ ಅವಶ್ಯಕತೆಗಳು | 12 |
| 7. | ಸ್ವಚ್ಛತೆ ಮತ್ತು ಸುರಕ್ಷತೆ | 30 |
| 8. | ನಮ್ಮ ಭೂಮಿ | 30 |
| | | **240** |

| ಸಿಗುವ ಒಟ್ಟು ಅವಧಿಗಳು | ಪೂರ್ವ ಸಿದ್ಧತೆ | ಪರಿಹಾರ ಬೋಧನೆಗೆ | ಬೋಧನೆ ಸಿಗುವ ಅವಧಿಗಳು |
|---|---|---|---|
| **300** | **30** | **30** | **240** |

# 1. ಕುಟುಂಬ ಮತ್ತು ಸ್ನೇಹಿತರು.

## 1.1. ಸಂಬಂಧಗಳು

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • 3 ತಲೆಮಾರುಗಳ ಸದಸ್ಯರ ಸಂಬಂಧಗಳನ್ನು ಅರಿಯುವರು ಮತ್ತು ಸಂಬಂಧಗಳ ಸರಳ ವಂಶವೃಕ್ಷವನ್ನು ರಚಿಸುವರು. | • 3 ತಲೆಮಾರುಗಳ ಸದಸ್ಯರ (ಅಪ್ಪ – ಅಮ್ಮ, ಚಿಕ್ಕಪ್ಪ, ಅಜ್ಜ, ಅಜ್ಜಿ, ಮಗು) ಸಂಬಂಧಗಳನ್ನು ಅರಿಯುವರು ಮತ್ತು ಸಂಬಂಧಗಳ ಸರಳ ವಂಶವೃಕ್ಷವನ್ನು ರಚಿಸುವರು. | • ಹಿರಿಯರಿಂದ ವಿಚಾರಣೆ ಮೂಲಕ ಕುಟುಂಬದ ಸದಸ್ಯರ ಸಂಬಂಧ ತಿಳಿದು ವರದಿ ಮಾಡಿಸುವುದು.<br>• ಮಕ್ಕಳ ಅನುಭವದಿಂದ ಕುಟುಂಬದ ಸದಸ್ಯರ ಸಂಬಂಧಗಳ ಬಗ್ಗೆ ಪ್ರಶ್ನಿಸುವುದರ ಮುಖಾಂತರ ಚರ್ಚೆ. | • ಹಿರಿಯರು, ಮಕ್ಕಳ ಅನುಭವ<br>• ಕುಟುಂಬದ ಚಿತ್ರಪಟ | • ನಿಮ್ಮ ಮನೆಯಲ್ಲಿ ಯಾರು ಯಾರು ವಾಸಿಸುತ್ತಿದ್ದಾರೆ?<br>• ನಿಮ್ಮ ಅಪ್ಪ ಚಿಕ್ಕವರಿದ್ದಾಗ /ಮನೆಯಲ್ಲಿ ಯಾರು ಯಾರು ವಾಸವಾಗಿದ್ದರಂತೆ?<br>• ನಿಮ್ಮ ಅಪ್ಪನ ಅಪ್ಪ ನಿನಗೆ ಏನಾಗಬೇಕು?<br>• ನಿನ್ನ ಮನೆಯ ವಂಶವೃಕ್ಷ ಬರೆ. | 4<br>3 |
| • ಭೌತಿಕ ಲಕ್ಷಣಗಳು, ಮೌಲ್ಯಗಳು ಮತ್ತು ಹವ್ಯಾಸಗಳ ಮೇಲೆ ಕುಟುಂಬದ ಪ್ರಭಾವವನ್ನು ಗಮನಿಸುವರು. | • ಭೌತಿಕ ಲಕ್ಷಣಗಳಾದ, ದೇಹದ ಆಕಾರ, ಗಾತ್ರ, ಬಣ್ಣ, ಕೂದಲು ಇವುಗಳ ಹೋಲಿಕೆ. ಕುಟುಂಬದಲ್ಲಿ ಸದಸ್ಯರ ಹವ್ಯಾಸಗಳು ಮತ್ತು ಸಾಮಾನ್ಯ ಮೌಲ್ಯಗಳು ಕುಟುಂಬದ ಪ್ರಭಾವವನ್ನು ಗಮನಿಸುವರು. | • ಕುಟುಂಬದ ಚಿತ್ರಪಟದ ಸಹಾಯದಿಂದ ಭೌತಿಕ ಲಕ್ಷಣಗಳ ಹೋಲಿಕೆ ಮಾಡಿಸುವುದು.<br>• ಮಕ್ಕಳ ಅನುಭವದ ಆಧಾರದ ಮೇಲೆ ಪ್ರಶ್ನಿಸುವುದರ ಮುಖಾಂತರ ಕುಟುಂಬದ ಸದಸ್ಯರ ಮೌಲ್ಯಗಳು ಮತ್ತು ಹವ್ಯಾಸಗಳು ಅವರ ಕುಟುಂಬದ ಮೇಲೆ ಯಾವ ರೀತಿ ಪ್ರಭಾವ ಬೀರಿವೆ ಎಂದು ಮನವರಿಕೆ ಮಾಡಿಸುವುದು. | • ಮಕ್ಕಳ ಅನುಭವ<br>• ಹಿರಿಯರು | • ನಿನ್ನ ಹವ್ಯಾಸಗಳೇನು?<br>• ನಿನ್ನ ಅಣ್ಣನ ಹವ್ಯಾಸಗಳಾವುವು?<br>• ನಿನ್ನ ತಂದೆಯ ಹವ್ಯಾಸಗಳಾವುವು?<br>• ನಿನ್ನ ತಾಯಿಯ ಹವ್ಯಾಸಗಳಾವುವು?<br>• ಈ ಎಲ್ಲಾ ಉತ್ತಮ ಹವ್ಯಾಸಗಳಿಂದ ನಿಮ್ಮ ಮನೆ ಸುಖಿ ಕುಟುಂಬವಾಗಿದೆ ಅಲ್ಲವೆ? | 3<br>3 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಕುಟುಂಬದ ಸದಸ್ಯರ ಅನುವಂಶೀಯ ಲಕ್ಷಣಗಳಲ್ಲಿರುವ ಸಾಮ್ಯತೆಯನ್ನು ಗುರುತಿಸುವರು.<br>• ತಾಯಿ ಮಗುವಿನ ಸಂಬಂಧವನ್ನು ಅರಿಯುವರು. | • ತಂದೆಯಂತೆ ಮಗ, ತಾತನಂತೆ ತಂದೆ ಹೀಗೆ ಕುಟುಂಬದ ಸದಸ್ಯರ ಅನುವಂಶೀಯ ಲಕ್ಷಣಗಳ ಸಾಮ್ಯತೆ ಗುರುತಿಸುವುದು.<br>ತಾಯಿ ಮಗುವಿನ ಸಂಬಂಧ (ಜನ್ಮ ನೀಡಿದ ತಾಯಿ, ಸಾಕು / ದತ್ತು ಪಡೆದ ತಾಯಿ) ತಿಳಿಯುವುದು. | • ಹಿರಿಯರ ಸಹಾಯದಿಂದ ಯಾರನ್ನು ಹೋಲುತ್ತೇನೆ ತಿಳಿದುಕೊಳ್ಳುವಂತೆ ಹೇಳುವುದು.<br>• ಮಗು ಚಿಕ್ಕವನಿದ್ದಾಗ ಯಾವ ರೀತಿ ಆರೈಕೆ ಮಾಡುತ್ತಿದ್ದರು ಎಂದು ಕಥೆ ಹೇಳುವುದು. | ತಾಯಿ – ಮಗುವಿನ ಆರೈಕೆಯ ಕಥೆ. | • ನಿನ್ನ ಕಣ್ಣು ಮತ್ತು ಮೂಗು ಕುಟುಂಬದಲ್ಲಿ ಯಾರನ್ನು ಹೋಲುತ್ತದೆ ಎಂದು ಅಜ್ಜಿಯನ್ನು ಕೇಳಿ ತಿಳಿದುಕೊಂಡು ಬಾ.<br>• ನೀನು ಚಿಕ್ಕವನಾಗಿದ್ದಾಗ ಎಲ್ಲಾ ಕೆಲಸಗಳಿಗೆ ಯಾರು ಸಹಾಯ ಮಾಡುತ್ತಿದ್ದರು?<br>• ನಿನಗೆ ತಿನ್ನಲು ಆಹಾರ ಯಾರು ಕೊಡುತ್ತಿದ್ದರು? | 4<br>3 |
| • ಸಮುದಾಯದಲ್ಲಿ ನಡೆಯುವ ಸಮಾರಂಭ, ಜಾತ್ರೆ ಮತ್ತು ಹಬ್ಬಗಳಲ್ಲಿ ಭಾಗವಹಿಸುವರು ಮತ್ತು ಇರುವ ಪರಸ್ಪರ ಸಹಕಾರವನ್ನು ಗುರುತಿಸುವರು. | ಸಮುದಾಯದಲ್ಲಿ ನಡೆಯುವ ಸಮಾರಂಭಗಳಾದ ಜಾತ್ರೆ, ಉತ್ಸವಗಳು, ಊರು ಹಬ್ಬ ಮತ್ತು ಹಬ್ಬ ಗಳಲ್ಲಿ (ಧಾರ್ಮಿಕ / ಸಾಂಸ್ಕೃತಿಕ) ಭಾಗವಹಿಸುವರು ಮತ್ತು ಈ ಸಮಾರಂಭಗಳಲ್ಲಿನ ಪರಸ್ಪರ ಸಹಕಾರವನ್ನು ಗುರುತಿಸುವರು. | • ಮಕ್ಕಳ ಅನುಭವದ ಆಧಾರದ ಮೇಲೆ ಸ್ಥಳೀಯ ಸಮುದಾಯ ಸಮಾರಂಭಗಳಾದ ಊರು ಹಬ್ಬ ಉತ್ಸವಗಳು ಮತ್ತು ಹಬ್ಬಗಳಲ್ಲಿ ಊರಿನ ಜನರು ಹೇಗೆ ಪರಸ್ಪರ ಸಹಕರಿಸುತ್ತಾರೆ ಎಂದು ಚರ್ಚಿಸುವುದು.<br>• ನಿನ್ನ ಸ್ನೇಹಿತರ ಮನೆಯಲ್ಲಿ ನಡೆಯುವ ಸಮಾರಂಭಗಳಲ್ಲಿ ಸಹಕಾರ ನೀಡಿದ ಬಗ್ಗೆ ಚರ್ಚಿಸು.<br>• ಹಾಡು ಕಥೆಯ ಮೂಲಕ ಸಮುದಾಯದಲ್ಲಿ ನಡೆಯುವ ಜಾತ್ರೆ ಹಬ್ಬಗಳಲ್ಲಿ ಜನರ ಪರಸ್ಪರ ಸಹಕಾರವನ್ನು ತಿಳಿಸುವುದು. | ಮಕ್ಕಳ ಅನುಭವ<br>ಹಬ್ಬ ಮತ್ತು ಜಾತ್ರೆಯ ಬಗ್ಗೆ ಹಾಡು, ಕಥೆ. | | |
| • ವಿಶೇಷ ಅವಶ್ಯಕತೆಯುಳ್ಳವರ ಬಗ್ಗೆ ಸಂವೇದನಾಶೀಲರಾಗಿ ಸಹಾಯ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳುವರು. | • ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಕೌಶಲಗಳ ಬಗ್ಗೆ ಮೆಚ್ಚುಗೆ, ಅವಕಾಶ ನೀಡುವ, ಸಹಾಯ ಮಾಡುವ ಮನೋ ಭಾವವನ್ನು ಬೆಳೆಸಿಕೊಳ್ಳು ವಂತೆ ಮಾಡುವುದು. | • ವಿಶೇಷ ಅವಶ್ಯಕತೆಯುಳ್ಳವರ ಬಗ್ಗೆ ಒಂದು ಘಟನಾವಳಿಯನ್ನು ಚಿತ್ರಿಸಿ ಮಕ್ಕಳ ಪ್ರತಿಕ್ರಿಯೆ ಬಗ್ಗೆ ಚರ್ಚಿಸಿ ಅವರು ಸಂವೇದನಾಶೀಲರಾಗಿ ವರ್ತಿಸುವ ತಿಳುವಳಿಕೆ ನೀಡುವುದು. | • ಒಂದು ಘಟನಾವಳಿಯ ಚಿತ್ರಪಟ | • ನಿನ್ನ ಊರಿನಲ್ಲಿ ಆಚರಿಸುವ ಸಮಾರಂಭಗಳನ್ನು ಹೆಸರಿಸು.<br>• ನಿನ್ನ ಊರಿನಲ್ಲಿ ಆಚರಿಸುವ ಜಾತ್ರೆ ಯಾವುದು? | |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | | | | • ನಿನ್ನ ಊರಿನ ಜಾತ್ರೆಯಲ್ಲಿ ನಡೆಯುವ ಕಾರ್ಯಕ್ರಮಗಳಾವುವು?<br>• ನಿನ್ನ ಮನೆಯಲ್ಲಿ ಆಚರಿಸುವ ಹಬ್ಬಗಳಾವುವು?<br>• ನಿನ್ನ ಮನೆಯ ಹಬ್ಬದಲ್ಲಿ ತಾಯಿಗೆ ಹೇಗೆ ಸಹಕರಿಸುವೆ?<br>• ಅಂಧ ವ್ಯಕ್ತಿ ರಸ್ತೆ ದಾಟುತ್ತಿರುವಾಗ ನೀನು ಏನು ಮಾಡುವೆ?<br>• ನಡೆಯಲು ಕಷ್ಟಕರವಾಗಿರುವ ಸ್ನೇಹಿತನಿಗೆ ಹೇಗೆ ಸಹಕರಿಸುವೆ? | |
| **1.2. ಕೆಲಸ ಮತ್ತು ಆಟ** | | | | | |
| • ತನ್ನ ದಿನನಿತ್ಯದ ಕೆಲಸದ ಚಾರ್ಟ್ ತಯಾರಿಸುವರು.<br>• ಕೆಲವು ಮಕ್ಕಳು ದುಡಿಮೆಯಲ್ಲಿ ತೊಡಗಿರಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಅರಿಯುವರು. | • ಮಕ್ಕಳು ದಿನನಿತ್ಯ ಮಾಡುವ ಕೆಲಸದ ಅರಿವು. (ನನ್ನ ದಿನಚರಿ – ಕಥೆ, ನಿರೂಪಣೆ) ಇತರ ಮಕ್ಕಳ ಕೆಲಸಗಳ ಅರಿವು.<br>• ಕುಟುಂಬದ ಆರ್ಥಿಕ ಸ್ಥಿತಿ, ಪೋಷಕರ ಅನಾರೋಗ್ಯ ....... ಮಕ್ಕಳು | • ಪ್ರತಿ ಮಕ್ಕಳಿಂದಲೂ ತಾವು ಒಂದು ದಿನದಲ್ಲಿ ಮಾಡುವ ಕೆಲಸಗಳ ಪಟ್ಟಿ ತಯಾರಿಸುವುದು.<br>• ಸಾಮಾನ್ಯವಾಗಿ ಮಕ್ಕಳು ಮಾಡುವ ಕೆಲಸಗಳ ಪಟ್ಟಿ<br>• ಸ್ನೇಹಿತರ ಕೆಲಸಗಳೊಂದಿಗೆ ಹೋಲಿಕೆ.<br>• ವಿರಾಮ, ಶಾಲೆ, ಆಟ, ಮನರಂಜನೆಯ ಸಮಯದ ಹಂಚಿಕೆ ಮಾಡಿಸುವುದು. | • ಮಕ್ಕಳ ಅನುಭವಗಳು<br>• ಮಾದರಿ ಕೆಲಸದ ಚಾರ್ಟ್ (ಸಾಮಾನ್ಯವಾದ)<br>• ದುಡಿಯುವ ಮಕ್ಕಳಿಗೆ ಸಂಬಂಧಿಸಿದ ಚಿತ್ರಗಳು.<br>• ವ್ಯಕ್ತಿ ಅಧ್ಯಯನ (ದುಡಿವ ಮಕ್ಕಳ) ಕಥೆಗಳು. | • ಒಂದು ದಿನದಲ್ಲಿ ನೀನು ಹೆಚ್ಚು ಸಮಯ ಬಳಸುವ ಕೆಲಸ ಯಾವುದು?<br>• ನೀನು ಓದುವ ಸಮಯ ಎಷ್ಟು? (ಸುಮಾರು)<br>• ನೀನು ಮಾಡುವ ಕೆಲಸಗಳಲ್ಲಿ ಮುಖ್ಯವಾದ 5 ನ್ನು ಬರೆ. | 4 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | ದುಡಿಮೆಯಲ್ಲಿ ತೊಡಗಬೇಕಾದ ಪರಿಸ್ಥಿತಿಯ ಅರಿವು (ವ್ಯಕ್ತಿ ಅಧ್ಯಯನ ಮೂಲಕ)<br>• ಮಕ್ಕಳ ಹಕ್ಕುಗಳ ಪ್ರಾಥಮಿಕ ಅರಿವು. | • ಶಾಲೆಗೆ ಬರುವ ಮುನ್ನ ಮಕ್ಕಳು ಕುಟುಂಬಕ್ಕೆ ನೆರವಾಗುವ ಸಂದರ್ಭಗಳನ್ನು ವಿವರಿಸುವುದು.<br>• ವ್ಯಕ್ತಿ ಅಧ್ಯಾಯನದ ವಿಷಯದ ಮೂಲಕ ಮಕ್ಕಳೊಂದಿಗೆ ಚರ್ಚಿಸುವುದು.<br>• ದುಡಿಯುವ ಮಕ್ಕಳ ತೊಂದರೆಗಳ ಬಗ್ಗೆಯೂ ಚರ್ಚಿಸುವುದು. | • ಮಕ್ಕಳ ಹಕ್ಕಿನ ಚಾರ್ಟ್. | • ಮಕ್ಕಳು ದುಡಿಯಲು ಕಾರಣವೇನು? | 4 |
| • ಆಟಗಳನ್ನು ಒಳಾಂಗಣ ಮತ್ತು ಹೊರಾಂಗಣ ಆಟಗಳಾಗಿ ವರ್ಗೀಕರಿಸುವರು. ಸ್ಥಳೀಯ ಮತ್ತು ಸಾಂಪ್ರದಾಯಿಕ ಆಟಗಳ ಬಗ್ಗೆ ಹಿರಿಯರಿಂದ ತಿಳಿಯುವರು.<br>• ಆಟಗಳಿಂದಾಗುವ ಪ್ರಯೋಜನವನ್ನು ತಿಳಿಯುವರು. | • ಸ್ಥಳೀಯ ಮತ್ತು ಸಾಂಪ್ರದಾಯಿಕ (ಜಾನಪದ) ಆಟಗಳ ಪರಿಚಯ. ಆಟಗಳನ್ನು ಒಳಾಂಗಣ ಮತ್ತು ಹೊರಾಂಗಣ ಆಟಗಳಾಗಿ ವರ್ಗೀಕರಣ.<br>• ಆಟಗಳಿಂದಾಗುವ ಉಪಯೋಗಗಳು. | • ನೀನು ಆಡುವ ಆಟಗಳನ್ನು ಪಟ್ಟಿ ಮಾಡು.<br>• ನಿನಗೆ ಗೊತ್ತಿರುವ ನೋಡಿರುವ ಆಟಗಳನ್ನು ಪಟ್ಟಿ ಮಾಡು.<br>• ನಿಮ್ಮ ಊರಿನ ಜಾತ್ರೆ, ಹಬ್ಬಗಳಲ್ಲಿ ಆಡುವ ಆಟಗಳನ್ನು ಹೆಸರಿಸು.<br>• ಜಾನಪದ ಆಟಗಳ ಪರಿಚಯದ ಬಗ್ಗೆ ಮತ್ತು ಆಟಗಳ ವರ್ಗೀಕರಣ ಚರ್ಚೆ.<br>• ಆಟಗಳಿಂದಾಗುವ ವಿವಿಧ ಪ್ರಯೋಜನಗಳನ್ನು ಶಿಕ್ಷಕರೊಂದಿಗೆ ಚರ್ಚೆ. | • ಮಕ್ಕಳ ಅನುಭವಗಳು<br>• ಆಟಗಳ ಪ್ರಾತ್ಯಕ್ಷಿಕೆ<br>• ಜಾನಪದ ಆಟಗಳ ಚಿತ್ರಗಳು. | • ನಿನಗೆ ಗೊತ್ತಿರುವ 5 ಆಟಗಳ ಹೆಸರನ್ನು ಹೇಳು.<br>• ಕೊಟ್ಟಿರುವ ಆಟಗಳನ್ನು ಒಳಾಂಗಣ ಹೊರಾಂಗಣ ಆಟಗಳೆಂದು ವರ್ಗೀಕರಿಸು. ಕಬ್ಬಡ್ಡಿ, ಚೌಕಾಬಾರ, ಹಳಗುಣಿ ಮನೆ, ಕೊಕೋ.<br>• ನೀನು ಜಾತ್ರೆಯಲ್ಲಿ ನೋಡಿರುವ ಒಂದು ಆಟದ ಬಗ್ಗೆ ಹೇಳು.<br>• ಆಟಗಳಿಂದಾಗುವ ಉಪ ಯೋಗಗಳನ್ನು ಪಟ್ಟಿ ಮಾಡು. | 4<br>4 |
| • ಕಥೆ ಪುಸ್ತಕಗಳು, ಆಟಗಳು, ರೇಡಿಯೋ, ದೂರದರ್ಶನದಿಂದ ದೊರೆಯುವ ವಿವಿಧ ಮನರಂಜನೆಯ ಬಗ್ಗೆ ತಿಳಿಯುವರು. | • ಮನರಂಜನೆ ಪಡೆಯುವ ವಿಧಾನಗಳು. ಆಟ, ರೇಡಿಯೋ, ದೂರದರ್ಶನದಿಂದ ಸಿಗುವ ಉತ್ತಮ ಮನರಂಜನೆಯ ಬಗ್ಗೆ ಪರಿಚಯ. | • ಮಕ್ಕಳು ಸಂತೋಷಪಡುವ ಸಂದರ್ಭಗಳ ಬಗ್ಗೆ ಚರ್ಚಿಸುವುದು. ಕಥೆ ಪುಸ್ತಕಗಳು, ಆಟಗಳು, ರೇಡಿಯೋ, ದೂರದರ್ಶನದಿಂದ ದೊರೆಯುವ ಮನರಂಜನೆಯ ಬಗ್ಗೆ ಚರ್ಚಿಸುವುದು. ಮನರಂಜನೆ ಕಾರ್ಯಕ್ರಮಗಳ ಬಗ್ಗೆ ಪಟ್ಟಿ ಮಾಡುವುದು ಕೇಳಿ – ಕಲಿ, ಚಿಣ್ಣರ ಚುಕ್ಕಿಯ ಬಗ್ಗೆ ಚರ್ಚಿಸುವುದು. | • ಮಕ್ಕಳ ಅನುಭವ<br>• ರೇಡಿಯೋ .......... | • ರೇಡಿಯೋ, ದೂರದರ್ಶನ, ಕಥೆ ಪುಸ್ತಕ ಈ ಮೂರರಲ್ಲಿ ನಿನಗೆ ಯಾವುದು ಇಷ್ಟ, ಏಕೆ?<br>• ನೀನು ಬಿಡುವಿನ ಸಮಯವನ್ನು ಹೇಗೆ ಕಳೆಯುವೆ? | |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| **1.3. ಪ್ರಾಣಿಗಳು** | | | | | |
| • ನೋಡಿರುವ ಪ್ರಾಣಿಗಳ ಗಾತ್ರ, ಆಕಾರ, ವಾಸಿಸುವ ಸ್ಥಳಗಳ ವೈವಿಧ್ಯತೆಯ ಬಗ್ಗೆ ವರ್ಣಿಸುವರು. | ನೋಡಿರುವ ಪ್ರಾಣಿಗಳ ದೇಹದ ಗಾತ್ರ, ಆಕಾರ, ಅವುಗಳು ವಾಸಿಸುವ ಸ್ಥಳಗಳ ವೈವಿಧ್ಯತೆಯ ಬಗ್ಗೆ ವಿವರಣೆ. | • ಚಿತ್ರ ಮತ್ತು ಮಾದರಿಗಳ ಸಹಾಯದಿಂದ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದರೊಂದಿಗೆ ಪ್ರಾಣಿಗಳ ಗಾತ್ರ, ಆಕಾರ, ವಾಸಿಸುವ ಸ್ಥಳಗಳ ವೈವಿಧ್ಯತೆಯ ಬಗ್ಗೆ ಕಲ್ಪನೆ ಮೂಡಿಸುವುದು.<br>• ಪ್ರಾಣಿಗಳ ವಾಸ ಸ್ಥಳದ ಚಿತ್ರ ತೋರಿಸಿ ಯಾವ ಯಾವ ಪ್ರಾಣಿಗಳು ವಾಸಿಸುತ್ತವೆಂದು ಕಲ್ಪನೆ ಮೂಡಿಸುವುದು.<br>• 2 ಪ್ರಾಣಿಗಳ ಚಿತ್ರ ತೋರಿಸಿ ಅವುಗಳ ಗಾತ್ರ ಮತ್ತು ಆಕಾರಗಳನ್ನು ಹೋಲಿಸಿ ಕಲ್ಪನೆ ಮೂಡಿಸುವುದು. | • ಪ್ರಾಣಿ ಚಿತ್ರಗಳು<br>• ಪ್ರಾಣಿಯ ಮಾದರಿಗಳು<br>• ವಾಸ ಸ್ಥಳದ ಚಿತ್ರಗಳು | • ಕೆಳಗಿನ ಪ್ರಾಣಿಗಳು ಎಲ್ಲಿ ವಾಸ ಮಾಡುವೆ?<br>ಆನೆ, ಹಾವು, ಕುರಿ, ಮೊಸಳೆ, ಕರಡಿ, ಗಿಳಿ, ಮೀನು, ಮಂಗ.<br>• ದೊಡ್ಡ ಗಾತ್ರದ 5 ಪ್ರಾಣಿಗಳ ಹೆಸರು ಬರೆ.<br>• ಕೊಟ್ಟಿರುವ ಪ್ರಾಣಿಗಳಲ್ಲಿ 4 ಚಿಕ್ಕ ಗಾತ್ರದ ಪ್ರಾಣಿಗಳನ್ನು ಆರಿಸಿ ಬರೆ.<br>ಇರುವೆ, ನೊಣ, ಕರಡಿ, ಕಪ್ಪೆ, ಕೋಳಿ, ಹಸು. | 5 |
| • ಪಕ್ಷಿಗಳ ಧ್ವನಿ, ಆಹಾರ, ಆವಾಸ ಮುಂತಾದವುಗಳನ್ನು ಆಧರಿಸಿ ಪಕ್ಷಿಗಳನ್ನು ವರ್ಣಿಸುವರು. | ಪಕ್ಷಿಗಳ ಧ್ವನಿ, ಆಹಾರ ಅವುಗಳ ವಾಸ, ಅವುಗಳ ಸಂಮೂಹ ವರ್ತನೆ, ವಲಸೆಗಳ ಬಗ್ಗೆ ವರ್ಣನೆ. | • ಪಕ್ಷಿಗಳ ಮಾದರಿ ಮತ್ತು ಚಿತ್ರಗಳ ಸಹಾಯ ಹಾಗೂ ಪಕ್ಷಿಗಳ ಧ್ವನಿಯ ಅನುಕರಣೆಯ ಸಹಾಯದಿಂದ ಅವುಗಳ ಆಹಾರ ವಾಸಸ್ಥಳದ ಕಲ್ಪನೆಯನ್ನು ಮೂಡಿಸುವುದು. | • ಪಕ್ಷಿಗಳ ಚಿತ್ರಗಳು<br>• ಮಾದರಿಗಳು, | • ಪಕ್ಷಿಯ ಧ್ವನಿಯನ್ನು ಅನುಕರಿಸಿ ಪಕ್ಷಿ ಹೆಸರು ಹೇಳಿಸುವುದು.<br>ಉದಾ : ಕಾಗೆ, ಕೋಗಿಲೆ.<br>• ಒಂದು ಮರದ ಚಿತ್ರ ಬರೆದು ಆ ಮರದಲ್ಲಿ ವಾಸಿಸುವ ಪಕ್ಷಿಗಳ ಹೆಸರುಗಳನ್ನು ಬರೆ. | 5 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಪ್ರಾಣಿ ಮತ್ತು ಸಸ್ಯಗಳಿಗೆ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಗುರುತಿಸುವರು. | • ಪ್ರಾಣಿ ಮತ್ತು ಸಸ್ಯಗಳಿಗೆ ಇರುವ ಆಕಾರ, ಗಾತ್ರ, ಭಾಗಗಳು, ಬಣ್ಣಗಳ ಸಹಾಯದಿಂದ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಗುರುತಿಸುವುದು. | • ಪ್ರಾಣಿ ಮತ್ತು ಸಸ್ಯಗಳ ಚಿತ್ರಗಳು / ಮಾದರಿಗಳನ್ನು ಇಟ್ಟುಕೊಂಡು ಅವುಗಳ ಸಹಾಯದಿಂದ ಸಸ್ಯ ಮತ್ತು ಪ್ರಾಣಿಗಳಿಗೆ ಇರುವ ಹೋಲಿಕೆ ಮತ್ತು ವ್ಯತ್ಯಾಸದ ಕಲ್ಪನೆಯನ್ನು ನೀಡುವುದು.<br>• ಪರಿಸರಕ್ಕೆ ಕರೆದೊಯ್ದು ಮಗುವಿಗೆ ಸಸ್ಯ ಮತ್ತು ಪ್ರಾಣಿಗಳನ್ನು ತೋರಿಸುತ್ತಾ ಅವುಗಳ ಗಾತ್ರ, ಆಕಾರ, ಬಣ್ಣ ಭಾಗಗಳನ್ನು ಪರಿಚಯಿಸಿ ವ್ಯತ್ಯಾಸ ಮತ್ತು ಹೋಲಿಕೆಯ ಕಲ್ಪನೆ ನೀಡುವುದು. | • ಸಸ್ಯ, ಪ್ರಾಣಿಗಳ ಚಿತ್ರಗಳು / ಮಾದರಿಗಳು<br>• ತಮ್ಮ ಸುತ್ತಲಿನ ಪರಿಸರ,<br>• ಹೊರ ಸಂಚಾರ.<br>• ಮಗುವಿನ ಅನುಭವ. | • ಸಸ್ಯ ಮತ್ತು ಪ್ರಾಣಿಗಳಿಗೆ ಇರುವ ವ್ಯತ್ಯಾಸಗಳನ್ನು ಪಟ್ಟಿ ಮಾಡು.<br>• ಸರಿ ತಪ್ಪು ಬರೆಯಿರಿ. ಸಸ್ಯಗಳು ಚಲಿಸುತ್ತವೆ.<br>• ಎಲ್ಲಾ ಪ್ರಾಣಿಗಳು ಬೇರೆ ಬೇರೆ ಬಣ್ಣದಲ್ಲಿರುತ್ತವೆ.<br>• ಪ್ರಾಣಿಗಳು ನಿರ್ದಿಷ್ಟ ಕಾಲದವರೆಗೆ ಮಾತ್ರ ಬದುಕುತ್ತವೆ. | 5 |
| **1.4. ಸಸ್ಯಗಳು** | | | | | |
| • ಸಸ್ಯಗಳ ಗಾತ್ರ, ಬೆಳೆಯುವ ಪ್ರದೇಶ ಬಣ್ಣ ಆಕಾರಗಳಲ್ಲಿರುವ ವೈವಿಧ್ಯತೆಯ ಬಗ್ಗೆ ತಿಳಿದಿರುವ ಅಂಶಗಳನ್ನು ವ್ಯಕ್ತ ಪಡಿಸುವರು ಹಾಗೂ ಸಸ್ಯಗಳನ್ನು ಬೆಳೆಸಲು ಆಸಕ್ತಿ ವಹಿಸುವರು.<br>ತಮ್ಮ ವಿಭಾಗದ ಪ್ರದೇಶಗಳಲ್ಲಿ ಕಂಡು ಬರುವ ಸಸ್ಯಗಳ ವೈವಿಧ್ಯತೆ ಬಗ್ಗೆ ತಿಳಿಯುವುದು. | • ಸಸ್ಯಗಳ ಗಾತ್ರ, ಬೆಳೆಯುವ ಪ್ರದೇಶ, ಬಣ್ಣ ಆಕಾರಗಳಲ್ಲಿರುವ ವೈವಿಧ್ಯತೆ – ವಿವಿಧ ಸಸ್ಯಗಳನ್ನು ಪರಿಚಯಿಸುವುದರ ಮೂಲಕ.<br>• ಸಸ್ಯಗಳನ್ನು ಬೆಳೆಸುವ ಅಗತ್ಯತೆ ಮನಗಾಣುವರು. | • ಮಕ್ಕಳನ್ನು ಪರಿಸರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ವಿವಿಧ ಸಸ್ಯಗಳ ಗಾತ್ರ, ಬಣ್ಣ, ಆಕಾರಗಳಲ್ಲಿರುವ ವೈವಿಧ್ಯತೆಯನ್ನು ಗಮನಿಸಲು ತಿಳಿಸುವುದು. (ವೀಕ್ಷಣೆ)<br>• ಗಿಡ, ಪೊದೆ, ಬಳ್ಳಿ, ಮರಗಳನ್ನು ಗುರುತಿಸಲು ತಿಳಿಸುವುದು.<br>• ವಿವಿಧ ಪ್ರದೇಶಗಳಲ್ಲಿ ಬೆಳೆಯುವ ಸಸ್ಯಗಳನ್ನು ಚಿತ್ರಗಳ ಮೂಲಕ ಪರಿಚಯಿಸಿ ಅವುಗಳಲ್ಲಿರುವ ವಿಶೇಷ ಅಂಶಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು.<br>• ಸ್ನೇಹಿತರ ಸಹಕಾರದಿಂದ ಶಾಲಾ ಕೈತೋಟ ನಿರ್ಮಾಣ. | • ಸುತ್ತಲ ಪರಿಸರ<br>• ಹೊರ ಸಂಚಾರ<br>• ಚಿತ್ರಗಳು<br>• ಮಕ್ಕಳ ಅನುಭವಗಳು<br>• ಹಿರಿಯರ ಅನುಭವಗಳು | • ಮರುಭೂಮಿಯಲ್ಲಿ ಬೆಳೆಯುವ ಸಸ್ಯಗಳು ಯಾವುವು?<br>• ನಿನಗೆ ತಿಳಿದಿರುವ ಗಿಡ, ಪೊದೆ, ಬಳ್ಳಿ, ಮರ ಹಾಗೂ ಅವುಗಳಿಂದ ಸಿಗುವ ತರಕಾರಿ/ಹಣ್ಣು/ ಆಹಾರ ಪಟ್ಟಿ ಮಾಡು.<br>• ಕೊಟ್ಟಿರುವ ಸಸ್ಯಗಳ ಪಟ್ಟಿಯಲ್ಲಿ ಎತ್ತರವಾದ/ ಗಿಡ್ಡದಾದ ಸಸ್ಯ ಹುಡುಕು. ತೆಂಗು, ಬಾಳೆ, ತುಂಬೆ, ಆಲ.<br>• ನೀನು ನೋಡಿರುವ ಒಂದು ಸಸ್ಯದ ಬಗ್ಗೆ (ಬಣ್ಣ, ಎತ್ತರ, ಪ್ರದೇಶ) ವಿವರಿಸು.<br>• ಶಾಲಾ ಕೈತೋಟದಲ್ಲಿ ಬೆಳೆಸಿರುವ ಸಸ್ಯಗಳನ್ನು ಪಟ್ಟಿ ಮಾಡು. | 5 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಹಿರಿಯರಿಂದ ಹಿಂದೆ ಮತ್ತು ಈಗಿನ ಬೆಳೆಗಳ ಬದಲಾವಣೆಯ ಬಗ್ಗೆ ಮಾಹಿತಿ ಪಡೆಯುವರು, ಪರಿಸರಕ್ಕನುಗುಣವಾಗಿ ಸ್ಥಳೀಯ ಸಸ್ಯಗಳು ಬೆಳೆಯುತ್ತವೆ ಎಂಬುದನ್ನು ತಿಳಿಯುವರು<br>(ತಮ್ಮ ಜಿಲ್ಲೆಗಳಲ್ಲಿ ಕಂಡು ಬರುವ ವಿಶಿಷ್ಟ ಬೆಳೆಗಳ ಬಗ್ಗೆ ತಿಳಿಯುವರು) | • ಹಿಂದೆ ಬೆಳೆಯುತ್ತಿದ್ದ ಬೆಳೆಗಳು, ಈಗಿನ ಬೆಳೆಗಳು (ಹೆಚ್ಚಾಗಿ ಬೆಳೆಯುವ).<br>ಪರಿಸರ ಮತ್ತು ಸಸ್ಯಗಳು ಹೇಗೆ ಹೊಂದಾಣಿಕೆ ಯಾಗಿವೆ ಎಂಬುದನ್ನು ಉದಾಹರಣೆಗಳೊಂದಿಗೆ ಸ್ಪಷ್ಟ ಪಡಿಸುವುದು.<br>ಉದಾ : ತಾವರೆ, ಕಳ್ಳಿ, ಡ್ರಾಸಿರಾ, ಅಪ್ಪು ಸಸ್ಯ .... ಅಂತರಗಂಗೆ .... | • ನಿನ್ನ ಊರಿನಲ್ಲಿ ಬೆಳೆಯುವ ಬೆಳೆಗಳಾವುವು?<br>• ನಿನ್ನ ಮನೆಯವರಿಂದ ಹಿಂದೆ ಬೆಳೆಯುತ್ತಿದ್ದ ಬೆಳೆಗಳ ಬಗ್ಗೆ ತಿಳಿದುಕೊಂಡು ಬಾ. ಈ ಪ್ರಶ್ನೆಗಳ ಮೂಲಕ ಮಕ್ಕಳೊಂದಿಗೆ ಚರ್ಚೆ. ಕೆಲವು ಚಿತ್ರಗಳ ಸಹಾಯದಿಂದಲೂ ಚರ್ಚೆ. ಸಸ್ಯ ಮತ್ತು ಪರಿಸರ ಹೊಂದಾಣಿಕೆ ಬಗ್ಗೆ ಭತ್ತ, ರಾಗಿ, ಕಾಫಿ, ...... ಇತ್ಯಾದಿ ಬೆಳೆಗಳ ಮೂಲಕ ಚರ್ಚಿಸುವುದು. ಮರುಭೂಮಿ, ಬಯಲು, ಬೆಟ್ಟದಲ್ಲಿ ಬೆಳೆಯುವ ಸಸ್ಯಗಳು ಮತ್ತು ಪರಿಸರದ ಹೊಂದಾಣಿಕೆ ಬಗ್ಗೆ ಮಕ್ಕಳಿಗೆ ವಿವರಿಸುವುದು. ವಿಶಿಷ್ಟ ಸಸ್ಯಗಳು ಮತ್ತು ಹೊಂದಾಣಿಕೆ ಬಗ್ಗೆ ಚರ್ಚೆ. | • ಹಿರಿಯರ ಅನುಭವ<br>• ಮಕ್ಕಳ ಅನುಭವ<br>• ಸುತ್ತಲ ಪರಿಸರ<br>• ವಿವಿಧ ಪರಿಸರ – ಸಸ್ಯಗಳ ಚಿತ್ರಗಳು<br>• ಫೋಟೋಗಳ ಸಂಗ್ರಹ | • ಹಿಂದೆ ನಿಮ್ಮ ಊರಿನಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದ ಬೆಳೆಗಳು ಯಾವುವು? ಈಗ ಬೆಳೆಯುವ ಬೆಳೆಗಳು ಯಾವುವು?<br>• ಮರುಭೂಮಿಯಲ್ಲಿ ಸಸ್ಯಗಳು ಹೆಚ್ಚಾಗಿ ಬೆಳೆಯುವುದಿಲ್ಲ ಏಕೆ?<br>• ತಾವರೆ ಎಲೆಗಳು ಏಕೆ ನೀರಿನ ಮೇಲೆ ತೇಲುತ್ತವೆ? | 4 |
| • ವಿವಿಧ ರೀತಿಯ ಎಲೆಗಳನ್ನು ಸಂಗ್ರಹಿಸಿ ಅವುಗಳ ಆಕಾರ, ಬಣ್ಣ, ರಚನೆ, ವಾಸನೆಯ ಬಗ್ಗೆ ಚರ್ಚಿಸುವರು. ಕೆಲವು ಋತುಗಳಲ್ಲಿ ಎಲೆಗಳು ಉದುರುವುದನ್ನು ಗಮನಿಸುವರು. | • ವಿವಿಧ ಆಕಾರಗಳ ಎಲೆಗಳು (ಉದ್ದವಾದ, ಅಗಲವಾದ, ಚೂಪಾದ, ಚಿಕ್ಕ, ದೊಡ್ಡ)<br>ವಿವಿಧ ಬಣ್ಣದ ಎಲೆಗಳು.<br>ತುಳಸಿ, ಪುದೀನ, ಕರಿಬೇವು ...... ಇತ್ಯಾದಿ ವಾಸನೆಗಳ ಎಲೆಗಳು ಉದಾಹರಣೆಗಳ ಮೂಲಕ ಪರಿಕಲ್ಪನೆ.<br>ಚಳಿಗಾಲದಲ್ಲಿ ಎಲೆಗಳು ಉದುರುತ್ತವೆ. | • ವಿವಿಧ ರೀತಿಯ ಎಲೆಗಳ ಸಂಗ್ರಹ. ಅವುಗಳ ಬಣ್ಣ, ಆಕಾರ, ರಚನೆ, ವಾಸನೆಯ ಬಗ್ಗೆ ಚರ್ಚೆ.<br>ಇವುಗಳಲ್ಲಿರುವ ವ್ಯತ್ಯಾಸಗಳನ್ನು ಗುರುತಿಸುವುದು.<br>• ಎಲೆಗಳಿಂದ ಚಿತ್ರ ರಚನೆ.<br>• ಎಲೆಗಳ ಟ್ರೇಸಿಂಗ್ – ಒಣಗಿಸಿ ಚಾರ್ಟ್ ತಯಾರಿಕೆ. | • ವಿವಿಧ ರೀತಿಯ ಎಲೆಗಳು.<br>• ವಾಸನೆಯ ಎಲೆಗಳು<br>• ಮಕ್ಕಳ ಅನುಭವಗಳು<br>• ಬಣ್ಣ, ಹಾಳೆ, ಪರಿಸರ. | • ಚಿತ್ರದಲ್ಲಿ ಕೊಟ್ಟಿರುವ ಎಲೆಗಳ ವ್ಯತ್ಯಾಸವನ್ನು ಬರೆ.<br>• ವಾಸನೆಯುಕ್ತ ಯಾವ ಎಲೆಗಳನ್ನು ನಾವು ದಿನನಿತ್ಯದ ಅಡುಗೆಯಲ್ಲಿ ಬಳಸುತ್ತೇವೆ? | 5 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಉದುರಿದ ಎಲೆಗಳನ್ನು ಬಳಸಿ ಸಾವಯವ ಗೊಬ್ಬರ ತಯಾರಿಸುವ ವಿಧಾನವನ್ನು ಕಲಿಯುವರು. | • ಉದುರಿದ ಎಲೆಗಳನ್ನು ಬಳಸಿ ಸಾವಯವ ಗೊಬ್ಬರ ತಯಾರಿಸುವ ವಿಧಾನದ ಪರಿಚಯ (ಸರಳ) | • ಪರಿಸರ ವೀಕ್ಷಣೆ. ಎಲೆಗಳ ಉದುರುವ ಕಾಲದ ಬಗ್ಗೆ ಚರ್ಚೆ<br>• ಉದುರಿದ ಎಲೆಗಳ ಸಂಗ್ರಹ.<br>• ಸಾವಯವ ಗೊಬ್ಬರ ತಯಾರಿಕೆಯ ಪ್ರಾತ್ಯಕ್ಷಿಕೆ.<br>• ಇದರ ಉಪಯೋಗಗಳ ಬಗ್ಗೆ ಚರ್ಚಿಸುವುದು. | ಶಾಲಾ ಆವರಣದ ಬಳಕೆ.<br>ಎಲೆಗಳ ಸಂಗ್ರಹ<br>ಹಿರಿಯರ ಅನುಭವ | • ಸಾಮಾನ್ಯವಾಗಿ ಎಲೆಗಳು ಯಾವ ಕಾಲದಲ್ಲಿ ಉದುರುತ್ತವೆ?<br>• ಉದುರಿದ ಎಲೆಗಳಿಂದ ಸಾವಯವ ಗೊಬ್ಬರವನ್ನು ಹೇಗೆ ತಯಾರಿಸಬಹುದು?<br>• ನಿಮ್ಮ ಶಾಲೆಯಲ್ಲಿ ನೀನು ಮತ್ತು ಸ್ನೇಹಿತರು ಸೇರಿ ಸಾವಯವ ಗೊಬ್ಬರ ತಯಾರಿಸಿ. | 5 |
| • ವಿವಿಧ ವಸ್ತುಗಳ ಮೇಲೆ ಚಿತ್ರಿಸಿರುವ ಎಲೆಗಳನ್ನು ಗುರುತಿಸುವರು. | • ಎಲೆಗಳ ಆಕಾರ ಮತ್ತು ಎಲೆಗಳ ಅಚ್ಚು ಇರುವ ಚಿತ್ರಗಳು, ವಸ್ತುಗಳನ್ನು ಗುರುತಿಸುವುದು. (ಸೃಜನಶೀಲ ಬೆಳವಣಿಗೆಗಾಗಿ) | • ಎಲೆಗಳ ಆಕಾರವನ್ನು ಯಾವ ವಸ್ತುಗಳ ಮೇಲೆ (ಎಲ್ಲೆಲ್ಲಿ) ನೋಡಿರುವೆ? ಚರ್ಚೆ.<br>• ಎಲೆಗಳ ಅಚ್ಚುಗಳಿರುವ ವಸ್ತುಗಳ ಬಗ್ಗೆ ಮಕ್ಕಳಿಗೆ ಪರಿಚಯ, ವೀಕ್ಷಣೆ, ಅನ್ವೇಷಣೆ. ಮಕ್ಕಳು ಎಲೆಗಳ ಆಕಾರವಿರುವ ವಸ್ತುಗಳನ್ನು ಗಮನಿಸಲು, ಹುಡುಕಲು ಹೇಳಿ ಸಮಯ ನೀಡುವುದು. ಮಕ್ಕಳು ಗುರ್ತಿಸಿರುವ ವಸ್ತುಗಳ ಪಟ್ಟಿ ತಯಾರಿಸುವುದು.<br>• ಮಣ್ಣಿನಿಂದ ಮಡಕೆ ಮಾದರಿ ಮಾಡಿಸಿ ಅದರ ಮೇಲೆ ಬಣ್ಣದಿಂದ ಎಲೆಗಳನ್ನು ಬರೆಸುವುದು. ಕಾಗದ (ಬಣ್ಣದ) ದಿಂದ ಎಲೆಗಳ ತೋರಣ. | • ಸ್ಥಳೀಯ ಪರಿಸರ<br>ಮನೆ, ಸ್ನೇಹಿತರ ಮನೆ, ಸಂಪರ್ಕ ಮಾಧ್ಯಮಗಳು,<br>• ಮಕ್ಕಳ ಅನುಭವಗಳು<br>• ಚಿತ್ರಗಳು. | • ವಸ್ತುಗಳ ಮೇಲೆ ಎಲೆಯ ಚಿತ್ರವಿರುವ / ಅಚ್ಚುಗಳಿರುವ ಐದು ವಸ್ತುಗಳ ಹೆಸರು ಬರೆ?<br>• ನಿಮ್ಮ ಮನೆಯಲ್ಲಿ ಯಾವ ವಸ್ತುವಿನ ಮೇಲೆ ಎಲೆಯ ಆಕೃತಿ (ಚಿತ್ರ) ಅಥವಾ ಎಲೆಯ ಅಚ್ಚು ಇದೆ?<br>• ಯಾವುದಾದರೂ ಒಂದು ವಸ್ತುವಿನ ಮೇಲೆ ಎಲೆಯ ಚಿತ್ರ ರಚಿಸಿ ಬಣ್ಣ ತುಂಬಿ ಅಲಂಕಾರ ಮಾಡು.<br>• ಶಾಲೆಗಾಗಿ ಮಣ್ಣಿನ ಹೂದಾನಿ ಮಾಡಿ ಅದನ್ನು ಎಲೆಗಳ ಚಿತ್ರ ಬರೆದು ಬಣ್ಣದಿಂದ ಅಲಂಕರಿಸು. | 3 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| **2. ಆಹಾರ** | | | | | |
| • ಆಹಾರದಲ್ಲಿನ ವೈವಿಧ್ಯತೆಯನ್ನು ತಿಳಿಯುವರು.<br>• ತಮ್ಮ ಜಿಲ್ಲೆಗಳಲ್ಲಿನ ವೈವಿಧ್ಯಮಯ ಆಹಾರವನ್ನು ಪರಿಚಯ ಮಾಡಿಕೊಳ್ಳುವರು<br>• ಸಸ್ಯ ಜನ್ಯ ಮತ್ತು ಪ್ರಾಣಿ ಜನ್ಯ ಆಹಾರವನ್ನು ಪಟ್ಟಿ ಮಾಡುವರು. | • ನಾವು ಸೇವಿಸುವ ಆಹಾರದಲ್ಲಿರುವ ವೈವಿಧ್ಯತೆ.<br>• ಸಸ್ಯಗಳಿಂದ ಪಡೆಯುವ (ತರಕಾರಿ, ಹಣ್ಣು, ಸೊಪ್ಪು - ಧಾನ್ಯಗಳು ಇತ್ಯಾದಿ) ಪ್ರಾಣಿಗಳಿಂದ ಪಡೆಯುವ (ಹಾಲು, ಮಾಂಸ, ಮೊಟ್ಟೆ) ಆಹಾರ ಪದಾರ್ಥಗಳ ಪಟ್ಟಿ | • ಆಹಾರದ ಚಿತ್ರಗಳನ್ನು ತೋರಿಸಿ ಮಗುವು ಸೇವಿಸುವ ಮತ್ತು ಸೇವಿಸದೇ ಇರುವ ಆಹಾರದ ವೈವಿಧ್ಯತೆ ಕಲ್ಪನೆಯನ್ನು ಮೂಡಿಸುವುದು.<br>• ವಿವಿಧ ರೀತಿಯ ಆಹಾರ ವಸ್ತುಗಳ ಚಿತ್ರಗಳನ್ನು ತೋರಿಸಿ ಆಹಾರ ಪದಾರ್ಥಗಳು ಯಾವ ಮೂಲದಿಂದ ದೊರೆಯುತ್ತವೆಂದು ಕಲ್ಪನೆ ಮೂಡಿಸುವುದು.<br>• ತಾನು ಸೇವಿಸುವ ಆಹಾರ ವಸ್ತುಗಳ ಪಟ್ಟಿ ತಯಾರಿಸಿ ಅವುಗಳ ಮೂಲವನ್ನು ಗುರ್ತಿಸುವಂತೆ ಮಾಡುವುದು. | • ಆಹಾರ ವಸ್ತುಗಳ ಚಿತ್ರಪಟಗಳು.<br>• ಧಾನ್ಯಗಳು, ತರಕಾರಿ, ಮೊಟ್ಟೆ, ಮಾಂಸದ ಚಿತ್ರಗಳು. | • ನೀನು ಹೆಚ್ಚು ಇಷ್ಟಪಡುವ ತರಕಾರಿ ಯಾವುದು?<br>• ಕೊಟ್ಟಿರುವ ಆಹಾರ ವಸ್ತುಗಳಲ್ಲಿ ಸಸ್ಯ ಜನ್ಯ ಮತ್ತು ಪ್ರಾಣಿ ಜನ್ಯ ಆಹಾರ ಪದಾರ್ಥಗಳನ್ನು ಬೇರ್ಪಡಿಸಿ ಬರೆ.<br>ಉದಾ : ಹಾಲು, ಬಾಳೆಹಣ್ಣು, ಬೇಳೆ, ಮೊಸರು, ದ್ರಾಕ್ಷಿ, ಸೌತೆಕಾಯಿ, ಮಾಂಸ. | 7 |
| • ಆಹಾರ ತಯಾರಿಕೆಯಲ್ಲಿ ಬಳಸುವ ವಿವಿಧ ಪರಿಕರಗಳು ಮತ್ತು ಇಂಧನಗಳನ್ನು ಗುರುತಿಸುವರು. | ಮನೆಯಲ್ಲಿ ಆಹಾರವನ್ನು ತಯಾರಿಸುವಾಗ ಬಳಸುವ ಪರಿಕರಗಳು [ಪಾತ್ರೆಗಳು, ಸೌಟು, ಪ್ಲೇಟ್, ತಟ್ಟೆ ಒಲೆ ಇತ್ಯಾದಿ] ಇಂಧನಗಳು [ಗ್ಯಾಸ್, ಸೀಮೆ ಎಣ್ಣೆ ಸ್ಟೌವ್, ಸೌದೆ ಒಲೆ, ವಿದ್ಯುತ್ ಒಲೆ] ಗಳನ್ನು ಗುರ್ತಿಸುವುದು. | • ಸರಳ ಪ್ರಶ್ನೆಗಳನ್ನು ಕೇಳುವುದರ ಮೂಲಕ ಅಡುಗೆ ತಯಾರಿಕೆಯ ಪರಿಕರಗಳು, ಇಂಧನಗಳ ಬಗ್ಗೆ ಕಲ್ಪನೆಯನ್ನು ಮೂಡಿಸುವುದು.<br>ಉದಾ : ಅಡುಗೆ ಮಾಡಲು ಯಾವ ವಸ್ತುಗಳನ್ನು ಉಪಯೋಗಿಸುತ್ತಾರೆ. ಯಾವುದರ ಸಹಾಯದಿಂದ ಅಡುಗೆ ಮಾಡುತ್ತಾರೆ.<br>• ಯಾವುದರ ಸಹಾಯದಿಂದ ಅಡುಗೆ ಮಾಡುತ್ತಾರೆ. | ಪ್ರಶ್ನೆಗಳು.<br>ಅಡುಗೆಯ ಪರಿಕರಗಳು. | • ನಿಮ್ಮ ಮನೆಯಲ್ಲಿ ಅಡುಗೆ ಮಾಡಲು ಬಳಸುವ ಪರಿಕರಗಳನ್ನು ಪಟ್ಟಿ ಮಾಡು.<br>• ನಿಮ್ಮ ಮನೆಯಲ್ಲಿ ಅಡುಗೆ ಮಾಡಲು ಯಾವ ಇಂಧನವನ್ನು ಬಳಸುತ್ತಾರೆ. | 6 |
| • ಆಹಾರ ತಯಾರಿಕೆಯಲ್ಲಿ ಕುಟುಂಬದ ಸದಸ್ಯರ ಪಾತ್ರವನ್ನು ಗುರುತಿಸುವರು. | • ಆಹಾರವನ್ನು ತಯಾರಿಸಲ್ಪಡುವ ಕಾರ್ಯದಲ್ಲಿ ತಾನು ಮತ್ತು ತನ್ನ ಕುಟುಂಬದಲ್ಲಿರುವ | • ಒಂದು ಮಗುವನ್ನು ಪ್ರಶ್ನಿಸಿ ತನ್ನ ಕುಟುಂಬದಲ್ಲಿ ಆಹಾರ ತಯಾರಿಕೆಯಲ್ಲಿ ಸದಸ್ಯರುಗಳ ಪಾತ್ರಗಳನ್ನು ತಿಳಿದು ಅದರ ಕಲ್ಪನೆಯನ್ನು ಮೂಡಿಸುವುದು. | • ಪ್ರಶ್ನೆಗಳು<br>• ಆಹಾರತಯಾರಿಕೆ ಯಾರ್ಟ್‌ಗಳು | • ನಿಮ್ಮ ಮನೆಯಲ್ಲಿ ಅಡುಗೆ ಮಾಡುವಾಗ ನಿಮ್ಮ ಅಮ್ಮನಿಗೆ ನೀನು ಏನು ಸಹಾಯ ಮಾಡುವೆ? | 5 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | ಸಹ ಸದಸ್ಯರುಗಳ ಪಾತ್ರವೇನು ? ಎಂಬುದನ್ನು ಗುರುತಿಸುವುದು.<br>ಉದಾ : ಪಾತ್ರೆ ತೊಳೆಯುವುದು, ತರಕಾರಿ ಕತ್ತರಿಸುವುದು. | ಉದಾ : ಪಾತ್ರೆ ಯಾರು ತೊಳೆಯುತ್ತಾರೆ ? ತರಕಾರಿಗಳನ್ನು ಯಾರು ಕತ್ತರಿಸುತ್ತಾರೆ ? | | | |
| • ಲಿಂಗ, ವಯಸ್ಸು ಮತ್ತು ದೈಹಿಕ ಚಟುವಟಿಕೆಗಳಿಗನುಗುಣವಾಗಿ ಸೇವಿಸುವ ಆಹಾರದ ಪ್ರಮಾಣವನ್ನು ಗುರುತಿಸುವರು. (ಮಗುವಿಗೆ ಹಾಲಿನ ಅವಶ್ಯಕತೆಯನ್ನು ಗುರುತಿಸುವರು) | • ತನ್ನ ಮತ್ತು ತನ್ನ ಕುಟುಂಬದ ಸದಸ್ಯರುಗಳ ವಯಸ್ಸಿನ ಆಧಾರದ ಮೇಲೆ ಯಾರು ಎಷ್ಟು ಆಹಾರ ಸೇವಿಸುತ್ತಾರೆ, ಯಾರು ಯಾವ ಆಹಾರ ಸೇವಿಸುತ್ತಾರೆ ಎಂಬುದನ್ನು ಗುರುತಿಸುವುದು. | • ಮಗು ಮತ್ತು ಮನೆಯ ಸದಸ್ಯರುಗಳ ಆಹಾರ ಪ್ರಮಾಣದ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಾ ತಾನು ಎಷ್ಟು ಊಟ ಮಾಡುತ್ತೇನೆ ಇತರ ಸದಸ್ಯರುಗಳು ಎಷ್ಟು ಪ್ರಮಾಣದಲ್ಲಿ ಊಟ ಮಾಡುತ್ತಾರೆಂದು ತಿಳಿದು ಮಕ್ಕಳಿಗೆ ಕಲ್ಪನೆ ಮೂಡಿಸುವುದು.<br>• ಚಿಕ್ಕ ಮಗುವಿಗೆ ಹಾಲಿನ ಮಹತ್ವದ ಕಲ್ಪನೆ ಮೂಡಿಸುವುದು. | • ಹಾಲಿನ ಮಹತ್ವದ ಪಾರ್ಟ್. | • ನಿಮ್ಮ ಮನೆಯಲ್ಲಿ ನೀನು ಸೇವಿಸುವ ಆಹಾರ ಪ್ರಮಾಣ (ಅಂದಾಜು) ಎಷ್ಟು? (ಅನೌಪಚಾರಿಕ ಅಳತೆ)<br>• ನಿಮ್ಮ ಮನೆಯಲ್ಲಿರುವ ಸಣ್ಣ ಮಗುವಿಗೆ ಯಾವ ಆಹಾರ ನೀಡುತ್ತೀರಾ?<br>• ಹಾಲು ಸೇವಿಸುವುದರಿಂದ ಏನು ಪ್ರಯೋಜನ? | 4 |
| • ಸಾಕು ಪ್ರಾಣಿ ಮತ್ತು ಕಾಡು ಪ್ರಾಣಿಗಳ ಆಹಾರವನ್ನು ಗುರುತಿಸುವರು. | ಮನೆಯಲ್ಲಿ ಸಾಕುವ ಪ್ರಾಣಿಗಳು (ಬೆಕ್ಕು, ನಾಯಿ, ಹಸು, ಮೇಕೆ, ಕುರಿ, ಎಮ್ಮೆ , ಕೋಳಿ ಇತ್ಯಾದಿ)<br>ಕಾಡು ಪ್ರಾಣಿಗಳು (ಹುಲಿ, ಸಿಂಹ, ಆನೆ, ನರಿ, ಕರಡಿ, ಚಿರತೆ ಇತ್ಯಾದಿ) ಆಹಾರವನ್ನು ಗುರುತಿಸುವುದು. | • ತಮ್ಮ ಮನೆಯಲ್ಲಿ ಸಾಕುವ ಪ್ರಾಣಿಗಳ ಆಹಾರವೇನು? ಯಾವ ಬಗ್ಗೆಯ ಆಹಾರವನ್ನು ಸೇವಿಸುತ್ತವೆ ಎಂಬುದನ್ನು ಚರ್ಚೆಯ ಮೂಲಕ ಕಲ್ಪನೆ ಮೂಡಿಸುವುದು.<br>• ಕಾಡಿನಲ್ಲಿ ವಾಸಿಸುವ ಕೆಲವು ಪ್ರಾಣಿಗಳು ಆಹಾರ ಸೇವಿಸುತ್ತಿರುವ ಚಿತ್ರಗಳ ಸಹಾಯದಿಂದ ಅವುಗಳ ಆಹಾರದ ಕಲ್ಪನೆಯನ್ನು ಮೂಡಿಸುವುದು. | • ಸಾಕು ಪ್ರಾಣಿಗಳ ಪಟ್ಟಿ ಚಿತ್ರಗಳು.<br>• ಕಾಡು ಪ್ರಾಣಿಗಳ ಪಟ್ಟಿ ಚಿತ್ರಗಳು.<br>• ಮಕ್ಕಳ ಅನುಭವಗಳು | • ನಿಮ್ಮ ಮನೆಯಲ್ಲಿರುವ ನಾಯಿ ಯಾವ ಆಹಾರವನ್ನು ಸೇವಿಸುತ್ತದೆ?<br>• ಕೆಳಗೆ ಕೊಟ್ಟಿರುವ ಪ್ರಾಣಿಗಳು ಯಾವ ಆಹಾರವನ್ನು ಸೇವಿಸುತ್ತವೆ. | 5 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | | • ಕೆಲವು ಪ್ರಾಣಿಗಳ ಚಿತ್ರಗಳನ್ನು ನೀಡಿ ಅವು ತಿನ್ನುವ ಆಹಾರದ ಮೇಲೆ ಚರ್ಚಿಸುವುದು.<br>ಉದಾ : ಕುರಿ, ಮೇಕೆಯ ಆಹಾರವೇನು?<br>ಹುಲಿ ಏನನ್ನು ತಿನ್ನುತ್ತದೆ?<br>ಬೆಕ್ಕು ಏನನ್ನು ಸೇವಿಸುತ್ತದೆ? | | ಹುಲಿ, ಎಮ್ಮೆ, ಬೆಕ್ಕು, ಕೋಳಿ, ಹಸು, ಮೇಕೆ, ಕರಡಿ, ಆನೆ.<br>• ನಿಮ್ಮ ಮನೆಯಲ್ಲಿ ಸಾಕಿರುವ ಪ್ರಾಣಿಗಳ ಹೆಸರುಗಳನ್ನು ಬರೆದು ಅವುಗಳು ತಿನ್ನುವ ಆಹಾರವನ್ನು ಪಟ್ಟಿ ಮಾಡು.<br>• ಕಾಡಿನಲ್ಲಿ ವಾಸಿಸುವ ಪ್ರಾಣಿಗಳನ್ನು ಪಟ್ಟಿ ಮಾಡಿ ಅವುಗಳು ಸೇವಿಸುವ ಆಹಾರವನ್ನು ಬರೆ. | |
| **3. ವಸತಿ** | | | | | |
| • ಶಾಲೆಯಲ್ಲಿ ಉಂಟಾಗುವ ವಿವಿಧ ಕಸಗಳನ್ನು ಗುರುತಿಸುವರು. ಇದರ ಸರಿಯಾದ ವಿಲೇವಾರಿ ಕ್ರಮವನ್ನು ಅರಿಯುವರು ಮತ್ತು ಅನುಸರಿಸುವರು. | • ಶಾಲೆಯಲ್ಲಿ ಉಂಟಾಗುವ ಕಸ (ಪೇಪರ್, ಪೆನ್ಸಿಲ್ ಕಸ, ಮಣ್ಣು ಧೂಳು ...... ಇತ್ಯಾದಿ) ಗಳ ಪರಿಚಯ. ಇದನ್ನು ದೂರದ ಕಸದ ಗುಂಡಿಗೆ ಹಾಕುವುದು. ತರಕಾರಿ ಕಸವನ್ನು (ಅಕ್ಷರ ದಾಸೋಹ) ಗಿಡಗಳಿಗೆ ಹಾಕುವುದು. ಅಪಾಯಕಾರಿ (ಬ್ಲೇಡ್, ಮುಳ್ಳು .....) ಕಸವನ್ನು ಯಾರು ತುಳಿಯದ ಕಡೆ ಸಂಗ್ರಹಿಸುವುದು. | • ಶಾಲೆಯಲ್ಲಿ ಉಂಟಾಗುವ ಕಸದ ವೀಕ್ಷಣೆ, ಕಸ ಸಂಗ್ರಹ, ದಿನಾಲೂ ಕಸವನ್ನು ಎಲ್ಲಿ ಹಾಕಲಾಗುತ್ತದೆ? ಎಂಬುದರ ಬಗ್ಗೆ ಮಕ್ಕಳೊಂದಿಗೆ ಚರ್ಚೆ.<br>• ಸರಿಯಾದ ವಿಲೇವಾರಿಯ ಬಗ್ಗೆ ಪರಿಚಯ.<br>• ಕಸದ ವಿಲೇವಾರಿ ಬಗ್ಗೆ ಪತ್ರಿಕೆಗಳಲ್ಲಿ ಬರುವ ವಿವರಗಳ ಸಂಗ್ರಹ. ಕಸವನ್ನು ಕಡಿಮೆ ಮಾಡುವ ಕ್ರಮಗಳ ಬಗ್ಗೆ ಮಕ್ಕಳೊಂದಿಗೆ ಚರ್ಚೆ. | • ಸ್ಥಳೀಯಾ ಪರಿಸರ<br>• ಪತ್ರಿಕಾ ಪ್ರಕಟನೆಯ ಸಂಗ್ರಹ<br>• ಕಥೆಗಳು / ಕಸ ವಿಲೇವಾರಿ ಬಗ್ಗೆ. | • ನಿನ್ನ ಶಾಲೆಯಲ್ಲಿ ಉಂಟಾಗುವ ಕಸಗಳ ಹೆಸರನ್ನು ಪಟ್ಟಿ ಮಾಡು.<br>• ಇವುಗಳಲ್ಲಿ ನೀನು ಮತ್ತೆ ಬಳಸಬಹುದಾದ ವಸ್ತುಗಳಿವೆಯೆ?<br>• ಕಸವನ್ನು ವಿಲೇವಾರಿ ಮಾಡುವ ಕ್ರಮವನ್ನು ತಿಳಿಸಿ.<br>• ಶಾಲೆಯ ಕಸವನ್ನು ನೀವು ಏನು ಮಾಡುವಿರಿ? | 5 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಮನೆಯಲ್ಲಿ ಕಂಡು ಬರುವ ಇತರೆ ಸಾಕು ಪ್ರಾಣಿಗಳು ಮತ್ತು ಇತರ ಪ್ರಾಣಿಗಳು, ಕೀಟಗಳು ಮತ್ತು ನಿಶಾಚರಿ ಪ್ರಾಣಿಗಳನ್ನು ಗುರುತಿಸುವರು. | • ಕುಟುಂಬದ ಸದಸ್ಯರು ಮುದ್ದು ಸಾಕು ಪ್ರಾಣಿಗಳು (Pets), ಸಾಕದೇ ಇದ್ದರೂ ಮನೆಯಲ್ಲಿರುವ (ಇಲಿ, ಹೆಗ್ಗಣ, ಹಲ್ಲಿ ತಿಗಣೆ, ನೊಣ, ಸೊಳ್ಳೆ, ಜಿರಳೆ) ಕೀಟ ಪ್ರಾಣಿಗಳ ಪರಿಚಯ – ಇಷ್ಟಪಡುವ ಪ್ರಾಣಿಗಳು ಮತ್ತು ಅವುಗಳ ಪಾಲನೆ. | • ನಿಮ್ಮ ಕುಟುಂಬದಲ್ಲಿ ಇರುವ ಸದಸ್ಯರು ಇಷ್ಟ ಪಡುವ ಪ್ರಾಣಿಗಳು ಯಾವುವು? (ಯಾರು – ಯಾವುದನ್ನು) ಅದಕ್ಕೆ ಯಾರು ಆಹಾರ ಒದಗಿಸುತ್ತಾರೆ? ನಿನಗೆ ಯಾವ ಪ್ರಾಣಿ ಕಂಡರೆ ಇಷ್ಟ? ಎಂಬ ಪ್ರಶ್ನೆಗಳನ್ನು ಮಕ್ಕಳೊಂದಿಗೆ ಚರ್ಚಿಸುವುದು.<br>• ಪ್ರಾಣಿಗಳ ರಕ್ಷಣೆ ಮತ್ತು ಪಾಲನೆಯ ಬಗ್ಗೆ ಚರ್ಚಿಸುವುದು. | • ಮಕ್ಕಳ ದಿನನಿತ್ಯದ ಅನುಭವಗಳು.<br>• ಕೀಟಗಳ ಚಿತ್ರಗಳು. | • ನಿಮ್ಮ ಮನೆಯಲ್ಲಿ ಸಾಕಿರುವ ಪ್ರಾಣಿಗಳ ಹೆಸರನ್ನು ಹೇಳು?<br>• ನಿನಗೆ ತುಂಬಾ ಇಷ್ಟವಾದ ಪ್ರಾಣಿ ಯಾವುದು? ಅದಕ್ಕೆ ನೀವು ನೀಡುವ ಆಹಾರವೇನು?<br>• ರಾತ್ರಿ ವೇಳೆ ನಮಗೆ ಕಂಡು ಬರುವ ಕೀಟಗಳು ಯಾವುವು?<br>• ಸಾಕು ಪ್ರಾಣಿಗಳನ್ನು ನಾವು ಹೇಗೆ ನೋಡಿಕೊಳ್ಳಬೇಕು? | 5 |
| • ನೆರೆಹೊರೆಯ ಸರಳ ನಕ್ಷೆಯನ್ನು ಗುರುತಿಸುವರು (ಉದ್ದ ಅಗಲವಿರುವ) | • ಮನೆಯಿಂದ ಶಾಲೆಗೆ ತಲುಪುವ ದಾರಿ ಮತ್ತು ಸುತ್ತ ಮುತ್ತಲಿನ ನಕ್ಷೆ. (ಸರಳ ಸಂಕೇತಗಳನ್ನು ಉಪಯೋಗಿಸಿ) ಮನೆಯ ಮತ್ತು ಶಾಲೆಯ ವಿಳಾಸವನ್ನು ಹೇಳುವರು. | • ಒಂದು ಸರಳ ನಕ್ಷೆಯನ್ನು ಮಕ್ಕಳಿಗೆ ತೋರಿಸಿ ಪ್ರಶ್ನೆಗಳೊಂದಿಗೆ ಅದರ ಬಗ್ಗೆ ಚರ್ಚಿಸುವುದು. ''ಮನೆಯಿಂದ ಶಾಲೆಗೆ''.<br>• ನಂತರ ನಕ್ಷೆಯ (ಸಂಕೇತಗಳನ್ನು ಒಳಗೊಂಡ) ಸಂಕೇತಗಳ ಬಗ್ಗೆ ಚರ್ಚಿಸುವುದು.<br>• ಮಕ್ಕಳ ಮನೆಯ ನೆರೆಹೊರೆ ಮತ್ತು ಶಾಲೆಗೆ ಬರುವ ಹಾದಿಯ ನಕ್ಷೆ ತಯಾರಿಸುವುದು ಮತ್ತು ಗುರುತಿಸುವುದು.<br>• ಮಣ್ಣಿನ ಮಾದರಿ ವಸ್ತು ಬಳಸಿ ನಕ್ಷೆ ರಚನೆ. | • ಸರಳ ನಕ್ಷೆ.<br>• ನಕ್ಷೆಯ ಸಂಕೇತಗಳು.<br>• ಮಾದರಿ.<br>• ಸ್ಥಳೀಯ ಪರಿಸರ ಕಲ್ಪನೆ. | • ನೀನು ಮನೆಯಿಂದ ಶಾಲೆಗೆ ಬರುವ ದಾರಿಯ ಸರಳ ನಕ್ಷೆ ತಯಾರಿಸು?<br>• ಸಂಕೇತಗಳನ್ನು ಹೆಸರಿಸು.<br>• ಚಿತ್ರ ಬರೆದು ಬಣ್ಣ ತುಂಬು. ಶಾಲೆಯ ನೆರೆಹೊರೆಯ ಮಾದರಿ ತಯಾರಿಸು.<br>• ಶಾಲೆ ಮತ್ತು ಮನೆಯ ವಿಳಾಸ ಬರೆಯಿರಿ. | 8 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಸೂರ್ಯೋದಯದ ಸಹಾಯ ದಿಂದ ದಿಕ್ಕುಗಳನ್ನು ಗುರುತಿಸುವರು. | • ಸೂರ್ಯೋದಯ ಸಮಯದಲ್ಲಿ ಸೂರ್ಯನ ಎದುರು ನಿಂತಾಗ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ದಿಕ್ಕುಗಳನ್ನು ಗುರ್ತಿಸುವುದು. | • ಸೂರ್ಯೋದಯ ಸಮಯದಲ್ಲಿ ಮಕ್ಕಳನ್ನು ಸೂರ್ಯನಿಗೆ ಎದುರಾಗಿ ನಿಲ್ಲಿಸಿ ದಿಕ್ಕುಗಳ ಪರಿಚಯ.<br>• ಶಾಲೆಯ ಆವರಣದಲ್ಲಿ ದಿಕ್ಕುಗಳ ಪರಿಕಲ್ಪನೆ.<br>• ಸೂರ್ಯಾಸ್ತದ ವೇಳೆ ದಿಕ್ಕುಗಳ ಪರಿಚಯ ಚರ್ಚೆ. | • ಪರಿಸರ<br>• ಮಕ್ಕಳ ಅನುಭವ | • ಪೂರ್ವಕ್ಕೆ ಮುಖ ಮಾಡಿ<br>• ನಿಂತಾಗ ನಿನ್ನ ಬಲಗಡೆ ಯಾವ ದಿಕ್ಕು ಇದೆ? ಎಡಗಡೆ ಯಾವ ದಿಕ್ಕು? ನಿನ್ನ ಹಿಂದೆ ಯಾವ ದಿಕ್ಕು?<br>• ನಿನ್ನ ತರಗತಿಯ ಬಾಗಿಲು ಯಾವ ದಿಕ್ಕಿನಲ್ಲಿದೆ? | 3 |
| • ವಿವಿಧ ರೀತಿಯ ಮನೆಗಳನ್ನು ಗುರುತಿಸುವರು.<br>• ಮನೆ ಕಟ್ಟಲು ಉಪಯೋಗಿಸುವ ವಸ್ತುಗಳನ್ನು ಪರಿಚಯ ಮಾಡಿಕೊಳ್ಳುವರು. | ಇಗ್ಲೂ, ಟೆಂಟ್, ಬಹುಮಹಡಿ, ಗುಡಿಸಲು, ತಾರಸಿ ..... ಇತ್ಯಾದಿ ವಿವಿಧ ರೀತಿಯ ಮನೆಗಳು.<br>ಮನೆ ನಿರ್ಮಾಣಕ್ಕೆ ಬೇಕಾದ ವಸ್ತುಗಳು ಇಟ್ಟಿಗೆ, ಮರ, ಸಿಮೆಂಟು, ಮರಳು, ಕಬ್ಬಿಣ .... | • ಮಕ್ಕಳು ನೋಡಿರುವ ಮನೆಗಳನ್ನು ಕುರಿತು ಚರ್ಚೆ.<br>• ವಿವಿಧ ಚಿತ್ರಪಟಗಳ ಮೂಲಕ ವಿವಿಧ ಮನೆಗಳ ಪರಿಚಯ.<br>• ಮನೆ ನಿರ್ಮಾಣಕ್ಕೆ ಬೇಕಾದ ವಸ್ತುಗಳನ್ನು ಕುರಿತು ಚರ್ಚೆ.<br>• ಸಮೀಪದ ಮನೆ ಕಟ್ಟುವ ಸ್ಥಳಕ್ಕೆ ಭೇಟಿ.<br>• ಯಾವ ಮನೆಗೆ – ಏನು ಬೇಕು ಎಂಬುದರ ಬಗ್ಗೆ ಚರ್ಚೆ. | • ಮಕ್ಕಳ ಅನುಭವಗಳು<br>• ಮನೆಯ ವಿವಿಧ ಮಾದರಿಗಳು<br>• ಚಿತ್ರಗಳು<br>• ಸ್ಥಳೀಯ ಪರಿಸರ<br>• ಸ್ಥಳೀಯ ಪರಿಸರ | • ಚಿತ್ರ ನೋಡಿ ಇದು ಯಾವ ವಿಧದ ಮನೆ ಎಂದು ಹೇಳು?<br>(ವಿವಿಧ ಮನೆಗಳ ಚಿತ್ರಗಳು)<br>(ಟೆಂಟ್, ಇಗ್ಲೂ, ಮಾಮೂಲಿ ಮನೆ)<br>• ನಿನ್ನ ಊರಿನಲ್ಲಿ ಯಾವ ಯಾವ ವಿಧದ ಮನೆಗಳಿವೆ?<br>• ಮನೆ ಕಟ್ಟಲು ಬೇಕಾಗಿರುವ ಸಾಮಗ್ರಿಗಳನ್ನು ಹೆಸರಿಸು? | 4 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಉತ್ತಮ ಮನೆಯ ಲಕ್ಷಣಗಳನ್ನು ಗುರುತಿಸುವರು (ಸ್ವಚ್ಛತೆ) | • ಒಳ್ಳೆಯ ವಾತಾವರಣ, ಗಾಳಿ, ಬೆಳಕು, ವಾತಾಯನ.<br>• ಮನೆಯ ಸ್ವಚ್ಛತೆ<br>• ಮನೆಯ ಅಲಂಕಾರ<br>• ಚರಂಡಿ ವ್ಯವಸ್ಥೆ | • ಉತ್ತಮ ಮನೆಯ ಲಕ್ಷಣಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು.<br>• ಸುಂದರ ಮನೆಯ ಚಿತ್ರಗಳಿಂದ ಮನೆಯ ಲಕ್ಷಣಗಳನ್ನು ಕುರಿತು ಚರ್ಚಿಸುವುದು.<br>• ಕೆಲವು ಮನೆಗಳ ವೀಕ್ಷಣೆ. ಅವುಗಳ ಬಗ್ಗೆ ಚರ್ಚೆ. | • ಮಕ್ಕಳ ಅನುಭವ<br>• ಚಿತ್ರಪಟಗಳು | • ಉತ್ತಮ ಮನೆಯ ಲಕ್ಷಣಗಳು ಯಾವುವು?<br>• ಮನೆಯು ಸ್ವಚ್ಛವಾಗಿರದಿದ್ದರೆ ಏನಾಗುತ್ತದೆ?<br>• ಮನೆಗೆ ಗಾಳಿ ಬೆಳಕು ಏಕೆ ಬೇಕು?<br>• ಬಚ್ಚಲು ನೀರು ಮನೆಯ ಮುಂದೆ ಹರಿದರೆ ಏನಾಗುತ್ತದೆ? | 4 |
| • ವಿವಿಧ ಸಂಸ್ಕೃತಿಗಳಿಗನುಗುಣವಾಗಿ ಮನೆಯ ಅಲಂಕಾರದ ವಿಧಾನಗಳನ್ನು ತಿಳಿಯುವರು. | • ಹಬ್ಬಗಳಲ್ಲಿ ಮನೆಯ ಅಲಂಕಾರ (ವಿವಿಧ ಧರ್ಮಗಳಿಗೆ ಅನುಗುಣವಾಗಿ) ರಂಗೋಲಿ, ಬಣ್ಣ, ಹೂವು – ದೀಪ ಇತ್ಯಾದಿಗಳ ಪರಿಚಯ. (ಸಂಭಾಷಣೆ ವಿಧಾನ) | • ವಿವಿಧ ಧರ್ಮದವರು ಹಬ್ಬಗಳಲ್ಲಿ ಹೇಗೆ ತಮ್ಮ ಮನೆಯನ್ನು ಅಲಂಕಾರಗೊಳಿಸುತ್ತಾರೆ ಎಂಬುದರ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು.<br>• ಮನೆಯ ಮಾದರಿ ತಯಾರಿಸಿ ಅದನ್ನು ಅಲಂಕಾರಗೊಳಿಸುವುದು.<br>• ನಮ್ಮ ಸಂಸ್ಕೃತಿ ಪದ್ಧತಿಗಳಿಗನುಗುಣವಾಗಿ ಹೇಗೆ ಅಲಂಕಾರಗೊಳಿಸುತ್ತೇವೆ ಎಂಬುದನ್ನು ಚರ್ಚಿಸುವುದು. | • ಮಕ್ಕಳ ಅನುಭವಗಳು<br>• ಮನೆಯ ಮಾದರಿ<br>• ಅಲಂಕೃತ ವಿವಿಧ ಮನೆಗಳ ಚಿತ್ರಗಳು. | • ನೀವು ಹಬ್ಬಗಳಲ್ಲಿ ಮನೆಯನ್ನು ಹೇಗೆ ಅಲಂಕಾರಗೊಳಿಸುವಿರಿ?<br>• ಜಾತ್ರೆಯ ದಿನ ನಿಮ್ಮ ಬೀದಿಯ ಎಲ್ಲಾ ಮನೆಗಳು ಹೇಗೆ ಅಲಂಕಾರಗೊಂಡಿರುತ್ತದೆ?<br>• ಬೇರೆ ಧರ್ಮದ ನಿನ್ನ ಗೆಳತಿ/ಗೆಳೆಯರು ಮನೆಯನ್ನು ಹಬ್ಬಗಳಲ್ಲಿ ಹೇಗೆ ಅಲಂಕಾರ ಗೊಳಿಸುತ್ತಾರೆ? | 3 |
| **4. ನೀರು** | | | | | |
| • ನೀರಿನ ವಿವಿಧ ಮೂಲಗಳನ್ನು ಗುರುತಿಸುವರ.<br>• ಮನೆ ಬಳಕೆಯ ನೀರನ್ನು | ನೀರಿನ ವಿವಿಧ ಮೂಲಗಳಾದ ಕೆರೆ, ಬಾವಿ, ನದಿ, ಸಮುದ್ರಗಳನ್ನು ಗುರುತಿಸುವುದು. | • ನೀರಿನ ವಿವಿಧ ಮೂಲಗಳ ಚಿತ್ರಪಟದ ಸಹಾಯದಿಂದ ಕೆರೆ, ಬಾವಿ, ನದಿ, ಸಮುದ್ರಗಳನ್ನು ಗುರುತಿಸುವಂತೆ ಮಾಡುವುದು. | ನೀರಿನ ಮೂಲಗಳ ಚಿತ್ರಪಟ. | • ನಿಮ್ಮ ಊರಿನ ಹತ್ತಿರವಿರುವ ನೀರಿನ ಮೂಲಗಳಾವುವು?<br>• ಚಿತ್ರಪಟದಲ್ಲಿನ ಕೆರೆ, ಬಾವಿ, ನದಿ, ಸಮುದ್ರ ಗಳನ್ನು ಗುರುತಿಸು. | 2 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಮನೆ ಬಳಕೆಯ ನೀರನ್ನು ಎಷ್ಟು ದೂರದಿಂದ ತರುವರು ಎಂಬುದನ್ನು ವಿವರಿಸುವರು. | ಮನೆ ಬಳಕೆಯ ನೀರನ್ನು ಯಾರು ಎಷ್ಟು ದೂರದಿಂದ (ಕೊಳವೆ ಬಾವಿ, ನದಿ, ಬಾವಿ) ತರುವರು ಎಂಬ ಮಾಹಿತಿ ವ್ಯಕ್ತಪಡಿಸುವುದು. | • ಮಕ್ಕಳ ಸ್ಥಳೀಯ ನೀರಿನ ಮೂಲಗಳನ್ನು ವೀಕ್ಷಿಸುವುದರ ಮುಖಾಂತರ ಗುರುತಿಸುವಂತೆ ಮಾಡುವುದು.<br>• ಮಕ್ಕಳ ಅನುಭವದ ಆಧಾರದ ಮೇಲೆ ಪ್ರಶ್ನಿಸುವುದರ ಮುಖಾಂತರ ಮನೆ ಬಳಕೆಯ ನೀರನ್ನು ಯಾರು ಎಷ್ಟು ದೂರದಿಂದ ತರುವರು ಎಂಬುದನ್ನು ವ್ಯಕ್ತಪಡಿಸುವಂತೆ ಮಾಡುವುದು. | ವೀಕ್ಷಣೆ.<br>ಮಕ್ಕಳ ಅನುಭವ. | • ನಿನ್ನ ಮನೆಯಲ್ಲಿ ಕುಡಿಯುವ ನೀರನ್ನು ಎಲ್ಲಿಂದ ತರುತ್ತಾರೆ?<br>• ನಿನ್ನ ಮನೆಗೆ ನೀರನ್ನು ಯಾರು ತರುತ್ತಾರೆ? | 3 |
| • ನೀರಿನ ಬಳಕೆಯ ಮತ್ತು ಸಂಗ್ರಹಣೆಯಲ್ಲಿ ಅನುಸರಿಸುವ ಸುರಕ್ಷಿತ ವಿಧಾನಗಳನ್ನು ಅರಿಯುವರು ಮತ್ತು ಬಳಸುವರು. | ನೀರನ್ನೂ ಬಳಸುವ, ಅಪವ್ಯಯ ತಡೆಯುವ ಮತ್ತು ಸಂಗ್ರಹಿಸುವ ಸುರಕ್ಷಿತ ವಿಧಾನಗಳನ್ನು ಅರಿಯುವರು ಮತ್ತು ಬಳಸುವರು. | • ಮಕ್ಕಳ ಅನುಭವದ ಆಧಾರದ ಮೇಲೆ ಮನೆಯಲ್ಲಿ ನೀರನ್ನು ಸುರಕ್ಷಿತವಾಗಿ ಬಳಸುವ ಅಪವ್ಯಯ ತಡೆಯುವ ಮತ್ತು ಸಂಗ್ರಹಿಸುವ ಕುರಿತು ಚರ್ಚೆ. | ಮಕ್ಕಳ ದಿನನಿತ್ಯದ ಅನುಭವ. | • ನೀನು ಮುಖ ಕೈ ಕಾಲು ತೊಳೆಯಲು ಎಷ್ಟು ತಂಬಿಗೆ ನೀರು ಬಳಸುತ್ತೀಯಾ?<br>• ನಿನ್ನ ಮನೆಯವರೆಲ್ಲಾ ಪ್ರತಿದಿನ ಎಷ್ಟು ಬಕೇಟ್‌ನಷ್ಟು ನೀರನ್ನು ಬಳಸುತ್ತೀರಿ? | 4 |
| • ನದಿ ಮತ್ತು ಸಮುದ್ರಗಳಲ್ಲಿ ವಾಸಿಸುವ ಪ್ರಾಣಿಗಳನ್ನು (ಜಲಚರಗಳು) ಗುರುತಿಸುವರು | ನದಿ ಮತ್ತು ಸಮುದ್ರಗಳಲ್ಲಿ ವಾಸಿಸುವ ಪ್ರಾಣಿಗಳಾದ ಮೀನು, ಸೀಗಡಿ, ಕಪ್ಪೆ ಮೊಸಳೆ, ಏಡಿ, ಆಮೆ ಇತ್ಯಾದಿ ಪ್ರಾಣಿಗಳನ್ನು ಗುರುತಿಸುವರು. | • ಚಿತ್ರಪಟಗಳ ಸಹಾಯದಿಂದ ನದಿ ಮತ್ತು ಸಮುದ್ರಗಳಲ್ಲಿ ವಾಸಿಸುವ ಪ್ರಾಣಿಗಳಾದ ಮೀನು, ಸಿಗಡಿ, ಕಪ್ಪೆ, ಮೊಸಳೆ, ಏಡಿ, ಆಮೆ ಇತ್ಯಾದಿ ಪ್ರಾಣಿಗಳ ಬಗ್ಗೆ ಪರಿಚಯ. | ನದಿ ಮತ್ತು ಸಮುದ್ರಗಳಲ್ಲಿ ವಾಸಿಸುವ ಪ್ರಾಣಿಗಳ ಚಿತ್ರಪಟ. | • ಈ ಚಿತ್ರಪಟದಲ್ಲಿನ ಪ್ರಾಣಿಗಳು ನದಿ ಮತ್ತು ಸಮುದ್ರಗಳಲ್ಲಿ ವಾಸಿಸುವ ಪ್ರಾಣಿಗಳಾಗಿ ವಿಂಗಡಿಸು. | 3 |
| • ಮಳೆಗೆ ಸಂಬಂಧಿಸಿದಂತೆ ಸಸ್ಯ ಮತ್ತು ಪ್ರಾಣಿಗಳ ಪ್ರತಿಕ್ರಿಯೆಯನ್ನು ಗಮನಿಸುವರು. | ಮಳೆ ಬಂದಾಗ ಮತ್ತು ಮಳೆ ನಿಂತಾಗ ಸಸ್ಯ ಮತ್ತು ಪ್ರಾಣಿಗಳಲ್ಲಿ ಕಂಡು ಬರುವ ಬದಲಾವಣೆ/ಚಟುವಟಿಕೆ ಗಳನ್ನು ಗಮನಿಸುವುದು. | • ಮಳೆ ಬಂದಾಗ ಮತ್ತು ಮಳೆ ನಿಂತಾಗ ಸಸ್ಯ ಮತ್ತು ಪ್ರಾಣಿಗಳಲ್ಲಿ ಕಂಡು ಬರುವ ಬದಲಾವಣೆ/ ಚಟುವಟಿಕೆಗಳ ಬಗ್ಗೆ ಚಿತ್ರಪಟದ ಸಹಾಯದಿಂದ ವಿವರಿಸುವುದು.<br>• ವೀಕ್ಷಣೆಯ ಮುಖಾಂತರ ಮಳೆ ಬಂದ ಸಂದರ್ಭದಲ್ಲಿ ಸಸ್ಯ ಮತ್ತು ಪ್ರಾಣಿಗಳ ಪ್ರತಿಕ್ರಿಯ | ಚಿತ್ರಪಟ.<br>ವೀಕ್ಷಣೆ. | • ಮಳೆ ಬಂದಾಗ ಸಸ್ಯಗಳು ಹೇಗೆ ಇರುತ್ತವೆ?<br>• ಮಳೆ ನಿಂತಾಗ ಸಸ್ಯಗಳು ಹೇಗೆ ಕಾಣುತ್ತವೆ?<br>• ಮಳೆ ಬಂದಾಗ ಪ್ರಾಣಿಗಳು ಹೇಗೆ ವರ್ತಿಸುತ್ತವೆ? | 3 |

<table>
<tr><th>ಸಾಮರ್ಥ್ಯ</th><th>ವ್ಯಾಪ್ತಿ</th><th>ಚಟುವಟಿಕೆ</th><th>ಸಂಪನ್ಮೂಲ</th><th>ಮೌಲ್ಯಮಾಪನ</th><th>ಅವಧಿಗಳು</th></tr>
<tr><td></td><td></td><td>ವೀಕ್ಷಿಸುವುದು ಹಾಗೂ ಮಕ್ಕಳಿಗೆ ಪರಿಚಯಿಸುವುದು.</td><td></td><td></td><td></td></tr>
<tr><td>• ನದಿ, ಮಳೆ ನೀರಿಗೆ ಸಂಬಂಧಿಸಿದ ಹಾಡು, ನೃತ್ಯ ಮುಂತಾದ ಸಾಂಸ್ಕೃತಿಕ ಅಭಿವ್ಯಕ್ತಿಗಳಮೂಲಕ ವಿಷಯವನ್ನು ವ್ಯಕ್ತ ಪಡಿಸುವರು.</td><td>ನದಿ, ಮಳೆ ನೀರಿಗೆ ಸಂಬಂಧಿಸಿದ ಹಾಡು, ನೃತ್ಯ ಮುಂತಾದ ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನು ವ್ಯಕ್ತಪಡಿಸುವುದು.</td><td>• ನದಿ, ಮಳೆ ನೀರಿಗೆ ಸಂಬಂಧಿಸಿದ ಹಾಡು, ಅಭಿನಯ, ಗೀತೆ ಮುಂತಾದುವುಗಳ ಪರಿಚಯ ಮಾಡಿಸುವುದು.<br>ಬಂತು, ಬಂತು, ಆಲಿಕಲ್ಲು ಮಳೆ<br>.................................<br>.................................</td><td>ಹಾಡು.</td><td>ನದಿಗೆ ಸಂಬಂಧಿಸಿದಂತೆ ನಿನಗೆ ಗೊತ್ತಿರುವ ಒಂದು ಹಾಡನ್ನು ಹೇಳು.</td><td>4</td></tr>
<tr><td>• ಋತುಮಾನಕ್ಕೆ ತಕ್ಕಂತೆ ನೀರಿನ ಹರಿವಿನಲ್ಲಿ ಆಗುವ ಬದಲಾವಣೆಗಳನ್ನು ಗುರುತಿಸುವರು.</td><td>• ಮಳೆಗಾಲ, ಚಳಿಗಾಲ ಹಾಗೂ ಬೇಸಿಗೆಯಲ್ಲಿ ನದಿ, ಕಾಲುವೆಗಳಲ್ಲಿ ನೀರಿನ ಹರಿವಿನಲ್ಲಿ ಆಗುವ ಬದಲಾವಣೆಗಳನ್ನು ಗುರುತಿಸುವುದು.</td><td>• ಮಗುವಿನ ಸ್ಥಳೀಯ ಪರಿಸರದಲ್ಲಿರುವ ನೀರಿನ ಮೂಲಗಳು ತುಂಬುತ್ತವೆ ಯಾವ ಯಾವ ಕಾಲದಲ್ಲಿ ಹರಿಯುತ್ತವೆ ಎಂದು ಪ್ರಶ್ನಿಸಿ ನೀರಿನ ಹರಿವಿನ ಬದಲಾವಣೆಗಳ ಪರಿಚಯ ಮಾಡಿಸುವುದು.</td><td>ಮಗುವಿನ ಸ್ಥಳೀಯ ಪರಿಸರದ ಅನುಭವ.</td><td>• ನಿಮ್ಮ ಊರಿನ ಹತ್ತಿರವಿರುವ ನದಿ / ಕಾಲುವೆ ಯಾವ ತಿಂಗಳಿನಲ್ಲಿ ನೀರಿನಿಂದ ತುಂಬಿ ಹರಿಯುತ್ತದೆ ? ಮತ್ತು ಯಾವ ತಿಂಗಳಲ್ಲಿ ಕಡಿಮೆ ಪ್ರಮಾಣದ ನೀರು ಹರಿಯುತ್ತದೆ?</td><td>3</td></tr>
<tr><td>• ನೀರನ್ನು ಸಂಗ್ರಹಿಸುವ ಪಾತ್ರೆಗಳ ಗಾತ್ರ, ಆಕಾರ, ಮಾಡಲ್ಪಟ್ಟ ಸಾಮಗ್ರಿಯ ಬಗ್ಗೆ ಚರ್ಚಿಸುವರು.</td><td>ನೀರನ್ನು ಸಂಗ್ರಹಿಸುವ ಪಾತ್ರೆಗಳಾದ ಬಕೀಟ್, ಹಂಡೆ, ತಪ್ಪಲೆ, ಕೊಳಗ ಮುಂತಾದವುಗಳ ಗಾತ್ರ, ಆಕಾರ, ಅವು ತಯಾರಿಸಲ್ಪಟ್ಟ ಸಾಮಗ್ರಿ ಬಗ್ಗೆ ಚರ್ಚಿಸುವುದು.</td><td>• ಮನೆಯಲ್ಲಿ ನೀರನ್ನು ಸಂಗ್ರಹಿಸುವ ಪಾತ್ರೆಗಳಾದ ಬಕೀಟು, ಹಂಡೆ, ತಪ್ಪಲೆ, ಕೊಳಗ ಮುಂತಾದವುಗಳನ್ನು ವೀಕ್ಷಿಸಿಕೊಂಡು ಬರಲು ತಿಳಿಸಿ ನಂತರ ಅವುಗಳ ಆಕಾರ, ಅವುಗಳನ್ನು ತಯಾರಿಸಲು ಬಳಸಿದ ಸಾಮಗ್ರಿ ಬಗ್ಗೆ ಚರ್ಚಿಸುವುದು.</td><td>ವೀಕ್ಷಣೆ / ಚರ್ಚೆ.<br>ಚಿತ್ರಗಳು</td><td>• ಮನೆಯಲ್ಲಿ ನೀರು ಸಂಗ್ರಹಿಸಲು ಬಳಸುವ ಪಾತ್ರೆಗಳನ್ನು ಪಟ್ಟಿ ಮಾಡು.<br>• ನಿಮ್ಮ ಮನೆಯಲ್ಲಿ ನೀರನ್ನು ಸಂಗ್ರಹಿಸಿಟ್ಟಿರುವ ಪಾತ್ರೆಗಳ ಸಂಖ್ಯೆಯನ್ನು ಈ ಕೆಳಗಿನ ಪಟ್ಟಿಯಲ್ಲಿ ಬರೆ.<table><tr><th>ಕ್ರ. ಸಂ.</th><th>ಮಣ್ಣಿನ ಪಾತ್ರೆ</th><th>ಸ್ಟೀಲ್ ಪಾತ್ರೆ</th><th>ತಾಮ್ರ ಪಾತ್ರೆ</th></tr><tr><td></td><td></td><td></td><td></td></tr></table></td><td>5</td></tr>
</table>

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| **5. ಪ್ರಯಾಣ** | | | | | |
| • ಪ್ರಯಾಣದ ಅವಶ್ಯಕತೆಯನ್ನು ಗುರುತಿಸುವರು.<br>• ಸನಿಹ, ದೂರದ ಮತ್ತು ನೂತನ ಬಗೆಯ ಸಂಚಾರ ಸಾಧನಗಳನ್ನು ಅರಿಯುವರು. | ಸ್ಥಳೀಯ ಮತ್ತು ದೂರ ಪ್ರದೇಶಗಳಿಗೆ, ಕಾಡು, ಹಳ್ಳಿ, ನಗರ ಮುಂತಾದ ಸಾಮಾಜಿಕ ಪ್ರದೇಶಗಳಿಗೆ ವಲಸೆ, ಪ್ರವಾಸ, ಕುಟುಂಬ ಸಮಾರಂಭಗಳಿಗೆ - ಮುಂತಾದ ಉದ್ದೇಶಗಳಿಗೆ ಪ್ರಯಾಣ ಅವಶ್ಯಕ.<br>ವಿವಿಧ ಬಗೆಯ / ಪ್ರಕಾರದ ಸಂಚಾರ ಸಾಧನಗಳ ಪರಿಚಯ. | • ನೀನು ನಿಮ್ಮ ಚಿಕ್ಕಮ್ಮನ ಮನೆಗೆ ಹೋಗಲು ಏನು ಮಾಡುವೆ?<br>• ನಿಮ್ಮ ಅತ್ತೆಯವರ ಮನೆ ಎಲ್ಲಿದೆ? ಅಲ್ಲಿಗೆ ಹೇಗೆ ಹೋಗುವೆ?<br>ಮೇಲ್ಕಂಡ ರೀತಿಯ ಸರಳ ಪ್ರಶ್ನೆಗಳನ್ನು ಕೇಳಿ ಚರ್ಚಿಸುವುದರೊಂದಿಗೆ ಪ್ರಯಾಣದ ಮಹತ್ವ, ವಿವಿಧ ಬಗೆಯ / ಪ್ರಕಾರದ ಸಂಚಾರ ಸಾಧನಗಳ ಮತ್ತು ಸನಿಹ/ದೂರದ ಕಲ್ಪನೆ ಮೂಡಿಸುವುದು.<br>• ವಿವಿಧ ಪ್ರಕಾರದ ಸಂಚಾರ ಸಾಧನಗಳ ಚಿತ್ರ ತೋರಿಸಿ ಅವುಗಳ ಕಲ್ಪನೆ ಮೂಡಿಸುವುದು. | ಪ್ರಶ್ನೆಗಳು<br>ಚರ್ಚೆ<br>ಮಕ್ಕಳ ಅನುಭವಗಳು<br>ವಿವಿಧ ಪ್ರಕಾರದ ಸಂಚಾರಿ ಸಾಧನಗಳ ಚಿತ್ರಪಟಗಳು. | • ದೂರ ಪ್ರಯಾಣ ಮಾಡಲು ಯಾವ ಯಾವ ವಾಹನಗಳನ್ನು ಬಳಸುತ್ತಾರೆ?<br>• ನಿಮ್ಮ ಮನೆಯವರೆಲ್ಲರು ಸೇರಿ ಪ್ರವಾಸ ಹೋಗಲು ಯಾವ ಸಂಚಾರಿ ಸಾಧನಗಳನ್ನು ಬಳಸುತ್ತೀರಾ?<br>• ಸಮಾನುಗಳನ್ನು / ಸರಕುಗಳನ್ನು ಸಾಗಿಸಲು ಯಾವ ಯಾವ ಸಂಚಾರಿ ಸಾಧನಗಳನ್ನು ಬಳಸುತ್ತಾರೆ?<br>• ಯಾವ ಯಾವ ಉದ್ದೇಶಗಳಿಂದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪ್ರಯಾಣ ಬೆಳಸುತ್ತಾರೆ? | 5 |
| • ಬಸ್ ನಿಲ್ದಾಣ / ರೈಲ್ವೆ ನಿಲ್ದಾಣದಲ್ಲಿ ಕಾರ್ಯ ನಿರ್ವಹಿಸುವ ವಿವಿಧ ಬಗೆಯ ಕೆಲಸಗಾರರ ಬಗ್ಗೆ ಅರಿಯುವರು. | ಬಸ್ / ರೈಲು ಸಂಚಾರದ ಬಗ್ಗೆ ಪರಿಚಯ, ಬಸ್ / ರೈಲ್ವೇ ನಿಲ್ದಾಣದಲ್ಲಿ ಕಾರ್ಯ ನಿರ್ವಹಿಸುವ ವ್ಯಾಪಾರಿಗಳು ಸಿಬ್ಬಂದಿ, ವಿವಿಧ ಬಗೆಯ ಕೆಲಸಗಾರರ ಪರಿಚಯ. | • ಬಸ್ / ರೈಲು, ಪ್ರಯಾಣಿಕರು, ಕಾರ್ಯ ನಿರ್ವಹಿಸುವ ಕಾರ್ಮಿಕರು, ವ್ಯಾಪಾರಿಗಳು, ವಿವಿಧ ಬಗೆಯ ಕೆಲಸಗಾರರು, ಅಂಗಡಿಗಳು ಇರುವ ಚಿತ್ರಗಳನ್ನು ತೋರಿಸಿ ಅವರುಗಳ ಕಾರ್ಯ ವಿಧಾನಗಳನ್ನು ಚರ್ಚಿಸಿ ವಿವಿಧ ಬಗೆಯ ಕೆಲಸಗಾರರ ಕಲ್ಪನೆಯನ್ನು ಮೂಡಿಸುವುದು. | ಬಸ್ / ರೈಲು ನಿಲ್ದಾಣಕ್ಕೆ ಸಂಬಂಧಪಟ್ಟ ಚಿತ್ರಪಟಗಳು.<br>ಚರ್ಚೆ | • ಬಸ್ / ರೈಲು ನಿಲ್ದಾಣದಲ್ಲಿ ಕಂಡು ಬರುವ ವಿವಿಧ ಕೆಲಸ ಗಾರರು ಯಾರ್‍ಯಾರು ?<br>• ಬಸ್ / ರೈಲ್ವೆ ನಿಲ್ದಾಣದಲ್ಲಿರುವ ಅಂಗಡಿಯವರು ಮತ್ತು | 3 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | | • ಬಸ್ / ರೈಲ್ವೆ ನಿಲ್ದಾಣಗಳಲ್ಲಿರುವ ಸಾರ್ವಜನಿಕ ಸೌಲಭ್ಯಗಳನ್ನು ಪಟ್ಟಿ ಮಾಡಿ. | | ಚಿಲ್ಲರೆ ವ್ಯಾಪಾರಿಗಳಿಂದ ಪ್ರಯಾಣಿಕರಿಗೆ ಯಾವರೀತಿಯ ಉಪಯೋಗಗಳಾಗುತ್ತವೆ?<br>• ಬಸ್ / ರೈಲು ನಿಲ್ದಾಣದಲ್ಲಿ ಯಾವ ಯಾವ ರೀತಿಯ ವ್ಯಾಪಾರಿಗಳನ್ನು ನೋಡುವೆ? | |
| • ಸಂಜ್ಞೆ, ನೃತ್ಯ ಮುಂತಾದವುಗಳ ಮೂಲಕ ಭಾಷೆ ಬಳಸದೆ ಮಾತನಾಡುವುದು. | ಭಾಷೆ ಹೊರತುಪಡಿಸಿ ಸಂವಹಿಸುವ ಇತರ ವಿಧಾನಗಳ ಪರಿಚಯ. (ಸಂಜ್ಞೆ, ನೃತ್ಯ) | • ಮಗುವಿಗೆ ಒಬ್ಬ ವ್ಯಕ್ತಿಯನ್ನು ಮಾತನಾಡದೆ ಯಾವ ರೀತಿ ಕರೆಯುವೆ ತೋರಿಸು, [ಮಾತನ್ನು ಬಳಸದೇ ನಿನ್ನ ಸ್ನೇಹಿತರೊಂದಿಗೆ ಯಾವ ರೀತಿ ವ್ಯವಹರಿಸುವೆ?] ಎಂಬುದನ್ನು ತಿಳಿಸಿ ಅವುಗಳ ಕಲ್ಪನೆಯನ್ನು ಮೂಡಿಸುವುದು. | ಸಂಜ್ಞೆಗಳ ಪರಿಚಯ<br>ಮಕ್ಕಳ ಅನುಭವ | • ಮಾತು ಬಳಸದೇ ಹೇಳಿದ್ದನ್ನು ಮಾಡು. ಉದಾ : ಊಟ ಮಾಡುವಂತೆ ತೋರಿಸು, ನೃತ್ಯ ಮಾಡು, ಹಾಡು ಹೇಳುವಂತೆ – ಅಭಿನಯ ಮಾಡು. | 3 |
| • ಪತ್ರದ ಮೂಲಕ ಸಂಪರ್ಕ ಮಾಡುವ ವಿಧಾನ ಹಾಗೂ ಅಂಚೆ ಕಛೇರಿಯ ಕಾರ್ಯ ಚಟುವಟಿಕೆಗಳನ್ನು ತಿಳಿಯುವರು. | ಸಂಪರ್ಕ ಮಾಧ್ಯಮದ ಪರಿಚಯ, ಅಂಚೆ ಕಛೇರಿ ಮತ್ತು ಅಂಚೆ ಕಛೇರಿಯ ಕಾರ್ಯ ಚಟುವಟಿಕೆಯ ಪರಿಚಯ ಮತ್ತು ಪತ್ರದ ಮೂಲಕ ಸಂಪರ್ಕಿಸುವ ವಿಧಾನದ ಪರಿಚಯ. | • ಪತ್ರಗಳು, ಅಂಚೆ ಕಛೇರಿಯ ಚಿತ್ರಗಳನ್ನು ತೋರಿಸಿ, ಪತ್ರಗಳ ಮತ್ತು ಅಂಚೆ ಕಛೇರಿಯ ಕಾರ್ಯ ವೈಖರಿಯ ಕಲ್ಪನೆಯನ್ನು ಮೂಡಿಸುವುದು.<br>• ಸ್ಥಳೀಯ ಅಂಚೆ ಕಛೇರಿಗೆ ಭೇಟಿ ನೀಡಿ ಅಲ್ಲಿಯ ಕಾರ್ಯಗಳ ಬಗ್ಗೆ ತಿಳಿಯುವುದು, ಹಾಗೂ ಅಲ್ಲಿ ಕಾರ್ಯ ನಿರ್ವಹಿಸುವವರೊಂದಿಗೆ ಚರ್ಚಿಸಿ ಅವರ ಕಾರ್ಯಗಳ ಬಗೆ ತಿಳಿಯುವುದು.<br>• ಸ್ಥಳೀಯ ಅಂಚೆ ಕಛೇರಿಯಲ್ಲಿರುವ ಕೊರಿಯರ್/ಸ್ಪೀಡ್ ಪೋಸ್ಟ್/ಮನಿ ಆರ್ಡರ್/ ಇತ್ಯಾದಿ ಸೌಲಭ್ಯಗಳ ಬಗ್ಗೆ ತಿಳಿಯಿರಿ. | ಪತ್ರಗಳು,<br>ಚಿತ್ರಗಳು,<br>ಸ್ಥಳೀಯ ಅಂಚೆ ಕಛೇರಿ ಭೇಟಿ.<br>ಹಿರಿಯರ ಸಲಹೆ. | • ಯಾವ ಸಂದರ್ಭಗಳಲ್ಲಿ ಪತ್ರಗಳನ್ನು ಬರೆಯುತ್ತಾರೆ?<br>• ದೂರದಲ್ಲಿರುವವರ ಜೊತೆಗೆ ಹೇಗೆ ಸಂಪರ್ಕ ಸಾಧಿಸುವೆ?<br>• ದೂರದಲ್ಲಿರುವ ನಿಮ್ಮ ಅಣ್ಣನಿಗೆ ಪುಸ್ತಕ ಕಳುಹಿಸಲು ನೀನು ಏನು ಮಾಡುವೆ?<br>• ನಿಮ್ಮ ಅಕ್ಕ ಬರೆದ ಪತ್ರವನ್ನು ನಿಮಗೆ ಯಾರು, ಹೇಗೆ ತಲುಪಿಸುವವರು ? | 6 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| **6. ನಮ್ಮ ಇತರ ಅವಶ್ಯಕತೆಗಳು** | | | | | |
| • ಮಾನವರು ತಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ವಿವಿಧ ವಸ್ತುಗಳನ್ನು ತಯಾರಿಸಲು ಪ್ರಾರಂಭಿಸಿದ ಎಂಬುದನ್ನು ಮಡಕೆ ಮತ್ತು ಚಕ್ರದ ಉದಾಹರಣೆಯೊಂದಿಗೆ ವಿವರಿಸುವರು. | ನಮ್ಮ ಅಗತ್ಯಗಳು ಅಗತ್ಯ ವಸ್ತುಗಳು, ಆ ವಸ್ತುಗಳ ತಯಾರಿಕೆ ಹೇಗೆ (ಮಡಿಕೆ ತಯಾರಿಕೆ) ಎಂಬುದರ ಬಗ್ಗೆ ಚರ್ಚೆ. | • ಮಕ್ಕಳಿಂದ ನಿತ್ಯದ ಅಗತ್ಯಗಳನ್ನು ಪಟ್ಟಿ ಮಾಡಿಸುವುದು.<br>• ಮಕ್ಕಳ ಅನುಭವದಿಂದ ಅಗತ್ಯ ವಸ್ತುಗಳ ತಯಾರಿಕೆ ಬಗ್ಗೆ ಚರ್ಚಿಸುವುದು.<br>• ಆದಿಕಾಲದ ಮಾನವ ಧಾನ್ಯಗಳನ್ನು ರಕ್ಷಿಸಲು ಮಡಿಕೆ ತಯಾರಿಸಿದ ಬಗ್ಗೆ ವಿವರಿಸುವುದು. | ಮಕ್ಕಳ ಅನುಭವ<br>ಹಿರಿಯರ ಅನುಭವ | • ಮಾನವರ ಅವಶ್ಯಕತೆಗಳನ್ನು ಪಟ್ಟಿ ಮಾಡಿ.<br>• ನಮ್ಮ ಅವಶ್ಯಕತೆಗಳನ್ನು ಯಾರು ಯಾರು ಪೂರೈಸುತ್ತಾರೆ ?<br>• ನಮ್ಮ ಅವಶ್ಯಕತೆಗಳನ್ನೂ ತಯಾರಿಸುವ ಬಗೆ ಹೇಗೆ? | 12 |
| • ಹಿಂದಿನ ದಿನಗಳಲ್ಲಿ ಅನುಸರಿಸುತ್ತಿದ್ದ ಧಾನ್ಯ ಸಂಗ್ರಹಣೆ ವಿಧಾನದಲ್ಲಿ ಕಾಲಕ್ರಮೇಣ ಅವುಗಳಲ್ಲಾದ ಬದಲಾವಣೆಗಳ ಬಗ್ಗೆ ಚರ್ಚಿಸುವರು.<br>(ಸ್ಥಳೀಯವಾಗಿ ಧಾನ್ಯ ಸಂರಕ್ಷಣೆಗಾಗಿ ಬಳಸುವ ಕ್ರಮಗಳನ್ನು ತಿಳಿಯುವರು.) | ಮಾನವನ ಮೊದಲ ಹಂತದ ನಾಗರೀಕತೆಯ ಸೂಕ್ಷ್ಮ ಪರಿಚಯ. ಮಡಿಕೆಗಳು ಅಂದು ಇಂದು ಮತ್ತು ಬದಲಾವಣೆಗಳು. | • ಚಕ್ರದ ಬಳಕೆಯ ನಂತರ ಮಡಿಕೆ ತಯಾರಿಕೆಯಲ್ಲಿ ಆದ ಬದಲಾವಣೆಗಳನ್ನು ಕುರಿತು ಮಕ್ಕಳೊಂದಿಗೆ ಚರ್ಚಿಸುವುದು.<br>• ಮಡಿಕೆ ತಯಾರಿಸುವ ಸ್ಥಳಕ್ಕೆ ಹೋಗಿ ಪ್ರಾತ್ಯಕ್ಷಿಕೆ ತೋರಿಸುವುದು. | ಪ್ರಾತ್ಯಕ್ಷಿಕೆ | • ಆದಿಕಾಲದ ಮಾನವ ಧಾನ್ಯಗಳನ್ನು ಯಾವ ವಸ್ತುಗಳಲ್ಲಿ ಸಂಗ್ರಹಿಸುತ್ತಾರೆ.<br>• ಚಕ್ರದ ಬಳಕೆಯ ನಂತರ ಮಡಿಕೆ ತಯಾರಿಕೆ ಯಲ್ಲಾದ ಬದಲಾವಣೆ ಗಳಾವುವು?<br>• ಮಡಿಕೆಯನ್ನು ಯಾರು ತಯಾರಿಸುತ್ತಾರೆ?<br>• ಮಡಿಕೆ ತಯಾರಿಸಲು ಬೇಕಾದ ಕಚ್ಚಾ ವಸ್ತು ಯಾವುದು?<br>• ಮಡಿಕೆಯನ್ನು ಬೆಂಕಿಯಿಂದ ಸುಡುವುದರಿಂದಾಗುವ ಅನುಕೂಲಗಳೇನು? | |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಜೇಡಿ ಮಣ್ಣಿನಿಂದ ಮಡಿಕೆಯ ಮಾದರಿಗಳನ್ನು ತಯಾರಿಸುವರು. | ಮಕ್ಕಳಲ್ಲಿ ಸೃಜನಶೀಲ ಚಟುವಟಿಕೆಯ ಅನುಭವವಾಗಿ ಮಡಿಕೆ ತಯಾರಿಕೆ. | • ಶಾಲೆಯಲ್ಲಿ ಸಣ್ಣ ಸಣ್ಣ ಮಡಿಕೆ ಮಾದರಿ ತಯಾರಿಸಿ ಬೆಂಕಿಯಲ್ಲಿ ಸುಡುವುದು. ಬೆಂದ ಮಡಿಕೆ ಬಾಳಕೆ ಬಗ್ಗೆ ಚರ್ಚೆ. | ಪ್ರಾತ್ಯಕ್ಷಿಕೆ ಅನುಭವ | | |
| **6. ಸ್ವಚ್ಛತೆ ಮತ್ತು ಸುರಕ್ಷತೆ.** | | | | | |
| • ದೇಹದ ಭಾಗಗಳಾದ ಜ್ಞಾನೇಂದ್ರಿಯಗಳನ್ನು ಗುರುತಿಸುವರು ಮತ್ತು ಅವುಗಳ ಕಾರ್ಯಗಳನ್ನು ತಿಳಿಯುವರು. | ಜ್ಞಾನೇಂದ್ರಿಯಗಳಾದ ಕಣ್ಣು ,ಕಿವಿ, ಮೂಗು, ನಾಲಗೆ ಮತ್ತು ಚರ್ಮಗಳನ್ನು ಗುರುತಿಸಿ ಅವುಗಳ ಕಾರ್ಯ ಮತ್ತು ಪ್ರಯೋಜನಗಳನ್ನು ತಿಳಿಯುವುದು. | • ತಮ್ಮ ಸುತ್ತಲಿನ ಪರಿಸರವನ್ನು ನೋಡುತ್ತೀಯಲ್ಲವೆ? ವಾಹನಗಳ ಶಬ್ಧ ಕೇಳುತ್ತಿರಬಹುದು. ಈ ರೀತಿ ಸರಳ ಪ್ರಶ್ನೆಗಳನ್ನು ಕೇಳಿ ಚರ್ಚಿಸುವುದರೊಂದಿಗೆ ಜ್ಞಾನೇಂದ್ರಿಯ ಮತ್ತು ಅವುಗಳ ಕಾರ್ಯಗಳ ಪರಿಚಯ. | • ಪ್ರಶ್ನೆಗಳು. | • ನಮ್ಮ ಜ್ಞಾನೇಂದ್ರಿಯಗಳಾವುವು?<br>• ನಾಲಗೆಯಿಂದ ನಮಗೆ ಯಾವ ಪ್ರಯೋಜನಗಳಿವೆ? | |
| • ಜ್ಞಾನೇಂದ್ರಿಯಗಳ ಸ್ವಚ್ಛತೆ ಮತ್ತು ರಕ್ಷಣೆಯ ವಿಧಾನಗಳನ್ನು ಅರಿಯುವರು. | ಜ್ಞಾನೇಂದ್ರಿಯಗಳ ಸ್ವಚ್ಛತೆ ಮತ್ತು ರಕ್ಷಣೆಯ ವಿಧಾನಗಳು. | • ಸ್ವಚ್ಛತಾ ರೈಲಿನ ಚಟುವಟಿಕೆಯನ್ನು ಮಕ್ಕಳ ಸಹಾಯದೊಂದಿಗೆ ಆಡುವುದು.<br>• ಜ್ಞಾನೇಂದ್ರಿಯಗಳ ಮಾದರಿಯನ್ನು ಮಣ್ಣಿನಿಂದ ತಯಾರಿಸುವುದು. ಕಣ್ಣು, ಮೂಗು, ನಾಲಿಗೆ, ಕಿವಿ.<br>• ಊರಿನಲ್ಲಿ ಆಸ್ಪತ್ರೆ ಇದ್ದರೆ ವೈದ್ಯರಿಂದ ಜ್ಞಾನೇಂದ್ರಿಯಗಳ ಸ್ವಚ್ಛತೆಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದು.<br>• ಮಗುವಿನ ಕಣ್ಣಿಗೆ ಬಟ್ಟೆ ಕಟ್ಟಿ ಬೇರೆ ಬೇರೆ ವಸ್ತುಗಳನ್ನು ಮುಂದೆ ಇಟ್ಟು ವಾಸನೆ, ಸ್ಪರ್ಶ ಮತ್ತು ಶಬ್ಧಗಳ ಮೂಲಕ ಗುರುತಿಸುವ ಆಟವಾಡಿಸುವುದು. | • ಜ್ಞಾನೇಂದ್ರಿಯಗಳ ಮಾದರಿ.<br>• ವೈದ್ಯರ ಸಲಹೆ.<br>• ರೈಲಿನ ಆಟ. | • ಬೇರೆ ಬೇರೆ ರೀತಿಯ ವಸ್ತುಗಳನ್ನು ಮಗುವಿನ ಮುಂದೆ ಇಟ್ಟು ಮಗುವಿನ ಕಣ್ಣಿಗೆ ಬಟ್ಟೆ ಕಟ್ಟಿ ವಾಸನೆ, ಸ್ಪರ್ಶ, ಶಬ್ಧಗಳ ಮೂಲಕ ವಸ್ತುಗಳನ್ನು ಗುರುತಿಸುವಂತೆ ಹೇಳುವುದು.<br>ಉದಾ : ಬೆಳ್ಳುಳ್ಳಿ, ಗೆಜ್ಜೆ ಕಲ್ಲು, ಗಡಿಯಾರ ಇತ್ಯಾದಿ.<br>• ಕಣ್ಣಿನ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳುವೆ?<br>• ಪ್ರತಿದಿನ ಸ್ನಾನ ಮಾಡಬೇಕು. ಏಕೆ?<br>• ಮಂದ ಬೆಳಕಿನಲ್ಲಿ ಓದಬಾರದು. ಏಕೆ? | |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | | | | • ಕಿವಿಯಲ್ಲಿ ಚೂಪಾದ ಕಡ್ಡಿ ಹಾಕಬಾರದು. ಏಕೆ ?<br>• ಚಳಿಗಾಲದಲ್ಲಿ ಚರ್ಮದರಕ್ಷಣೆ ಹೇಗೆ ?<br>• ಹೊಂದಿಸಿ ಬರೆಯಿರಿ<br>ನೋಡುವುದು – ಚರ್ಮ<br>ಕೇಳುವುದು – ನಾಲಗೆ<br>ಬಿಸಿ ಅನುಭವ – ಕಣ್ಣು<br>ಉಪ್ಪಿನಕಾಯಿ – ಮೂಗು<br>ಮಲ್ಲಿಗೆ ಪರಿಮಳ – ಕಿವಿ | |
| **7. ಸ್ವಚ್ಛತೆ ಮತ್ತು ಸುರಕ್ಷತೆ** | | | | | |
| • ಹಲ್ಲು, ಹಲ್ಲುಗಳ ವಿಧಗಳು, ಕಾರ್ಯಗಳು, ಹಲ್ಲುಗಳ ಸ್ವಚ್ಛತೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು. | ಹಲ್ಲುಗಳು, ಬಾಚಿ ಹಲ್ಲು, ಕೋರೆ ಹಲ್ಲು, ದವಡೆ ಹಲ್ಲು ಇವುಗಳ ಕಾರ್ಯ ಅವುಗಳ ಸ್ವಚ್ಛತೆಯ ಅಭ್ಯಾಸಗಳು. | • ಸರಳ ಪ್ರಶ್ನೆಗಳ ಮೂಲಕ ಚರ್ಚೆ.<br>ಉದಾ : ಕಬ್ಬನ್ನು ಯಾವ ರೀತಿ ತಿನ್ನುವೆ? ನೀನು ತಿಂದ ಆಹಾರವನ್ನು ಯಾವುದರಿಂದ ಅರೆಯುವೆ?<br>• ನೈಜ ಹಲ್ಲುಗಳನ್ನು ತೋರಿಸುತ್ತಾ ಹಲ್ಲುಗಳ ವಿಧಗಳು, ಅವುಗಳ ಕಾರ್ಯಗಳ ಕಲ್ಪನೆ.<br>• ಸ್ಥಳೀಯ ಪ್ರದೇಶದಲ್ಲಿ ವೈದ್ಯರು / ದಂತ ವೈದ್ಯರಿದ್ದರೆ ಅವರಿಂದ ಹಲ್ಲುಗಳ ಬಗ್ಗೆ ಮಾಹಿತಿ ಸಂಗ್ರಹ.<br>• ಹಲ್ಲುಗಳ ಮಾದರಿಯನ್ನು ಬೆಂಚಿನ ಮೂಲಕ ಮಣ್ಣಿನ ಮೂಲಕ ತಯಾರಿಸುವುದು.<br>• ಹಲ್ಲಿನ ಸ್ವಚ್ಛತೆಯನ್ನು ಗಮನಿಸಲು ನಾಯಕನನ್ನು ನೇಮಕ ಮಾಡಿ ಹಲ್ಲುಗಳ ಸ್ವಚ್ಛತೆ ಪರೀಕ್ಷಿಸುವುದು. | • ಮಕ್ಕಳ ಅನುಭವ<br>• ವೈದ್ಯರ ಸಲಹೆ<br>• ಮಣ್ಣು / ಬೆಂಡು.<br>• ಹಾಡು<br>• ಮಾಹಿತಿ ಮತ್ತು ಸ್ವಚ್ಛತೆಯ ಚಾರ್ಟ್. | • ನಮಗೆ ಹಲ್ಲುಗಳು ಏಕೆ ಬೇಕು?<br>• ಹಲ್ಲುಗಳಲ್ಲಿ ಎಷ್ಟು ವಿಧ ಹಾಗೂ ಯಾವುವು?<br>• ಪ್ರತಿದಿನ ಹಲ್ಲುಗಳನ್ನು ಉಜ್ಜಿ ಸ್ವಚ್ಛಗೊಳಿಸಬೇಕು ಏಕೆ. ಕಾರಣ ಕೊಡು.<br>• ಹಲ್ಲು ಹುಳುಕಾಗಲು ಕಾರಣವೇನು?<br>• ಆಹಾರವನ್ನು ಅರೆಯಲು ಬಳಸುವ ಹಲ್ಲುಗಳು –<br>• ಕೊಬ್ಬರಿ, ಕಬ್ಬು, ಕ್ಯಾರೆಟ್ ಮುಂತಾದವುಗಳನ್ನು ಆಗಾಗ ತಿನ್ನಬೇಕು ಏಕೆ? | 10 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | | • ಹಲ್ಲುಗಳ ಚಿತ್ರ ಬರೆಸುವುದು.<br>• ವೈದ್ಯರಿಂದ ಪಡೆದ ಸಲಹೆ ಮತ್ತು ಸ್ವಚ್ಛತೆಯ ಮಾಹಿತಿಯನ್ನು ಚಾರ್ಟ್ ತಯಾರಿಸಿ ಮೂಗು ಹಾಕುವುದು.<br>• ಹಲ್ಲಿನ ವಿಧಗಳನ್ನು ತಿಳಿಸುವ ಹಾಡು. | | • ನೀನು ಹಲ್ಲನ್ನು ಹೇಗೆ ಉಜ್ಜುವೆ ಅಭಿನಯ ಮಾಡಿ ತೋರಿಸು.<br>• ಊಟವಾದ ಮೇಲೆ ನೀರಿನಿಂದ ಬಾಯಿ ಮುಕ್ಕಳಿಸುವುದನ್ನು ಅಭಿನಯ ಮಾಡಿ ತೋರಿಸು.<br>• ಕೆಲವು ಆಹಾರ ಪದಾರ್ಥಗಳನ್ನು ತೋರಿಸಿ ಅವುಗಳನ್ನು ತಿನ್ನಲು ಯಾವ ಹಲ್ಲುಗಳನ್ನು ಬಳಸುವೆ ಹೇಳು.<br>ಉದಾ : ಕಬ್ಬು, ಕಡ್ಲೆಬೀಜ. | |
| • ಮನೆ ಮತ್ತು ಹೊರಗಿನ ಅಪಘಾತದ ಸನ್ನಿವೇಶಗಳನ್ನು ಗುರುತಿಸುವರು. | ಮನೆಯಲ್ಲಿ ವಿದ್ಯುತ್ ಬಳಸುವಾಗ, ಹರಿತ ವಾದ ವಸ್ತುಗಳನ್ನು ಉಪಯೋಗಿಸುವಾಗ, ಗ್ಯಾಸ್, ಸೌದೆ, ನೀರು, ಎಣ್ಣೆ, ಪಾಚಿಯಿಂದ, ನಯವಾದ ನೆಲದಿಂದ ಇತ್ಯಾದಿ ಸನ್ನಿವೇಶಗಳು ಹೊರಗೆ, ಆಟವಾಡುವಾಗ, ರಸ್ತೆ ದಾಟುವಾಗ, ಜಗಳವಾಡುವಾಗ, ಬಸ್ಸನ್ನು ಹತ್ತುವಾಗ / ಇಳಿಯುವಾಗ, ಮರ ಹತ್ತುವಾಗ / ಇಳಿಯುವಾಗ ಇತ್ಯಾದಿ ಸಂದರ್ಭಗಳಲ್ಲಿ ಅಪಘಾತಗಳನ್ನು ಗುರುತಿಸುವುದು. | • ಮನೆಯ ಒಳಗೆ ಮತ್ತು ಹೊರಗೆ ನಡೆಯುವ ಅಪಘಾತ ಸನ್ನಿವೇಶಗಳ ಬಗ್ಗೆ ಹಾಡನ್ನು ಹೇಳುವುದು.<br>• ಅಪಘಾತ ಸನ್ನಿವೇಶಗಳನ್ನು ಗುರುತಿಸಿ ಮಕ್ಕಳ ಅನುಭವವನ್ನು ಕೇಳುತ್ತಾ ಚರ್ಚೆ ಮಾಡುವುದು.<br>• ಚಾರ್ಟ್‌ಗಳನ್ನು ಬಳಸಿಕೊಂಡು ಅಪಘಾತ ಸನ್ನಿವೇಶಗಳ ಬಗ್ಗೆ ತಿಳಿಸುವುದು.<br>• ಅಪಘಾತ ಸನ್ನಿವೇಶಗಳನ್ನು ಗುರುತಿಸಿ ಸುರಕ್ಷತೆಯ ಕ್ರಮಗಳ ಚಾರ್ಟ್ ತಯಾರಿಸಿ ಶಾಲೆಯಲ್ಲಿ ತೂಗು ಹಾಕುವುದು. | • ಹಾಡು<br>• ಮಕ್ಕಳ ಅನುಭವಗಳು<br>• ಚಾರ್ಟ್‌ಗಳು | • ಯಾವ ಸಂದರ್ಭಗಳಲ್ಲಿ ಅಪಘಾತಗಳು ಸಂಭವಿಸುತ್ತವೆ?<br>• ನೀನು ಅನುಭವಿಸಿರುವ ಮನೆಯ ಒಳಗಿನ 2 ಅಪಘಾತ ಸನ್ನಿವೇಶಗಳನ್ನು ಹೇಳು.<br>• ರಸ್ತೆ ದಾಟುವಾಗ, ಬಸ್ಸನ್ನು ಹತ್ತುವಾಗ ಮತ್ತು ಇಳಿಯುವಾಗ ಯಾವ ಸುರಕ್ಷತೆಯನ್ನು ವಹಿಸುವೆ? | 5 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಸಾರ್ವಜನಿಕ ಸೌಲಭ್ಯಗಳ ಅಗತ್ಯವನ್ನು ಗುರುತಿಸುವರು. ಸಾರ್ವಜನಿಕ ಸೌಲಭ್ಯಗಳ ರಕ್ಷಣೆ ಮಾಡುವರು. | • ಸರ್ಕಾರಿ ಬಸ್ಸುಗಳು, ಬೀದಿ ದೀಪ, ಬೀದಿಯಲ್ಲಿ, ಆಸ್ಪತ್ರೆ, ಶಾಲೆ, ಬಸ್ ನಿಲ್ದಾಣ, ಸಾರ್ವಜನಿಕ ಶೌಚಾಲಯ, ಗ್ರಂಥಾಲಯ, ಉದ್ಯಾನವನಗಳು, ಆಟದ ಬಯಲು, ರಸ್ತೆ, ಇತ್ಯಾದಿಗಳ ಗುರುತು ಮತ್ತು ಅವುಗಳ ರಕ್ಷಣೆಯ ಕ್ರಮಗಳು. | • ದಿನಪತ್ರಿಕೆಯಲ್ಲಿ ಬಂದಿರುವ ಅಪಘಾತಗಳ ಸನ್ನಿವೇಶಗಳನ್ನು ತೋರಿಸುವುದರೊಂದಿಗೆ ಚರ್ಚೆ ಮಾಡುವುದು.<br>• ಚಿತ್ರಗಳ ಮೂಲಕ ಸಾರ್ವಜನಿಕ ಆಸ್ತಿಗಳ ಕಲ್ಪನೆ ಮತ್ತು ತಮ್ಮ ಊರುಗಳಲ್ಲಿರುವ ಸಾರ್ವಜನಿಕ ಸೌಲಭ್ಯಗಳನ್ನು ಪತ್ತೆ ಹಚ್ಚುವುದು.<br>• ಕೆಲವು ಸಾರ್ವಜನಿಕ ಸೌಲಭ್ಯಗಳ ಉಸ್ತುವಾರಿ ನೋಡಿಕೊಳ್ಳುವ ಅಧಿಕಾರಿಗಳನ್ನು ಭೇಟಿ ಮಾಡಿ ಸೌಲಭ್ಯಗಳ ರಕ್ಷಣೆಯ ಬಗ್ಗೆ ಮಾಹಿತಿ ಪಡೆಯುವುದು.<br>• ಸಾರ್ವಜನಿಕ ಸೌಲಭ್ಯಗಳ ಚಿತ್ರಪಟಗಳನ್ನು ತೋರಿಸುತ್ತಾ ಅವುಗಳ ರಕ್ಷಣೆಯ ಬಗ್ಗೆ ಚರ್ಚೆ.<br>• ಸಾರ್ವಜನಿಕ ಸೌಲಭ್ಯಗಳ ಜಾಗಕ್ಕೆ ಭೇಟಿ. | • ದಿನಪತ್ರಿಕೆಗಳು<br>• ಊರಿನ ಸಮೀಕ್ಷೆ<br>• ಉಸ್ತುವಾರಿ ಅಧಿಕಾರಿಗಳ ಭೇಟಿ.<br>• ಚಿತ್ರಪಟಗಳು<br>• ಮಕ್ಕಳ ಅನುಭವಗಳು | • ನಿಮ್ಮ ಊರಿನಲ್ಲಿರುವ ಸಾರ್ವಜನಿಕ ಸೌಲಭ್ಯಗಳನ್ನು ಪಟ್ಟಿ ಮಾಡಿ.<br>• ಗ್ರಂಥಾಲಯದಿಂದ ಏನು ಪ್ರಯೋಜನ?<br>• ನಿಮ್ಮ ಶಾಲೆಯ ಶೌಚಾಲಯ/ಆಟದ ಮೈದಾನವನ್ನು ನೀವು ಹೇಗೆ ಸ್ವಚ್ಛವಾಗಿಟ್ಟುಕೊಳ್ಳುವಿರಿ.<br>• ಮಧ್ಯಾಹ್ನವಾದರೂ ಬೀದಿ ದೀಪವನ್ನು ಆರಿಸದಿರುವುದನ್ನು ಕಂಡು ನೀನು ಏನು ಮಾಡುವೆ?<br>• ಆಶುಭಾಷಣ ಸ್ಪರ್ಧೆ ಮಾಡುವುದು. ಕೆಲವು ಸಾರ್ವಜನಿಕ ಸೌಲಭ್ಯಗಳ ಹೆಸರು ಬರೆದು ಅವುಗಳ ರಕ್ಷಣೆ ಮತ್ತು ಬಳಸುವ ಕ್ರಮವನ್ನು ಹೇಳಿಸುವುದು.<br>ಇವುಗಳಲ್ಲಿ ಸಾರ್ವಜನಿಕ ಆಸ್ತಿ ಗುರುತಿಸು.<br>ಉದಾ : ಗ್ರಂಥಾಲಯ, ವಿದ್ಯುತ್ ದೀಪ, ಸೈಕಲ್, ಬಳೆ ಅಂಗಡಿ ....... | 5 |

<table>
<tr><th>ಸಾಮರ್ಥ್ಯ</th><th>ವ್ಯಾಪ್ತಿ</th><th>ಚಟುವಟಿಕೆ</th><th>ಸಂಪನ್ಮೂಲ</th><th>ಮೌಲ್ಯಮಾಪನ</th><th>ಅವಧಿಗಳು</th></tr>
<tr><td colspan="6">8. ನಮ್ಮ ಭೂಮಿ</td></tr>
<tr>
<td>• ಭೂಮಿಯ ಆಕಾರವನ್ನು ತಿಳಿಯುವರು.<br><br>ದಿನದಲ್ಲಿ ಆಗುವ ಬದಲಾವಣೆಗಳನ್ನು 'ಮೋಡ ಕವಿದ', 'ಮಳೆಯ', ಬಿಸಿಲಿನಿಂದ ಕೂಡಿದ ಪದಗಳನ್ನು ಬಳಸಿ ವಿವರಿಸುವುದು.</td>
<td>ಭೂಮಿಯು ಗೋಳಾಕಾರದಲ್ಲಿ / ಗುಂಡಾಗಿ / ಚಂಡಿನಂತೆ ಇದೆ ಎಂಬ ಕಲ್ಪನೆ ಮೂಡಿಸುವುದು.<br>ಭೂಮ್ಯಾಕಾರ, ಗೋಳದ ಕಲ್ಪನೆ ನೀಡುವುದು.<br><br>ದಿನದ ಹವಾಮಾನದ ವಿವರವನ್ನು ಹೇಳುವುದು. ದಿನದ ಹವಾಮಾನ ವೀಕ್ಷಣೆ. ವಾತಾವರಣದಲ್ಲಿ ಆಗುವ ಸಾಮಾನ್ಯ ಬದಲಾವಣೆಗಳು.</td>
<td>• ಹಳೆಯ ದಿನಪತ್ರಿಕೆಯನ್ನು ಉಂಡೆ ಮಾಡಿಸಿ ದಪ್ಪವಾದ ಮೇಲೆ ಭೂಮಿಯ ಆಕಾರವನ್ನು ತೋರಿಸುವುದು.<br>• ಹಣ್ಣುಗಳು, ಚಂಡುಗಳ ಸಹಾಯದಿಂದ ಭೂಮಿಯು ಗುಂಡಾಗಿದೆ ಎಂಬ ಕಲ್ಪನೆ ನೀಡುವುದು.<br>• ಗೋಳದ (ಗ್ಲೋಬ್) ಬಳಕೆಯಿಂದ ಭೂಮಿಯು ಗೋಳಾಕಾರವಾಗಿದೆ ಎಂಬುದನ್ನು ಚರ್ಚಿಸುವುದು.<br>• ಸೂರ್ಯ, ಚಂದ್ರ ಉದಾಹರಣೆಯ ಮೂಲಕ ಭೂಮಿಯು ಗೋಳಾಕಾರವಾಗಿದೆ ಎಂಬ ಕಲ್ಪನೆ ಮೂಡಿಸುವುದು.<br>• ಚಿತ್ರಪಟಗಳನ್ನು ತೋರಿಸುತ್ತಾ ವಿವರಣೆ.<br>• ಮಕ್ಕಳನ್ನು ತರಗತಿಯಿಂದ ಹೊರಗೆ ಕರೆದುಕೊಂಡು ಹೋಗಿ ದಿನದ ಹವಾಮಾನ ವೀಕ್ಷಣೆಗೆ ಅವಕಾಶ ನೀಡುವುದು.<br>• ಮಳೆ, ಬಿಸಿಲು, ಮೋಡ ಎಂಬುದರ ಬಗ್ಗೆ ಮಕ್ಕಳ ಅನುಭವಗಳನ್ನು ಆಧರಿಸಿ ಹವಾಮಾನದ ಬಗ್ಗೆ ಚರ್ಚಿಸುವುದು.<br>• ಹವಾಮಾನ ಚಾರ್ಟಿನಲ್ಲಿ ಪ್ರತಿದಿನದ ಹವಾಮಾನ ದಾಖಲಿಸುವುದು.<br>• ಬೆಳಗ್ಗಿನಿಂದ ಸಂಜೆಯವರೆಗೆ ಹವಾಮಾನದಲ್ಲಾಗುವ ಬದಲಾವಣೆಗಳನ್ನು ಗಮನಿಸಿ ಹೇಳಲು ಅವಕಾಶ ನೀಡುವುದು.</td>
<td>• ಹಳೆಯ ದಿನಪತ್ರಿಕೆಗಳು<br>• ಚೆಂಡು, ಗುಂಡಾಗಿರುವ ಹಣ್ಣುಗಳು<br>• ಗ್ಲೋಬ್<br>• ಸೂರ್ಯ, ಚಂದ್ರ ಭೂಮಿಯ ಚಿತ್ರಪಟಗಳು.<br><br>•ಪರಿಸರ ವೀಕ್ಷಣೆ<br>•ಮಕ್ಕಳ ಅನುಭವ<br>•ಹವಾಮಾನ ಚಾರ್ಟ್<br>•ಹಿರಿಯ ಅನುಭವ</td>
<td>• ಭೂಮಿಯ ಆಕಾರ ಹೇಗಿದೆ?<br>• ಭೂಮಿಯ ಮಾದರಿಯನ್ನು ಏನೆಂದು ಕರೆಯುತ್ತಾರೆ?<br>• ಭೂಮಿಯ ಮಾದರಿಯನ್ನು ಮಣ್ಣಿನಿಂದ ತಯಾರಿಸು.<br><br>1. ಹವಾಮಾನ ಚಾರ್ಟಿನಲ್ಲಿ ಒಂದು ವಾರದ ಹವಾಮಾನ ದಾಖಲಿಸು.
<table>
<tr><th>ವಾರ</th><th>ಬೆಳಿಗ್ಗೆ</th><th>ಮಧ್ಯಾಹ್ನ</th><th>ಸಂಜೆ</th></tr>
<tr><td>ಭಾನುವಾರ<br>ಸೋಮವಾರ<br>ಮಂಗಳವಾರ<br>ಬುಧವಾರ<br>ಗುರುವಾರ<br>ಶುಕ್ರವಾರ<br>ಶನಿವಾರ</td><td></td><td></td><td></td></tr>
</table></td>
<td>6</td>
</tr>
</table>

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಜಿಲ್ಲೆಯ ಪರಿಚ್ಛಯ ಮಾಡಿಕೊಳ್ಳುವರು.<br>(ಗುಲ್ಬರ್ಗಾ, ಬೆಳಗಾಂ, ಮೈಸೂರು, ಬೆಂಗಳೂರು ವಿಭಾಗವಾರು ಜಿಲ್ಲೆಗಳ ಪರಿಚಯ ಮಾಡಿಕೊಳ್ಳುವರು.) | ಜಿಲ್ಲೆಯ ಮೇಲ್ಮೈಲಕ್ಷಣಗಳು, ಹವಾಗುಣ, ಪ್ರಮುಖ ಬೆಳೆಗಳು, ಪ್ರಸಿದ್ಧ ಸ್ಥಳಗಳು, ಪ್ರಮುಖ ಪಟ್ಟಣಗಳು, ಕೈಗಾರಿಕೆ ಮುಖ್ಯ ಕಸುಬು, ಕರಕುಶಲ ಕಲೆ, ಅಕ್ಕಪಕ್ಕದ ಜಿಲ್ಲೆಗಳ ಬಗ್ಗೆ ಕಿರು ಪರಿಚಯವನ್ನು ತಿಳಿಯುವುದು.<br>• ಜಿಲ್ಲೆಯ ಪ್ರಸಿದ್ಧ ವ್ಯಕ್ತಿಗಳ ಕೊಡುಗೆಗಳನ್ನು ತಿಳಿಯುವರು. | • ಹಿರಿಯರಿಂದ ಕಾಲಗಳ ಬಗ್ಗೆ ತಿಳಿಯಲು ಪ್ರೇರೇಪಿಸುವುದು.<br>• ಕರ್ನಾಟಕ ಭೂಪಟದ ಸಹಾಯದಿಂದ ತಮ್ಮ ವಿಭಾಗದ ಜಿಲ್ಲೆಗಳ ಪರಿಚಯ ಮಾಡುವುದು.<br>• ಸ್ಥಳೀಯ ಜಿಲ್ಲೆಯ ನಕ್ಷೆಯಲ್ಲಿ ಪ್ರಮುಖ ಪಟ್ಟಣಗಳನ್ನು ಗುರುತಿಸಿ ಮಕ್ಕಳು, ಗುರುತಿಸಿದ ಸ್ಥಳ ನಕ್ಷೆಯಲ್ಲಿ ಎಲ್ಲಿ ಬರುತ್ತದೆಂದು ಗುರುತಿಸಲು ಅವಕಾಶ.<br>• ತಮ್ಮ ಜಿಲ್ಲೆಯ ನಕ್ಷೆಯನ್ನು ರಚಿಸುವುದು.<br>• ತಮ್ಮ ಜಿಲ್ಲೆಗೆ ಸಂಬಂಧಪಟ್ಟ ಪ್ರಮುಖ ಸ್ಥಳಗಳ, ಪ್ರಸಿದ್ಧ ದೇವಸ್ಥಾನಗಳ ಚಿತ್ರಗಳು ಮತ್ತು ಮಾಹಿತಿಯನ್ನು ಸಂಗ್ರಹಿಸಿ – ಚಿತ್ರ ಕೋಶ ರಚಿಸುವುದು.<br>• ಹಿರಿಯರೊಂದಿಗೆ ಚರ್ಚೆ ಮಾಡಿ ತಮ್ಮ ಜಿಲ್ಲೆಯ ಬಗ್ಗೆ ಮಾಹಿತಿ ಪಡೆಯುವುದು.<br>• ಸಾಧ್ಯವಾದಲ್ಲಿ ಜಿಲ್ಲೆಯ ಪ್ರಮುಖ ಸ್ಥಳಗಳಿಗೆ ಶಾಲಾ ಪ್ರವಾಸ ಕೈಗೊಳ್ಳುವುದು.<br>• ತಮ್ಮ ಜಿಲ್ಲೆಗೆ ಸಂಬಂಧಿಸಿದ ಸಾಹಿತ್ಯವನ್ನು ಓದುವರು. | ನಕ್ಷೆಗಳು<br>ಚಿತ್ರಪಟಗಳು<br>ನಕ್ಷೆ ರಚನೆ<br>ಹಿರಿಯರ ಅನುಭವ<br>ಜಿಲ್ಲಾ ಪ್ರವಾಸ. | • ನಿನ್ನ ತಾಲ್ಲೂಕಿನಲ್ಲಿನ ಹೋಬಳಿಗಳನ್ನು ತಿಳಿಸು.<br>• ನಿನ್ನ ಜಿಲ್ಲೆಯನ್ನು ಹೆಸರಿಸು.<br>• ನಿನ್ನ ಜಿಲ್ಲೆಯಲ್ಲಿನ ತಾಲ್ಲೂಕುಗಳನ್ನು ಪಟ್ಟಿ ಮಾಡು.<br>• ನಿನ್ನ ಜಿಲ್ಲೆಯ 2 ಪ್ರಮುಖ ಪಟ್ಟಣಗಳನ್ನು ಹೆಸರಿಸು.<br>• ನಿನ್ನ ಜಿಲ್ಲೆಯ ಪ್ರಮುಖ 5 ಬೆಳೆಗಳ ಹೆಸರು ಬರೆ.<br>• ನಿನ್ನ ಜಿಲ್ಲೆಯ ಸುತ್ತಲಿರುವ ಜಿಲ್ಲೆಗಳ ಹೆಸರನ್ನು ಬರೆ.<br>• ನಿನ್ನ ಜಿಲ್ಲೆಯಲ್ಲಿರುವ ಪ್ರಮುಖ ಕೈಗಾರಿಕೆಗಳಾವುವು?<br>• ನಿನ್ನ ಜಿಲ್ಲೆ ಯಾವುದಕ್ಕೆ ಹೆಚ್ಚು ಪ್ರಸಿದ್ಧಿ ಪಡೆದಿದೆ.<br>• ನಿನ್ನ ಜಿಲ್ಲೆಯಲ್ಲಿರುವ ಪ್ರಮುಖ ಸ್ಥಳಗಳಾವುವು?<br>• ನಿನ್ನ ಜಿಲ್ಲೆಯಲ್ಲಿರುವ ಪ್ರಸಿದ್ಧ ವ್ಯಕ್ತಿಗಳಾರು ? | |

# 1ನೇ ತರಗತಿ ಅವಧಿಗಳ ಹಂಚಿಕೆ

| ಕ್ರ. ಸಂ. | ಮುಖ್ಯ ಪರಿಕಲ್ಪನೆ | ಬೋಧನಾ ಅವಧಿಗಳು |
|---|---|---|
| 1. | ಕುಟುಂಬ ಮತ್ತು ಸ್ನೇಹಿತರು | |
| | 1.1 ಸಂಬಂಧಗಳು | 15 |
| | 1.2 ಕೆಲಸ ಮತ್ತು ಆಟ | 17 |
| | 1.3 ಪ್ರಾಣಿಗಳು | 12 |
| | 1.4 ಸಸ್ಯಗಳು | 14 |
| 2. | ಆಹಾರ | 23 |
| 3. | ವಸತಿ | 15 |
| 4. | ನೀರು | 12 |
| 5. | ಪ್ರಯಾಣ | 13 |
| 6. | ನಮ್ಮ ಇತರ ಅವಶ್ಯಕತೆಗಳು | 15 |
| 7. | ಸ್ವಚ್ಛತೆ ಮತ್ತು ಸುರಕ್ಷತೆ | 24 |
| 8. | ನಮ್ಮ ಭೂಮಿ | 20 |
| | | **180** |

| ಪೂರ್ವ ಸಿದ್ಧತೆ | ಬೋಧನೆ | ಪರಿಹಾರ ಬೋಧನೆ | ಒಟ್ಟು ಅವಧಿಗಳು |
|---|---|---|---|
| **30** | **180** | **30** | **240** |

# 1. ಕುಟುಂಬ ಮತ್ತು ಸ್ನೇಹಿತರು.

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಕುಟುಂಬದೊಂದಿಗೆ ಇರುವ ಸಂಬಂಧವನ್ನು ಅರಿಯುವರು.<br>• ಮನೆ ಕೆಲಸದಲ್ಲಿ ಇರುವ ಪರಸ್ಪರ ಸಹಕಾರವನ್ನು ಅರಿಯುವರು.<br>• ಕುಟುಂಬ ಹಾಗೂ ಸುತ್ತಲಿನ ಸ್ನೇಹಿತರನ್ನು ಗುರುತಿಸುವವರು. | • ಕುಟುಂಬದ ಕಲ್ಪನೆ ಕುಟುಂಬದ ಸದಸ್ಯರ – ಸಂಬಂಧಗಳ ಪರಿಚಯ.<br>• ಮನೆ ಕೆಲಸಗಳಲ್ಲಿ ಮನೆಯ ಸದಸ್ಯರ ಪರಸ್ಪರ ಭಾಗವಹಿಸುವಿಕೆ.<br>• ಸ್ನೇಹಿತರ ಸಂಬಂಧಗಳ ಪರಿಚಯ | • ಮಗುವಿನ ದಿನನಿತ್ಯದ ಕುಟುಂಬದ ಅನುಭವಗಳನ್ನು ಕುರಿತು ಪ್ರಶ್ನಿಸುವುದು.<br>• ಕುಟುಂಬದ ಸದಸ್ಯರ ಹಾಗು ಸ್ನೇಹಿತರ ಹೆಸರನ್ನು ಹೇಳಿಸುವುದು.<br>• ಅವರು ನಿನಗೇನು ಆಗುತ್ತಾರೆಂದು ಸಂಬಂಧ ಕಲ್ಪಿಸುವುದು.<br>• ಕುಟುಂಬದ ಛಾಯಾ ಚಿತ್ರದ ಮೂಲಕ ಕುಟುಂಬದ ಸದಸ್ಯರ ಪರಿಚಯ.<br>• ಹಾಡಿನ ಮೂಲಕ ಸಂಬಂಧಗಳ ಪರಿಚಯ.<br>• ಮನೆಯ ಆಟದ ಮುಖಾಂತರ ಕುಟುಂಬದ ಸದಸ್ಯರುಗಳ ಪರಿಚಯ. | • ಮಗುವಿನ ದಿನನಿತ್ಯದ ಅನುಭವ.<br>• ಕುಟುಂಬದ ಛಾಯಾಚಿತ್ರ.<br>• ಸಂಬಂಧಗಳನ್ನು ವ್ಯಕ್ತ ಪಡಿಸುವ ಹಾಡು | • ಕುಟುಂಬದ ಸದಸ್ಯರ ಹೆಸರನ್ನು ಕೇಳಿ ಅವರ ಸಂಬಂಧ ತಿಳಿಯುವುದು.<br>• ನಿನ್ನ ತಮ್ಮನಿಗೆ ನೀನು ಹೇಗೆ ಕೆಲಸದಲ್ಲಿ ನೆರವಾಗುವೆ?<br>• ನೀನು ಮಾಡುವ ಕೆಲಸಗಳಲ್ಲಿ ನಿನ್ನ ಮನೆಯವರು ಹೇಗೆ ನಿನಗೆ ನೆರವಾಗುತ್ತಾರೆ.<br>• ಶಾಲೆಯ ಹಾಗೂ ಕುಟುಂಬದಲ್ಲಿನ ಸ್ನೇಹಿತರನ್ನು ಪಟ್ಟಿ ಮಾಡು | 7<br>8 |
| **1.2. ಕೆಲಸ ಮತ್ತು ಆಟ** | | | | | |
| • ಮನೆಯಲ್ಲಿ ನಡೆಯುವ ಹಾಗೂ ನೆರೆಹೊರೆಯಲ್ಲಿ ನಡೆಯುವ ಕೆಲಸಗಳನ್ನು ಗುರುತಿಸುವರು.<br>• ನೆರೆಹೊರೆಯ ಸಹಕಾರ | • ಕುಟುಂಬದಲ್ಲಿ ಹಾಗೂ ನೆರೆಹೊರೆಯಲ್ಲಿನಡೆಯುವ ಸಾಮಾನ್ಯ ಕೆಲಸಗಳು.<br>• ಇತರ ಕುಟುಂಬದ ಸದಸ್ಯರು ಕೆಲಸ ಕಾರ್ಯಗಳಲ್ಲಿ ಪರಸ್ಪರ ಸಹಕರಿಸುವುದನ್ನು ಗಮನಿಸುವರು. | • ನೀನು ಬೆಳಿಗ್ಗೆ ಎದ್ದಾಗಲಿನಿಂದ ರಾತ್ರಿ ಮಲಗುವ ವರೆಗೆ ಯಾವ ಯಾವ ಕೆಲಸಗಳನ್ನು ಮಾಡುತ್ತೀಯಾ ಹೇಳು?<br>• ನಿಮ್ಮ ಮನೆಯಲ್ಲಿ ನಿಮ್ಮ ತಾಯಿ / ತಂದೆ ಯಾವ ಯಾವ ಕೆಲಸಗಳನ್ನು ಮಾಡುತ್ತಾರೆ ಹೇಳು?<br>• (ಪ್ರಶ್ನೆಗಳ ಮೂಲಕ ಚರ್ಚೆ) | • ಮಗುವಿನ ದಿನನಿತ್ಯದ ದಿನಚರಿ / ಅನುಭವ | • ಈ ಕೆಲಸಗಳನ್ನು ನಿಮ್ಮ ಮನೆಯಲ್ಲಿ ಯಾರು ಮಾಡುತ್ತಾರೆ?<br>ಉದಾ : ಹಾಲು ಕರೆಯುವುದು, ಕಸ ಗುಡಿಸುವುದು, ಅಡುಗೆ ಮಾಡುವುದು, ಪಾತ್ರೆ ತೊಳೆಯುವುದು. | 10 |
| • ಮನೆಯಲ್ಲಿ ಆಡುವ ಆಟಗಳನ್ನು ಹೆಸರಿಸುವರು. | • ಮಗು ಮನೆಯಲ್ಲಿ ಆಡುವ ಆಟಗಳಾದ ಕಣ್ಣಾ | • ಚರ್ಚೆಯ ಮುಖಾಂತರ ಮಗು ಮನೆಯಲ್ಲಿ ಆಡುವ ಆಟಗಳ ಹೆಸರುಗಳನ್ನು ಹೇಳಿಸುವುದು. | • ಮನೆಯಲ್ಲಿ ಮಕ್ಕಳು ಆಟವಾಡುತ್ತಿರುವ ಚಿತ್ರ. | • ನಿನ್ನ ತಮ್ಮ / ತಂಗಿಯರ ಜೊತೆ ಯಾವ | 7 |


| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಸುತ್ತಲೂ ಇರುವ ಸಾಮಾನ್ಯ ಪ್ರಾಣಿಗಳನ್ನು ಗುರುತಿಸುವರು. | • ಮುಚ್ಚಾಲೆ, ಚೌಕಾಬಾರ, ಇತ್ಯಾದಿ ಸಾಮಾನ್ಯ ಆಟಗಳನ್ನು ಹೆಸರಿಸುವುದು. | • ಮಗು ತಿಳಿಸಿದ ಆಟಗಳಲ್ಲಿ ಒಂದು ಆಟವನ್ನು ಹೇಗೆ ಆಡುವುದೆಂದು ಚರ್ಚಿಸುವುದು.<br>• ಮಗುವು ಸ್ನೇಹಿತರೊಂದಿಗೆ ಹಾಗೂ ಹಿರಿಯರೊಂದಿಗೆ ಆಡುವ ಆಟಗಳನ್ನು ಪಟ್ಟಿ ಮಾಡುವರು. | • ಮಕ್ಕಳ ಅನುಭವ<br>• ಮಕ್ಕಳು ಬಳಸುವ ಸಾಮಾನ್ಯ ಆಟಿಕೆಗಳು | ಆಟಗಳನ್ನು ಆಡುವೆ?<br>• ನಿಮ್ಮ ತಂದೆ / ತಾಯಿ ಚಿಕ್ಕ ವಯಸ್ಸಿನಲ್ಲಿ ಯಾವ ಆಟಗಳನ್ನು ಆಡುತ್ತಿದ್ದರೆಂದು ಕೇಳಿಕೊಂಡು ಬಾ? | |
| **1.3. ಪ್ರಾಣಿಗಳು** | | | | | |
| • ಸುತ್ತಲೂ ಇರುವ ಸಾಮಾನ್ಯ ಸಸ್ಯಗಳನ್ನು ಗುರುತಿಸುವರು. | • ಮನೆ ಮತ್ತು ತನ್ನ ಊರಿನಲ್ಲಿರುವ ವಿವಿಧ ರೀತಿಯ ಸಾಮಾನ್ಯ ಪ್ರಾಣಿಗಳನ್ನು ಗುರುತಿಸುವುದು. | • ಕೆಲವು ಸಾಮಾನ್ಯ ಪ್ರಾಣಿಗಳ ಚಿತ್ರಗಳನ್ನು ತೋರಿಸಿ ಹೆಸರು ಹೇಳಿಸುವುದು.<br>• ಮಕ್ಕಳನ್ನು ಹೊರ ಸಂಚಾರಕ್ಕೆ ಕರೆದೊಯ್ದು ಅಲ್ಲಿ ಕಂಡು ಬರುವ ಸಾಮಾನ್ಯ ಪ್ರಾಣಿಗಳನ್ನು ಗುರುತಿಸಲು ತಿಳಿಸುವುದು.<br>• ಮಕ್ಕಳನ್ನು 2 ಗುಂಪು ಮಾಡಿ ಒಂದು ಗುಂಪಿನವರನ್ನು ಪ್ರಾಣಿಗಳಂತೆ ಕೂಗಿಸುವುದು. ಇನ್ನೊಂದು ಗುಂಪು ಪ್ರಾಣಿಯ ಹೆಸರು ಹೇಳುವುದು (ಆಟ ಆಡಿಸುವುದು)<br>• ಪ್ರಾಣಿಗಳ ಚಿತ್ರಗಳನ್ನು ಸಂಗ್ರಹಿಸುವುದು. | • ಪ್ರಾಣಿಗಳ ಚಿತ್ರಗಳು<br>• ಸ್ಥಳೀಯ ಪರಿಸರದಲ್ಲಿರುವ ನೈಜ ಪ್ರಾಣಿಗಳು<br>• ಮಕ್ಕಳ ನೈಜ ಅನುಭವ | • ಚಿತ್ರ ನೋಡಿ ಹೆಸರು ಹೇಳು<br>• ಪ್ರಾಣಿಗಳ ಮುಖ ಅಥವಾ ದೇಹವನ್ನು ತೋರಿಸಿ ಆ ಪ್ರಾಣಿಯ ಹೆಸರು ಹೇಳುವಂತೆ ಮಾಡುವುದು.<br>• ಪ್ರಾಣಿಯ ಕೂಗು ಕೇಳಿ ಈ ಪ್ರಾಣಿ ಯಾವುದೆಂದು ಹೇಳು? | 12 |
| **1.4. ಸಸ್ಯಗಳು** | | | | | |
| | • ಸ್ಥಳೀಯ ಪರಿಸರದಲ್ಲಿರುವ ಸಾಮಾನ್ಯ ಸಸ್ಯಗಳಾದ ಭತ್ತ, ರಾಗಿ, ಬಾಳೆ, ಬದನೆ, ಮಾವು, ಬೇವು, ತೆಂಗು ಇತ್ಯಾದಿ ಸಸ್ಯಗಳನ್ನು ಗುರುತಿಸುವುದು. | • ಚರ್ಚೆಯ ಮುಖಾಂತರ ಮಕ್ಕಳು ನೋಡಿರುವ ಸಾಮಾನ್ಯ ಸಸ್ಯಗಳ ಹೆಸರು ಹೇಳಿಸುವುದು.<br>• ಹೊರ ಸಂಚಾರ ಕರೆದುಕೊಂಡು ಹೋಗಿ ಮಕ್ಕಳು ಬೇರೆ ಬೇರೆ ಸಸ್ಯಗಳ ವೀಕ್ಷಣೆಗೆ ಅವಕಾಶ ನೀಡುವುದು. | • ಸಾಮಾನ್ಯ ಸಸ್ಯಗಳಾದ ಭತ್ತ, ರಾಗಿ, ಜೋಳ, ಬದನೆ, ಮಾವು, ತೆಂಗು ಇತ್ಯಾದಿ ಸಸ್ಯಗಳ ಚಿತ್ರಪಟಗಳು.<br>• ಸ್ಥಳೀಯ ಪರಿಸರ | • ಸಾಮಾನ್ಯ ನೈಜ್ಯ ಸಸ್ಯಗಳನ್ನು ತೋರಿಸಿ ಹೆಸರು ಹೇಳು.<br>• ಕೆಲವು ತರಗತಿಯಲ್ಲಿ ಬೆಳೆಸಿರುವ ನೈಜ್ಯ | 14 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಆಹಾರದ ಅವಶ್ಯಕತೆಯನ್ನು ತಿಳಿಯುವರು. | | • ಮನೆಯ/ಶಾಲೆಯ ಸುತ್ತಮುತ್ತಲಿನ ಹೂ ಗಿಡಗಳು, ತರಕಾರಿ ಗಿಡಗಳನ್ನು ಗುರ್ತಿಸಿ ಹೆಸರು ಹೇಳುವರು. | • ಮಕ್ಕಳ ಅನುಭವ | ಸಸ್ಯಗಳನ್ನು ಜೋಡಿಸಿ ಹೇಳಿದ ಸಸ್ಯವನ್ನು ಗುರುತಿಸುವಂತೆ ಹೇಳುವುದು.<br>• ಹೊರ ಸಂಚಾರದಲ್ಲಿ ತೋರಿಸಿ ಸಸ್ಯಗಳ ಹೆಸರುಗಳನ್ನು ಹೇಳಿಸುವುದು.<br>• ನಿಮ್ಮ ಮನೆಯಲ್ಲಿ ಬೆಳೆಸಿರುವ ಸಸ್ಯಗಳ ಹೆಸರುಗಳನ್ನು ಹೇಳು. | |
| **2. ಆಹಾರ** | | | | | |
| ವಸ್ತುಗಳನ್ನು ಗುರುತಿಸುವರು. | • ಆಹಾರ ಏಕೆ ಬೇಕು ಎಂಬುದನ್ನು ತಿಳಿಸುವುದು. | • ನೀನು ಊಟ ಮಾಡದಿದ್ದರೆ ಏನಾಗುತ್ತದೆ?<br>• ನೀನು ಯಾವಾಗ ಊಟ ಮಾಡುತ್ತೀಯ?<br>• ಸರಳ ಪ್ರಶ್ನೆಗಳೊಂದಿಗೆ ಚರ್ಚಿಸುವುದು. | • ಮಕ್ಕಳ ಅನುಭವಗಳು | • ನಿನಗೆ ಊಟ ಏಕೆ ಬೇಕು?<br>• ನೀನು ದಿನಕ್ಕೆ ಎಷ್ಟು ಬಾರಿ ಊಟ ಮಾಡುತ್ತೀಯಾ? | 6 |
| • ತಾನು ಸೇವಿಸುವ ಆಹಾರವನ್ನು | • ಮನೆಯಲ್ಲಿ ಮತ್ತು ಊರಿನಲ್ಲಿ ದೊರೆಯುವ ಆಹಾರ ವಸ್ತುಗಳನ್ನು ಗುರುತಿಸುವುದು. | • ವಿವಿಧ ರೀತಿಯ ಆಹಾರ ಪದಾರ್ಥಗಳ ಚಿತ್ರಗಳನ್ನು ತೋರಿಸಿ ಸ್ಥಳೀಯ ಆಹಾರ ಪದಾರ್ಥಗಳ ಪರಿಚಯ.<br>• ಸ್ಥಳೀಯವಾಗಿ ಬೆಳೆಯುವ ಆಹಾರ ಪದಾರ್ಥಗಳು ಯಾವುವು?<br>• ಅವಕಾಶವಿದ್ದಲ್ಲಿ ಆಹಾರ ಪದಾರ್ಥಗಳ ವೀಕ್ಷಣೆಗೆ ಕರೆದುಕೊಂಡು ಹೋಗುವುದು.<br>• ಹಿರಿಯರೊಂದಿಗೆ ಆಹಾರ ಪದಾರ್ಥಗಳ ಬಗ್ಗೆ ಚರ್ಚಿಸುವುದು. | • ವಿವಿಧ ರೀತಿಯ ಸ್ಥಳೀಯ ಆಹಾರ ಪದಾರ್ಥಗಳ ಚಿತ್ರಗಳು.<br>• ಮಕ್ಕಳ ಅನುಭವಗಳು.<br>• ಹಿರಿಯರ ಅನುಭವ. | • ಕೊಟ್ಟಿರುವ ಆಹಾರದ ಚಿತ್ರಗಳ ಹೆಸರು ಹೇಳು.<br>• ವಿವಿಧ ರೀತಿಯ ಆಹಾರ ಪದಾರ್ಥಗಳ ಚಿತ್ರಗಳನ್ನು ತೋರಿಸಿ ಆ ಚಿತ್ರಗಳಲ್ಲಿರುವ ಆಹಾರ ಪದಾರ್ಥಗಳಲ್ಲಿ ನಿಮ್ಮ ಊರಿನಲ್ಲಿ ಸಿಗುವ ಆಹಾರ ಪದಾರ್ಥಕ್ಕೆ ಸುತ್ತು ಹಾಕು. | 10 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| ಗುರುತಿಸುವರು.<br>• ತನ್ನ ಮನೆಯ ಪರಿಚಯ ಮಾಡಿಕೊಳ್ಳುವರು. | ದಿನನಿತ್ಯ ತಾನು ಸೇವಿಸುವ ಆಹಾರವನ್ನು ಗುರುತಿಸುವುದು. | • ಪ್ರತಿದಿನ ಏನೇನು ಆಹಾರ ತಿನ್ನುವೆ?<br>• ಇಷ್ಟವಾದ ತರಕಾರಿ ಯಾವುದು?<br>• ಯಾವ ತಿಂಡಿಯನ್ನು ಇಷ್ಟ ಪಡುವೆ?<br>ಸರಳ ಪ್ರಶ್ನೆಗಳನ್ನು ಕೇಳುವುದರೊಂದಿಗೆ ಚರ್ಚಿಸುವುದು.<br>• ಚಿತ್ರಗಳನ್ನು ತೋರಿಸಿ ಆಹಾರ ಪದಾರ್ಥಗಳ ಪರಿಚಯ ಮಾಡುವುದು. | • ಮಗುವಿನ ಅನುಭವ<br>• ಆಹಾರ ಪದಾರ್ಥಗಳ ಚಿತ್ರಗಳು | • ನಿಮ್ಮ ಊರಿನಲ್ಲಿ ಹಿಂದೆ ಯಾವ ಯಾವ ಬೆಳೆ ಬೆಳೆಯುತ್ತಿದ್ದರೆಂದು ಹಿರಿಯರಿಂದ ಕೇಳಿ ತಿಳಿಸು.<br>• ಪ್ರತಿನಿತ್ಯ ಯಾವ ಯಾವ ಆಹಾರ ಸೇವಿಸುವೆ?<br>• ನಿನಗೆ ಇಷ್ಟವಾದ ಆಹಾರ ಯಾವುದು?<br>• ಒಂದು ಆಹಾರ ಪದಾರ್ಥದ ಚಿತ್ರ ತೋರಿಸಿ ಇದು ಯಾವ ಆಹಾರ ಪದಾರ್ಥ ಹೇಳು? ಈ ಆಹಾರ ಪದಾರ್ಥವನ್ನು ನೀನು ಸೇವಿಸುವೆಯಾ? | 7 |
| **3. ವಸತಿ** | | | | | |
| • ಸ್ಥಳೀಯ ಪ್ರದೇಶದ ದೂರವನ್ನು ಬಹಳ ಹತ್ತಿರ, ಹತ್ತಿರ ದೂರ ಹೀಗೆ ಅಂದಾಜು ಮಾಡುವರು. | ಮಗುವಿನ ಮನೆಯ ಭೌತಿಕ ಲಕ್ಷಣಗಳ ಪರಿಚಯ ಮಾಡಿಸುವುದು. | • ಮಕ್ಕಳೊಡನೆ ಪ್ರಶ್ನೆಯ ಮುಖಾಂತರ ಮನೆಯ ಭೌತಿಕ ಲಕ್ಷಣಗಳನ್ನು ಪರಿಚಯಿಸುವುದು.<br>• ಮನೆಯ ಚಿತ್ರಪಟದ ಆಧಾರದಿಂದ ಮನೆಯ ಭೌತಿಕ ಲಕ್ಷಣಗಳು ಹಾಗೂ ಅವಶ್ಯಕತೆ ಬಗ್ಗೆ ಚರ್ಚಿಸುವುದು. | ಮನೆಯ ಚಿತ್ರಪಟ. | • ನಿಮ್ಮ ಮನೆಗೆ ಎಷ್ಟು ಬಾಗಿಲುಗಳಿವೆ?<br>• ನಿಮ್ಮ ಮನೆಗೆ ಎಷ್ಟು ಕಿಟಕಿಗಳಿವೆ?<br>• ಹೆಂಚು, ಶೀಟು, ಮೊಲ್ಡ್ ಗರಿ ಇತ್ಯಾದಿ. ಇವುಗಳಲ್ಲಿ ಯಾವ ಗುಂಪಿಗೆ ನಿಮ್ಮ ಮನೆ ಸೇರುತ್ತದೆ? | 7 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ನಿತ್ಯ ಜೀವನದಲ್ಲಿ ನೀರಿನ ಉಪಯೋಗಗಳನ್ನು ಗುರ್ತಿಸುವರು. | ಶಾಲೆಯಿಂದ ಮನೆಗೆ ಇರುವ, ಮನೆಯಿಂದ ಬಸ್ ನಿಲ್ದಾಣ ಮತ್ತು ಮನೆಯಿಂದ ಸ್ನೇಹಿತನ ಮನೆಗೆ ಇರುವ ದೂರವನ್ನು ಬಹಳ ಹತ್ತಿರ, ಹತ್ತಿರ, ದೂರ ಹೀಗೆ ಅಂದಾಜು ಮಾಡುವುದು. | • ಮಕ್ಕಳೊಡನೆ ಪ್ರಶ್ನೆಯ ಮುಖಾಂತರ ಶಾಲೆಯಿಂದ ಮನೆಗೆ, ಮನೆಯಿಂದ ಬಸ್ ನಿಲ್ದಾಣ ಮತ್ತು ಮನೆಯಿಂದ ಸ್ನೇಹಿತನ ಮನೆಗೆ ಇರುವ ದೂರವನ್ನು ಬಹಳ ಹತ್ತಿರ, ಹತ್ತಿರ, ದೂರ ಹೀಗೆ ಅಂದಾಜು ಮಾಡಿಸುವುದು.<br>• ವಸ್ತುಗಳು ಹಾಗೂ ಮಗು ಇರುವ ಚಿತ್ರಪಟದ ಸಹಾಯದಿಂದ ಬಹಳ ಹತ್ತಿರ, ಹತ್ತಿರ ಮತ್ತು ದೂರದ ಅಂದಾಜು ಮಾಡಿಸುವುದು. | • ಮನೆ, ಶಾಲೆ ಹಾಗೂ ಸ್ನೇಹಿತನ ಮನೆ ಇರುವ ಚಿತ್ರಪಟ<br>• ವಸ್ತುಗಳು ಮತ್ತು ಮಗು ಇರುವ ಚಿತ್ರಪಟ | • ಚಿತ್ರ ತೋರಿಸಿ ಆ ಚಿತ್ರದಲ್ಲಿರುವ ವಸ್ತುಗಳಿಗೆ ಇರುವ ದೂರವನ್ನು ಕೇಳುವುದು.<br>• ನಿಮ್ಮ ಮನೆಯಿಂದ ತುಂಬ ದೂರದಲ್ಲಿರುವ ಸ್ನೇಹಿತನ ಮನೆ ಯಾವುದು?<br>• ತುಂಬ ಹತ್ತಿರವಿರುವ ಸ್ನೇಹಿತನ ಮನೆ ಯಾವುದು? | 8 |
| **4. ನೀರು** | | | | | |
| | • ಮಕ್ಕಳು ನಿತ್ಯ ಜೀವನದಲ್ಲಿ ಯಾವ ಯಾವ ಕೆಲಸಗಳಲ್ಲಿ ನೀರಿನ ಉಪಯೋಗಗಳನ್ನು ಮಾಡುವರು ಎಂಬುದನ್ನು ಗುರುತಿಸುವುದು. | • ಮಕ್ಕಳ ಅನುಭವದ ಆಧಾರದ ಮೇಲೆ ನಿತ್ಯ ಜೀವನದಲ್ಲಿ ನೀರನ್ನು ಯಾವ ಕೆಲಸಗಳಿಗೆ ಉಪಯೋಗಿಸುತ್ತಾರೆ ಎಂದು ಕೇಳಿ ಪಟ್ಟಿ ಮಾಡಿಸುವುದು.<br>• ನೀರಿನ ಬಳಕೆಯ ಚಿತ್ರಪಟಗಳ ಸಹಾಯದಿಂದ ನೀರಿನ ಉಪಯೋಗಗಳನ್ನು ಹೇಳಿಸುವುದು ಹಾಗೂ ಇನ್ನೂ ಯಾವ ಯಾವ ಉಪಯೋಗಗಳಿವೆ ಎಂದು ಕೇಳಿ ತಿಳುವಳಿಕೆ ನೀಡುವುದು.<br>• ನೀರಿನ ಮೂಲಗಳ ಚಿತ್ರಪಟ ತೋರಿಸಿ ಅವುಗಳ ಉಪಯೋಗಗಳ ಬಗ್ಗೆ ಚರ್ಚಿಸುವುದು. | • ಮಕ್ಕಳ ಅನುಭವ<br>• ನೀರಿನ ಬಳಕೆಯ ಚಿತ್ರ ಪಟಗಳು.<br>• ನೀರಿನ ಮೂಲಗಳ ಚಿತ್ರಪಟಗಳು. | ಹಾಡಿನ ಮೂಲಕ ನೀರಿನ ಉಪಯೋಗ ತಿಳಿಯುವುದು.<br>ಉದಾ : ನೀರು ಬೇಕೆ ನೀರು? ನೀರು ಏಕೆ ಬೇಕು. ಕುಡಿಯಲು ನೀರು ಬೇಕು<br>(ಇದೇ ರೀತಿ ಪ್ರಶ್ನೆ ಕೇಳಿ ಉತ್ತರ ಪಡೆಯುವುದು) | 12 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಸ್ಥಳೀಯ ಸಾರಿಗೆಯ ವಿವಿಧ ಬಗೆಗಳನ್ನು ಗುರುತಿಸುವರು. | | | | • ಕೆಲವು ಹೇಳಿಕೆಗಳನ್ನು ನೀಡಿ ಸರಿ ತಪ್ಪು ಗುರುತಿಸುವುದು.<br>ಉದಾ : ಬಾಯಾರಿದಾಗ ನೀರು ಬೇಕು.<br>ಬಟ್ಟೆ ಹೊಗೆಯಲು ನೀರು ಬೇಕಾಗಿಲ್ಲ.<br>• ನೀರಿನ ಉಪಯೋಗಗಳನ್ನು ಕೇಳುವುದು. | |
| **5. ಪ್ರಯಾಣ (ಸಾರಿಗೆ ಮತ್ತು ಸಂಪರ್ಕ)** | | | | | |
| • ಮೂಲಭೂತ ಅಗತ್ಯಗಳನ್ನು ಪಟ್ಟಿ ಮಾಡುವರು. | ಮಕ್ಕಳ ಸ್ಥಳೀಯ ಸಾರಿಗೆಗಳಾದ ಬಸ್ಸ್, ಸೈಕಲ್, ಎತ್ತಿನಗಾಡಿ, ಕಾರು, ಆಟೋ, ರೈಲು, ದೋಣಿ, ವಿಮಾನ ಇತ್ಯಾದಿ .... ವಿವಿಧ ಬಗೆಗಳನ್ನು ಗುರುತಿಸುವುದು. | • ಮಕ್ಕಳು ನೋಡಿರುವ ವಾಹನಗಳ ಬಗ್ಗೆ ಪ್ರಶ್ನೆಯ ಮುಖಾಂತರ ಚರ್ಚಿಸುವುದು.<br>• ಚಿತ್ರಪಟಗಳ ಸಹಾಯದಿಂದ ಸ್ಥಳೀಯ ಸಾರಿಗೆಯ ವಿವಿಧ ಬಗೆಗಳನ್ನು ಗುರುತಿಸುವುದು.<br>• ವಾಹನಗಳ ಪರಿಚಯದ ಹಾಡನ್ನು ಹೇಳಿಕೊಡುವುದು.<br>• ವಿವಿಧ ಬಗೆಯ ವಾಹನಗಳ ಚಿತ್ರ ನೋಡಿ ಆ ಚಿತ್ರಗಳಲ್ಲಿ ನೆಲದ ಮೇಲೆ, ನೀರಿನ ಮೇಲೆ, ಆಕಾಶದಲ್ಲಿ ಸಂಚರಿಸುವ ವಾಹನಗಳನ್ನು ಬೇರೆ ಬೇರೆ ಗುಂಪುಗಳಾಗಿ ಮಾಡಿಸುವುದು. | • ಮಕ್ಕಳ ಅನುಭವ<br>• ಸ್ಥಳೀಯ ಸಾರಿಗೆಯ ಚಿತ್ರಪಟಗಳು. | • ಚಿತ್ರಗಳನ್ನು ನೀಡಿ ನೀನು ಪ್ರಯಾಣ ಮಾಡಿರುವ ವಾಹನಗಳ ಹೆಸರು ಹೇಳು.<br>• ಚಿತ್ರಗಳನ್ನು ತೋರಿಸಿ ವಾಹನಗಳ ಹೆಸರು ಹೇಳಿಸುವುದು.<br>• ನಿಮ್ಮ ಮನೆಯಲ್ಲಿ ವಾಹನವಿದೆಯೇ? ಇದ್ದಲ್ಲಿ ಯಾವ ವಾಹನವಿದೆ?<br>• ದೋಣಿಯನ್ನು ಯಾವ ಪ್ರದೇಶದಲ್ಲಿ ಬಳಸುತ್ತಾರೆ?<br>• ವಿಮಾನ ಎಲ್ಲಿ ಹಾರಾಡುತ್ತದೆ? | 13 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| **6. ನಮ್ಮ ಇತರ ಅವಶ್ಯಕತೆಗಳು** | | | | | |
| **ಸ್ವಚ್ಛತೆ - I**<br>• ದೇಹದ ಭಾಗಗಳನ್ನು ಗುರುತಿಸುವರು. | ಮೂಲಭೂತ ಅಗತ್ಯಗಳಾದ ಆಹಾರ, ನೀರು, ಗಾಳಿ, ಮನೆ, ಬಟ್ಟೆಗಳ ಪಟ್ಟಿ ಮಾಡುವುದು. | • ಮಕ್ಕಳ ಅನುಭವದ ಆಧಾರದ ಮೇಲೆ ನಮಗೆ ಬದುಕಲು ಏನು ಬೇಕು? ಎಂದು ಕೇಳಿ ತಿಳಿಯ ಪಡುವುದು.<br>• ಮೂಲಭೂತ ಅಗತ್ಯಗಳ ಚಿತ್ರಪಟಗಳ ಮುಖಾಂತರ ಅವುಗಳ ಅವಶ್ಯಕತೆಗಳ ಬಗ್ಗೆ ಚರ್ಚಿಸುವುದು. | • ಮಕ್ಕಳ ಅನುಭವ<br>• ಮೂಲಭೂತ ಅಗತ್ಯಗಳ ಚಿತ್ರಪಟಗಳು | • ನೀನು ಬದುಕಲು ಏನೇನು ಬೇಕು ಹೇಳು?<br><br>• ಈ ಚಿತ್ರದಲ್ಲಿ ನಿನಗೆ ಬೇಕೇ ಬೇಕಾಗಿರುವುದಕ್ಕೆ ಗೆರೆ ಹಾಕಿ ಗುರುತಿಸು. [ಮೂಲಭೂತ ಅಗತ್ಯಕ್ಕೆ] | 15 |
| **7. ಸ್ವಚ್ಛತೆ ಮತ್ತು ಸುರಕ್ಷತೆ** | | | | | |
| • ದೇಹದ ಅಂಗಗಳ ಸ್ವಚ್ಛತೆಯ ಪ್ರಾಮುಖ್ಯತೆ ಮತ್ತು ಸ್ವಚ್ಛತೆಯ ಅಭ್ಯಾಸಗಳನ್ನು ಅರಿಯುವರು. | ದೇಹದ ಭಾಗಗಳಾದ ತಲೆ, ಕಣ್ಣು, ಕಿವಿ, ಮೂಗು, ಬಾಯಿ, ಕುತ್ತಿಗೆ, ಎದೆ, ಕೈ – ಕಾಲುಗಳನ್ನು ಗುರುತಿಸುವುದು. | • ಮಕ್ಕಳ ಅನುಭವದ ಆಧಾರದ ಮೇಲೆ, ಅವರ ದೇಹದ ಭಾಗಗಳನ್ನು ಗುರುತಿಸುವರು / ಚರ್ಚಿಸುವುದು.<br>• ದೇಹದ ಭಾಗಗಳನ್ನು ಉಪಯೋಗಿಸಿ ಕೆಲಸ ಮಾಡುತ್ತಿರುವ ಚಿತ್ರಪಟದ ಸಹಾಯದಿಂದ ಚರ್ಚೆ.<br>• ದೇಹದ ಅಂಗಗಳ ಹಾಡು, ಚಿತ್ರ, ಕಥೆ ಹಾಡಿನಿಂದ ಭಾಗಗಳನ್ನು ಗುರುತಿಸುವುದು. | • ಮಕ್ಕಳ ಅನುಭವ<br>• ದೇಹದ ಭಾಗಗಳನ್ನು ಉಪಯೋಗಿಸಿ ಕೆಲಸ ಮಾಡುತ್ತಿರುವ ಚಿತ್ರಪಟ<br>• ದೇಹದ ಅಂಗಗಳ ಹಾಡು, ಚಿತ್ರ, ಕಥೆ. | • ದೇಹದ ಹೊರ ಅಂಗಗಳ ಚಿತ್ರಗಳನ್ನು ಜೋಡಿಸಿ. ಹೇಳಿದ ಅಂಗದ ಚಿತ್ರ ಗುರುತಿಸುವುದು.<br>• ಹೇಳಿಕೆಯಂತೆ ಮಾಡು.<br>ಕಣ್ಣುಗಳನ್ನು ಮಿಟುಕಿಸು.<br>ಬಲಗಾಲನ್ನು ಮೇಲೆತ್ತು.<br>ಬಾಯಿಂದ ಆಕಳಿಸು. | 10 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| **ಸಂರಕ್ಷತೆ –**<br>• ಸರತಿ ಕಾಯುವರು.<br>• ಸಾಲಿನಲ್ಲಿ ನಿಲ್ಲುವ ಅಭ್ಯಾಸ ಕಲಿಯುವರು. | ದೇಹದ ಅಂಗಗಳ ಸ್ವಚ್ಛತೆಯ ಪ್ರಾಮುಖ್ಯತೆ ಮತ್ತು ಸ್ವಚ್ಛತೆಯ ಅಭ್ಯಾಸಗಳನ್ನು ಬೆಳೆಸಿಕೊಳ್ಳುವುದು. | • ಚಿತ್ರಪಟಗಳ ಸಹಾಯದಿಂದ ದೇಹದ ಅಂಗಗಳ ಸ್ವಚ್ಛತೆಯ ಪ್ರಾಮುಖ್ಯತೆ ಮತ್ತು ಸ್ವಚ್ಛತೆಯ ಅಭ್ಯಾಸಗಳ ಬಗ್ಗೆ ಚರ್ಚಿಸುವುದು.<br>• ಸ್ವಚ್ಛತೆಯ ಅಭ್ಯಾಸದ ಅಂಶಗಳನ್ನು ಒಳಗೊಂಡ ಚಾರ್ಟ್‌ನ ಸಹಾಯದಿಂದ ದಿನನಿತ್ಯ ಹೀಗೆ ಮಾಡು ಎಂದು ತಿಳಿ ಹೇಳುವುದು.<br>• ಸ್ವಚ್ಛತಾ ರೈಲಿನ ಆಟವಾಡಿಸುವುದು.<br>• ತರಗತಿಯಲ್ಲಿ ಒಬ್ಬೊಬ್ಬರನ್ನು ನಾಯಕರನ್ನಾಗಿ ಮಾಡಿ ಅವರು ಪ್ರತಿನಿತ್ಯ ಮಕ್ಕಳ ಸ್ವಚ್ಛತೆಯನ್ನು ಗಮನಿಸಲು ಹೇಳುವುದು.<br>ಉದಾ : ಉಗುರುಗಳ ಸ್ವಚ್ಛತೆ, ತಲೆ ಬಾಚಿರುವುದು, ಕೈ ಕಾಲು ತೊಳೆದಿರುವುದು. | • ದೇಹದ ಅಂಗಗಳ ಸ್ವಚ್ಛತೆಯ ಚಿತ್ರಪಟಗಳು<br>• ಸ್ವಚ್ಛತೆಯ ಅಭ್ಯಾಸದ ಅಂಶಗಳನ್ನು ಒಳಗೊಂಡ ಚಾರ್ಟು.<br>• ಸ್ವಚ್ಛತಾ ರೈಲಿನ ಆಟ. | • ಊಟ ಮಾಡುವ ಮುಂಚೆ ಏನು ಮಾಡಬೇಕು?<br>• ಊಟ ಮಾಡಿದ ಮೇಲೆ ಏನು ಮಾಡಬೇಕು?<br>• ಬೆಳಿಗ್ಗೆ ಎದ್ದ ಮೇಲೆ ಏನು ಮಾಡುವೆ?<br>• ಎಷ್ಟು ದಿನಗಳಿಗೊಮ್ಮೆ ಉಗುರುಗಳನ್ನು ಕತ್ತರಿಸುವೆ?<br>• ಕೈ ತೊಳೆಯದೆ ಊಟ ಮಾಡಿದರೆ ಏನಾಗುತ್ತದೆ.<br>• ತಿಂಗಳು / ವಾರಗಳ ಕಾಲ ಸ್ನಾನ ಮಾಡದಿದ್ದರೆ ಏನಾಗುತ್ತದೆ? | 12 |
| • ಅವಶ್ಯಕತೆಗಳನ್ನು ಪೂರೈಸುವ ಸೌಲಭ್ಯಗಳನ್ನು | ಮಕ್ಕಳು ಶಾಲೆ, ತರಗತಿ, ಬಸ್ ನಿಲ್ದಾಣ, ಇತ್ಯಾದಿ ಸ್ಥಳಗಳಲ್ಲಿ ಸರತಿ ನಿಲ್ಲುವ ಮತ್ತು ಕಾಯುವ ಅಭ್ಯಾಸ ಮಾಡಿಸುವುದು. | ಜನರು ಸರತಿ ನಿಂತಿರುವ ಮತ್ತು ಕಾಯುತ್ತಿರುವ ಚಿತ್ರಪಟಗಳ ಸಹಾಯದಿಂದ ಸರತಿಯ ಅವಶ್ಯಕತೆ ಮತ್ತು ಅನುಕೂಲತೆ ಬಗ್ಗೆ ಮನವರಿಕೆ ಮಾಡಿಸುವುದು.<br>ತರಗತಿಯ ಸನ್ನಿವೇಶದಲ್ಲಿ (ಮಧ್ಯಾಹ್ನ ಉಪಹಾರ) ಮಕ್ಕಳು ಸರತಿ ಕಾಯುವ ಮತ್ತು ನಿಲ್ಲುವ ಸಂದರ್ಭಗಳನ್ನು ಮನವರಿಕೆ ಮಾಡಿಸುವುದು. | • ಜನರು ನಿಂತಿರುವ ಮತ್ತು ಕಾಯುತ್ತಿರುವ ಸಂದರ್ಭಗಳಾದ ಬೀದಿನಲ್ಲಿ, ಬಸ್ ಹತ್ತುತಿರುವುದು ಇತ್ಯಾದಿ ಸಂದರ್ಭಗಳ ಚಿತ್ರಪಟ.<br>• ಮಕ್ಕಳ ಅನುಭವ<br>• ಹಾಡು | • ಎಲ್ಲೆಲ್ಲಿ ಸರತಿ ಸಾಲಿನಲ್ಲಿ ಹೋಗುತ್ತೀಯ?<br>• ಶಾಲೆಯಲ್ಲಿ ಯಾವ ಯಾವ ಸಂದರ್ಭದಲ್ಲಿ ಸರತಿ ಸಾಲಿನಲ್ಲಿ ಹೋಗುತ್ತೀಯಾ?<br>• ಸರತಿ ಸಾಲಿನಲ್ಲಿ | 10 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| ಗುರುತಿಸುವರು.<br>• ಸೂರ್ಯ, ಚಂದ್ರ, ನಕ್ಷತ್ರಗಳನ್ನು ಗುರುತಿಸುವರು. | ಅವಶ್ಯಕತೆಗಳನ್ನು ಪೂರೈಸುವ ಸೌಲಭ್ಯಗಳಾದ ಶಾಲೆ, ಸಮುದಾಯ ಭವನ, ಮಾರುಕಟ್ಟೆ ಆಸ್ಪತ್ರೆ, ಬಸ್ ನಿಲ್ದಾಣ, ಬೀದಿ ದೀಪ, ಚರಂಡಿ, ಬೀದಿ ನಲ್ಲಿ ಇತ್ಯಾದಿಗಳನ್ನು ಗುರುತಿಸುವುದು. | • ಹಾಡಿನ ಮೂಲಕ ಸರತಿ ಸಾಲಿನ ಅವಶ್ಯಕತೆ ತಿಳಿಸುವುದು.<br>ಹೆಚ್ಚಿನ ಸೌಲಭ್ಯಗಳನ್ನು ಹೊಂದಿರುವ ಊರಿನ ಚಿತ್ರಪಟ (ಶಾಲೆ, ಅಂಚೆ ಕಛೇರಿ, ಬಸ್ ನಿಲ್ದಾಣ .... ಇತ್ಯಾದಿ) ದ ಸಹಾಯದಿಂದ ಮಕ್ಕಳು ಸೌಲಭ್ಯಗಳನ್ನು ಗುರುತಿಸುವ ಚಟುವಟಿಕೆ. | • ಹೆಚ್ಚಿನ ಸೌಲಭ್ಯಗಳನ್ನು ಹೊಂದಿರುವ ಊರಿನ ಚಿತ್ರಪಟ. | ಹೋಗುವುದರಿಂದ ಏನು ಪ್ರಯೋಜನವಾಗುತ್ತದೆ?<br>• ನಿಮ್ಮ ಊರಿನಲ್ಲಿ ಜನ ಯಾವ ಯಾವ ಸಂದರ್ಭದಲ್ಲಿ ಸರತಿ ಸಾಲನ್ನು ಕಾಯುವರು?<br>• ಚಿತ್ರ ನೋಡಿ ಸೌಲಭ್ಯಗಳನ್ನು ಗುರುತಿಸು.<br>ಉದಾ : ಬೀದಿ ದೀಪ, ಬೀದಿನಲ್ಲಿ,<br>• ಚಿತ್ರ ತೋರಿಸಿ ಆ ಸೌಲಭ್ಯದ ಉಪಯೋಗ ತಿಳಿಯುವುದು.<br>ಉದಾ : ಆಸ್ಪತ್ರೆ, ಶಾಲೆ.<br>• ಕೆಲವು ಚಿತ್ರಗಳನ್ನು ತೋರಿಸಿ ಇವು ನಿಮ್ಮ ಊರಿನಲ್ಲಿವೆಯೇ ಹೇಳು?<br>ಉದಾ : ಬೀದಿನಲ್ಲಿ, ಬಸ್ ನಿಲ್ದಾಣ, ಆಸ್ಪತ್ರೆ. | 14 |
| **8. ನಮ್ಮ ಭೂಮಿ** | | | | | |
| •ಸ್ಥಳೀಯ ಪರಿಸರದ ಬಗ್ಗೆ ಮಾಹಿತಿ ಪಡೆಯುವರು. | ಆಕಾಶದಲ್ಲಿರುವ ಸೂರ್ಯ, ಚಂದ್ರ, ನಕ್ಷತ್ರಗಳನ್ನು ಗುರುತಿಸುವರು. | • ಹಗಲಿನಲ್ಲಿ ಮತ್ತು ರಾತ್ರಿ ವೇಳೆ ಆಕಾಶ ವೀಕ್ಷಣೆ.<br>• ಚಿತ್ರಗಳನ್ನು ತೋರಿಸಿ ಚಂದ್ರ, ಸೂರ್ಯ, ನಕ್ಷತ್ರಗಳನ್ನು ಗುರುತಿಸುವುದು. | • ಆಕಾಶ ವೀಕ್ಷಣೆ<br>• ಚಿತ್ರಗಳು,<br>• ಮಕ್ಕಳ ಅನುಭವಗಳು | • ಹಗಲಿನಲ್ಲಿ ಆಕಾಶದಲ್ಲಿ ಏನನ್ನು ಕಾಣುವೆ?<br>• ಸೂರ್ಯ ಮುಳುಗಿದ | 8 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | | • ಹಾಡಿನ ಮೂಲಕ ಸೂರ್ಯ, ಚಂದ್ರ, ನಕ್ಷತ್ರಗಳನ್ನು ಪರಿಚಯಿಸುವುದು.<br>• ಸೂರ್ಯ, ಚಂದ್ರ, ನಕ್ಷತ್ರಗಳ ಚಿತ್ರ ಬರೆಸುವುದು. | | ಮೇಲೆ ಆಕಾಶದಲ್ಲಿ ಏನೇನು ಕಾಣಿಸುತ್ತದೆ? | |
| | •ತನ್ನ ಸುತ್ತಲಿನ ಮರಗಳು, ಕೆರೆ, ಬಾವಿ, ಬೆಟ್ಟ, ಹೊಲ - ಗದ್ದೆ, ನದಿ, ಕಾಡು ಇತ್ಯಾದಿಗಳನ್ನು ಗುರುತಿಸುವರು. | • ಕೆಲವು ಪರಿಸರದ ಚಿತ್ರಗಳನ್ನು ತೋರಿಸಿ ಅವುಗಳ ಹೆಸರು ಕೇಳುವುದು.<br>• ನಿಮ್ಮ ಊರಿನ ಸುತ್ತಲೂ ಏನೆಲ್ಲ ಇದೆ?<br>ಸರಳ ಪ್ರಶ್ನೆಗಳ ಮೂಲಕ ಸ್ಥಳೀಯ ಪರಿಸರದ ಬಗ್ಗೆ ಚರ್ಚಿಸುವುದು.<br>• ಸ್ಥಳೀಯವಾಗಿ ಹೊರ ಸಂಚಾರಕ್ಕೆ ಕರೆದುಕೊಂಡು ಹೋಗಿ ಪರಿಸರ ವೀಕ್ಷಿಸುವಂತೆ ಮಾಡುವುದು.<br>• ಸ್ಥಳೀಯ ಪರಿಸರದ ಕೆಲವು ಚಿತ್ರಗಳನ್ನು ಬರೆಸುವುದು.<br>ಉದಾ : ಬೆಟ್ಟ, ಕೆರೆ, ನದಿ. | •ಪರಿಸರಕ್ಕೆ ಸಂಬಂಧಪಟ್ಟ ಚಿತ್ರಗಳು.<br>• ಮಕ್ಕಳ ಅನುಭವಗಳು<br>• ಸ್ಥಳೀಯ ಪರಿಸರದ ನೈಜ್ಯ ಅನುಭವಗಳು. | • ಚಿತ್ರಗಳನ್ನು ನೋಡು ಇವು ನಿಮ್ಮ ಊರಿನಲ್ಲಿದ್ದರೆ ಗೆರೆ ಹಾಕು.<br>• ಚಿತ್ರಗಳನ್ನು ನೋಡಿ ಹೆಸರು ಹೇಳು.<br>ಉದಾ : ಬೆಟ್ಟ, ಕೆರೆ, ಬಾವಿ.<br>• ನದಿ, ಬೆಟ್ಟ, ಬಾವಿಯ ಚಿತ್ರ ಬರೆ. | 12 |

## 2ನೇ ತರಗತಿ ಬೋಧನಾ ಅವಧಿಗಳ ಹಂಚಿಕೆ

| ಕ್ರ. ಸಂ. | ಮುಖ್ಯ ಪರಿಕಲ್ಪನೆ | ಬೋಧನಾ ಅವಧಿಗಳು |
|---|---|---|
| 1. | ಕುಟುಂಬ ಮತ್ತು ಸ್ನೇಹಿತರು | |
| | 1.1 ಸಂಬಂಧಗಳು | 27 |
| | 1.2 ಕೆಲಸ ಮತ್ತು ಆಟ | 14 |
| | 1.3 ಪ್ರಾಣಿಗಳು | 16 |
| | 1.4 ಸಸ್ಯಗಳು | 14 |
| 2. | ಆಹಾರ | 25 |
| 3. | ವಸತಿ | 17 |
| 4. | ನೀರು | 11 |
| 5. | ಪ್ರಯಾಣ | 08 |
| 6. | ನಮ್ಮ ಇತರ ಅವಶ್ಯಕತೆಗಳು | 07 |
| 7. | ಸ್ವಚ್ಛತೆ ಮತ್ತು ಸುರಕ್ಷತೆ | 26 |
| 8. | ನಮ್ಮ ಭೂಮಿ | 15 |
| | | **180** |

| ಪೂರ್ವ ಸಿದ್ಧತೆ | ಬೋಧನೆ | ಪರಿಹಾರ ಬೋಧನೆ | ಒಟ್ಟು ಅವಧಿಗಳು |
|---|---|---|---|
| **30** | **180** | **30** | **240** |

# 1. ಕುಟುಂಬ ಮತ್ತು ಸ್ನೇಹಿತರು.

## 1.1. ಸಂಬಂಧಗಳು

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಕುಟುಂಬಗಳಲ್ಲಿರುವ ವೈವಿಧ್ಯತೆಯನ್ನು ಗುರುತಿಸುವರು.<br>• ಕುಟುಂಬ ಒಂದು ಆಧಾರ ವ್ಯವಸ್ಥೆ ಎಂಬುದನ್ನು ಅರಿಯುವರು. | • ಚಿಕ್ಕ ಮತ್ತು ದೊಡ್ಡ ಕುಟುಂಬದ ಕಲ್ಪನೆ.<br>• ಕುಟುಂಬ ನಮಗೆ ನೆರವು ನೀಡುವ ಸಂದರ್ಭಗಳು – ಕಲಿಯುವ ಅಂಶಗಳು.<br>• ನೆರೆಹೊರೆಯ ಕುಟುಂಬಗಳ ನಡುವಿನ ಸಹಕಾರ | • ಮಕ್ಕಳ ಮನೆಯಲ್ಲಿರುವ ಸದಸ್ಯರ ಪರಿಚಯ – ಸಂಬಂಧಗಳ ಪರಿಚಯ.<br>• ಚಿಕ್ಕ ಮತ್ತು ದೊಡ್ಡ ಕುಟುಂಬಗಳ ಪರಿಕಲ್ಪನೆಯನ್ನು ಚಿತ್ರಗಳ ಸಹಾಯದಿಂದ ಮಾಡಿಸುವುದು<br>• ಕುಟುಂಬದ ಹಾಗೂ ನೆರೆಹೊರೆಯ ನೆರವಿನ ಬಗ್ಗೆ ಮಕ್ಕಳ ಅನುಭವಗಳನ್ನು ಆಧರಿಸಿ ಚರ್ಚೆ. | • ಚಿಕ್ಕ ಮತ್ತು ದೊಡ್ಡ ಕುಟುಂಬಗಳ ಛಾಯಾ ಚಿತ್ರಗಳು / ಚಿತ್ರಪಟಗಳು.<br>• ಮಕ್ಕಳ ದಿನನಿತ್ಯದ ಅನುಭವಗಳು. | • ನಿನ್ನ ಸ್ನೇಹಿತರಲ್ಲಿ ಯಾರ ಮನೆಯಲ್ಲಿ ಹೆಚ್ಚು ಜನರಿದ್ದಾರೆ?<br>• ಯಾರ ಮನೆಯಲ್ಲಿ ಕಡಿಮೆ ಜನರಿದ್ದಾರೆ?<br>• ನಿನಗೆ ಮನೆಯಲ್ಲಿ / ನೆರೆಹೊರೆಯಲ್ಲಿ ಯಾರು ಯಾರು ನೆರವಾಗುತ್ತಾರೆ? | 8 |
| • ನಾವು ಇತರರಂತೆ ಇದ್ದೇವೆ, ಆದರೂ ಇತರರಿಗಿಂತ ಬೇರೆಯಾಗಿದ್ದೇವೆ ಎಂಬುದನ್ನು ತಿಳಿಯುವರು. | • ಮಕ್ಕಳ ನಡುವಿನ ದೈಹಿಕ ವ್ಯತ್ಯಾಸಗಳು ಮತ್ತು ಸಾಮ್ಯತೆಗಳು.<br>ಉದಾ : ತಲೆ, ಕೈ, ಕೂದಲು, ಬಣ್ಣ .....<br>• ವ್ಯತ್ಯಾಸಗಳು ಇದ್ದರೂ ತರಗತಿಯಲ್ಲಿ ನಾವೆಲ್ಲಾ ಒಂದು ಎಂಬ ಕಲ್ಪನೆ ಗುರುತಿಸುವಿಕೆ. | • ವೀಕ್ಷಣೆಯ ಮೂಲಕ ಸ್ನೇಹಿತರಲ್ಲಿ ದೈಹಿಕವಾಗಿ ಇರುವ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಗುರುತಿಸುವುದು.<br>• ಚಿತ್ರ ನೋಡಿ ಹೋಲಿಕೆ ಮಾಡುವುದು.<br>• ನೋಡಿರುವ ಇತರ ವ್ಯಕ್ತಿಗಳೊಂದಿಗೆ ತನ್ನ ಹೋಲಿಕೆ ಹಾಗು ಹಿರಿಯರೊಂದಿಗೆ ಚರ್ಚೆ. | • ತರಗತಿಯಲ್ಲಿರುವ ಮಕ್ಕಳು.<br>ವ್ಯಕ್ತಿಗಳ ಚಿತ್ರಪಟಗಳು.<br>ಮಕ್ಕಳ ಅನುಭವಗಳು. | • ಚಿತ್ರ ನೋಡಿ ಇವರಿಬ್ಬರಿಗೂ ಇರುವ ವ್ಯತ್ಯಾಸ ಗುರ್ತಿಸು (ಬಣ್ಣ ಎತ್ತರ, ದಪ್ಪ ಕೂದಲು ......)<br>• ನಿನಗೂ ನಿನ್ನ ಅಜ್ಜ / ಅಪ್ಪ / ಅಣ್ಣನಿಗೂ ಯಾವ ಹೋಲಿಕೆಗಳಿವೆ? | 7 |
| • ಕುಟುಂಬದ / ಸಂಬಂಧಿಕರ ಕುಟುಂಬದ ಸಮಾರಂಭಗಳಲ್ಲಿ ಭಾಗವಹಿಸಿರುವ ಬಗ್ಗೆ ವರದಿ ಮಾಡುವರು. | • ಕುಟುಂಬದ ಸಮಾರಂಭಗಳು<br>• ★ ಮದುವೆ<br>★ ನಾಮಕರಣ | • ಮನೆಯಲ್ಲಿ ಆಚರಿಸುವ ಸಮಾರಂಭಗಳನ್ನು ಕುರಿತು ಮಕ್ಕಳೊಂದಿಗೆ ಚರ್ಚೆ.<br>• ತನ್ನ ಸ್ನೇಹಿತರೊಂದಿಗೆ ಸಮಾರಂಭವನ್ನು ಕುರಿತು ವರದಿ ಮಾಡಲು ಅವಕಾಶ.<br>• ಸಮಾರಂಭದ ವಿಶೇಷ.<br>• ಭಾಗವಹಿಸಿದವರ ವಿವರ ಇತ್ಯಾದಿ. | • ಮಕ್ಕಳ ಕಥೆಗಳು<br>• ಸಮಾರಂಭಗಳ ಫೋಟೋ ಆಲ್ಬಂ.<br>• ಮಕ್ಕಳ ಅನುಭವಗಳು. | • ನಿಮ್ಮ ಮನೆಯಲ್ಲಿ ಆಚರಿಸುವ ಹಬ್ಬಗಳ ಹೆಸರನ್ನು ಹೇಳು?<br>• ನೀನು ಭಾಗವಹಿಸಿರುವ | 6 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ರೋಗಿಗಳಿಗೆ ಹಾಗೂ ವಯಸ್ಸಾದವರಿಗೆ ನೆರವು ನೀಡುವ ಮನೋಭಾವ ಬೆಳೆಸಿಕೊಳ್ಳುವರು. | ★ ಹಬ್ಬ ಗಳಲ್ಲಿರುವ ಸಾಮಾನ್ಯ ಆಚರಣೆಗಳ ಬಗ್ಗೆ ಮಾಹಿತಿ (ಎಲ್ಲಾ ಧರ್ಮಕ್ಕೂ ಅನ್ವಯಿಸುವಂತೆ)<br>• ರೋಗಿಗಳು ಮತ್ತು ವಯಸ್ಸಾದವರ ಬಗ್ಗೆ ಅನುಕಂಪ. ಅವರ ತೊಂದರೆಗಳ ಅರಿವು, ಅದಕ್ಕೆ ಸ್ಪಂದಿಸುವ ಮನೋಭಾವ. | • ಸಮಾರಂಭಗಳಿಗೆ ಸಂಬಂಧಿಸಿದ ಹಾಡುಗಳನ್ನು ಹೇಳುವುದು.<br>• ಹಬ್ಬಗಳನ್ನು ಕುರಿತ ಕಥೆಗಳು.<br>• ಮನೆಯವರಲ್ಲಿ ಯಾರಿಗಾದರೂ ರೋಗ ಬಂದಾಗ ನಾವು ಏನು ಮಾಡಬಹುದು? ನಾವು ಹೇಗೆ ನೆರವು ನೀಡಬಹುದು? ಎಂಬುದರ ಬಗ್ಗೆ ಚರ್ಚೆ.<br>• ವಯಸ್ಸಾದವರಿಗೆ ನೆರವಾದವರ ಬಗ್ಗೆ ಕಥೆ ಹೇಳುವುದು.<br>• ರೋಗಿ ಮತ್ತು ಮನೆಯವರಂತೆ ನಾಟಕ ಮಾಡಿಸುವುದು. | • ಮಕ್ಕಳ ಅನುಭವಗಳು<br>• ಮಕ್ಕಳ ಕಥೆಗಳು<br>• ವೀಕ್ಷಣೆ – ಚಿತ್ರಪಟಗಳು | ಸ್ನೇಹಿತರ ಮನೆಯ ಮದುವೆಯ ಬಗ್ಗೆ ಹೇಳು?<br>• ಯಾವ ಹಬ್ಬದಲ್ಲಿ ನಿನಗೆ ತುಂಬಾ ಖುಷಿ? ಏಕೆ.<br>• ನಿಮ್ಮ ಮನೆಯಲ್ಲಿರುವ ಅಜ್ಜ / ಅಜ್ಜಿಗೆ ಹೇಗೆ ನೆರವಾಗುವೆ?<br>• ನಿಮ್ಮ ಮನೆಯಲ್ಲಿ ಅಮ್ಮನಿಗೆ / ಅಜ್ಜನಿಗೆ ಖಾಯಿಲೆ ಬಂದಾಗ ಯಾರು ಯಾರು ನೆರವಾಗುತ್ತಾರೆ? | 6 |
| **1.2. ಕೆಲಸ ಮತ್ತು ಆಟ** | | | | | |
| • ಮನೆಯಲ್ಲಿ ಯಾರು ಯಾರು ಯಾವ ಯಾವ ಕೆಲಸಗಳನ್ನು ಮಾಡುತ್ತಾರೆ ಎಂಬುದನ್ನು ಗುರುತಿಸುವರು. | • ಕುಟುಂಬದ ಸದಸ್ಯರು ಮಾಡುವ ಕೆಲಸಗಳು – ಅಪ್ಪ ಅಮ್ಮ ಅಕ್ಕ, ಅಣ್ಣ .........<br>• ಕುಟುಂಬದಲ್ಲಿ ನಡೆಯುವ ಕೆಲಸಗಳು – ಮಾಡುವ ವ್ಯಕ್ತಿಗಳು. | • ಮನೆಯಲ್ಲಿ ನಡೆಯುವ ಕೆಲಸಗಳನ್ನು ಪಟ್ಟಿ ಮಾಡಿಸುವುದು? ಈ ಕೆಲಸಗಳನ್ನು ಯಾರು? ಯಾವಾಗ ಮಾಡುತ್ತಾರೆ ಎಂಬುದನ್ನು ಚರ್ಚಿಸುವುದು.<br>• ಕೆಲಸ ಮತ್ತು ವ್ಯಕ್ತಿಗಳ ಚೀಟಿಗಳನ್ನು ಹೊಂದಾಣಿಕೆ ಮಾಡಿಸುವುದು. | • ಕೆಲಸದ ಚಾರ್ಟ್ (ಚಿತ್ರಗಳಿಂದ ಕೂಡಿದ)<br>• ಮಕ್ಕಳ ಅನುಭವಗಳು | • ನಿಮ್ಮ ಮನೆಯಲ್ಲಿ ಎಲ್ಲರೂ ಸೇರಿ ಮಾಡುವ ಕೆಲಸಗಳು ಯಾವುವು?<br>• ಈ ಕೆಲಸಗಳನ್ನು ನಿನ್ನ ಮನೆಯಲ್ಲಿ ಯಾರು ಮಾಡುತ್ತಾರೆ?<br>ಉದಾ : ಸೌದೆ ಒಡೆಯುವುದು .... ಕಸ ಗುಡಿಸುವುದು .........<br>• ಇವರು ಮಾಡುವ ಕೆಲಸವನ್ನು ಅಭಿನಯಿಸು.<br>• ಅಪ್ಪ • ಅಮ್ಮ | 7 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಶಾಲೆಯ ಒಳಗೆ ಮತ್ತು ಹೊರಗೆ ಆಡುವ ಆಟಗಳನ್ನು ಪಟ್ಟಿ ಮಾಡುವರು. | • ಶಾಲೆಯ ಒಳಾಂಗಣ ಮತ್ತು ಹೊರಾಂಗಣ ಆಟಗಳ ಪರಿಚಯ.<br>– ಒಳಾಂಗಣ : ಡಬ್ಬಿ ಆಟ, ಹಾವು – ಏಣಿ, ಜೂಟಾಟ, ಕುಂಟಾಟ ........<br>– ಹೊರಾಂಗಣ : ಕುಂಟೇಬಿಲ್ಲೆ, ಜೂಟಾಟ, ಓಡೋ ಆಟ ....... | • ಮಕ್ಕಳು ಆಡುವ ಆಟಗಳನ್ನು ಪಟ್ಟಿ ಮಾಡಿಸುವುದು.<br>• ಶಾಲೆಯ ಒಳಗೆ ಮತ್ತು ಹೊರಗಿನ ಆಟಗಳ ಬಗ್ಗೆ ಚರ್ಚಿಸುವುದು.<br>• ವಿವಿಧ ಆಟಗಳ ಚಿತ್ರಗಳನ್ನು ಪ್ರದರ್ಶಿಸುವುದು.<br>• ಹಿರಿಯರಿಂದ ಅವರ ಬಾಲ್ಯದ ಆಟಗಳ ಬಗ್ಗೆ ಚರ್ಚಿಸುವಂತೆ ಮಕ್ಕಳಿಗೆ ತಿಳಿಸುವುದು. | • ಆಟಗಳ ಸಾಮಗ್ರಿಗಳು<br>• ಆಟಗಳ ಚಿತ್ರಗಳು<br>• ಮಕ್ಕಳ ಅನುಭವಗಳು<br>• ಹಿರಿಯರ ಅನುಭವಗಳು | • ಈ ಆಟಗಳ ಚಿತ್ರಗಳನ್ನು ಶಾಲೆಯಲ್ಲಿ ಮತ್ತು ಮನೆಯಲ್ಲಿ ಆಡುವ ಆಟಗಳೆಂದು ವರ್ಗೀಕರಿಸು.<br>• ನೀನು ಶಾಲೆಯಲ್ಲಿ ಆಡುವ ಆಟಗಳನ್ನು ಹೆಸರಿಸು.<br>• ವಿವಿಧ ಆಟಗಳಲ್ಲಿ ಬಳಸುವ ಸಾಮಗ್ರಿಗಳನ್ನು ಪಟ್ಟಿ ಮಾಡು.<br>• ನೀನು ಶಾಲೆಯ ಹೊರಗೆ ಆಡುವ ಆಟಗಳಾವುವು? | 7 |
| **1.3. ಪ್ರಾಣಿಗಳು** | | | | | |
| • ಸ್ಥಳೀಯ ಪ್ರಾಣಿಗಳು ಮತ್ತು ಪಕ್ಷಿಗಳನ್ನು ಗುರುತಿಸುವರು. | ಸ್ಥಳೀಯ ಪ್ರಾಣಿ ಮತ್ತು ಪಕ್ಷಿಗಳು. ಕೋತಿ, ಕಾಗೆ, ಮೀನು, ಕಪ್ಪೆ .... ಜಿರಳೆ ...... | • ಮಕ್ಕಳು ನೋಡಿರುವ ಪ್ರಾಣಿಗಳ ಹೆಸರನ್ನು ಹೇಳಿಸುವುದು. ಚಿತ್ರಗಳಲ್ಲಿರುವ ಪ್ರಾಣಿಗಳನ್ನು ಗುರುತಿಸಲು ತಿಳಿಸುವುದು. | • ಚಿತ್ರಗಳು, ಮಾದರಿಗಳು ಪರಿಸರ ಮಕ್ಕಳ ಅನುಭವ | • ಚಿತ್ರ ನೋಡಿ ಹೆಸರು ಹೇಳು<br>ಕಪ್ಪೆ ಚಿತ್ರ, ಆನೆ ಚಿತ್ರ ಪಾರಿವಾಳ ಚಿತ್ರ, ಕಾಗೆ ಚಿತ್ರ, ನೊಣ ಚಿತ್ರ, ಜಿರಳೆ ಚಿತ್ರ | 4 |
| • ತೆವಳುವ, ಹಾರುವ ಜೀವಿಗಳು, ಕೀಟಗಳನ್ನು ಗುರ್ತಿಸಿ ಹೇಳುವರು. | ತೆವಳುವ ಪ್ರಾಣಿಗಳು – ಹಾವು, ಮೊಸಳೆ.<br>ಹಾರುವ ಪ್ರಾಣಿಗಳು – ಕೀಟಗಳು (ನೊಣ, ಸೊಳ್ಳೆ .....)<br>ಕೊಕ್ಕು ಇರುವ ಪ್ರಾಣಿಗಳು, ಪಕ್ಷಿಗಳು. (ಇವುಗಳ ಬಗ್ಗೆ ಮಕ್ಕಳಿಗಿರುವ ಕಲ್ಪನೆಯನ್ನು ಗುರುತಿಸುವುದು) | • ಕೊಟ್ಟಿರುವ ಚಿತ್ರಗಳಲ್ಲಿ ರೆಕ್ಕೆ ಇರುವ ಚಿಕ್ರ ಪ್ರಾಣಿಗಳು, ತೆವಳುವ ಪ್ರಾಣಿಗಳನ್ನು ಗುರ್ತಿಸುವಂತೆ, ಹೆಸರಿಸುವಂತೆ ಮಾಡುವುದು.<br>• ಮಕ್ಕಳಿಗೆ ಗೊತ್ತಿರುವ ಪಕ್ಷಿಗಳ ಹೆಸರನ್ನು ಹೇಳಿಸುವುದು. | • ಚಿತ್ರಗಳು, ಪರಿಸರ, ಕಥೆಗಳು, ಹಾಡುಗಳು. (ಪಕ್ಷಿ ಕೀಟಗಳ) | • ಇವುಗಳಲ್ಲಿ ಬಾಲ ಇರುವ ಪ್ರಾಣಿಗಳನ್ನು ಗುರ್ತಿಸಿ.<br>• ಹಾರುವ ಪ್ರಾಣಿಗಳನ್ನು ಗುರ್ತಿಸು. | 4 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಸಾಕು ಪ್ರಾಣಿಗಳು – ಸಾಕದೇ ಇರುವ ಪ್ರಾಣಿಗಳನ್ನು ವರ್ಗೀಕರಿಸುವರು. | • ಮನೆಯಲ್ಲಿ ಸಾಕುವ ಮತ್ತು ಸಾಕದೇ ಇರುವ ಪ್ರಾಣಿಗಳು.<br>1. ಹಸು, ಕುರಿ, ಮೇಕೆ, ನಾಯಿ, ಕೋಳಿ ......<br>2. ಆನೆ, ಹುಲಿ, ಕರಡಿ, ಕಪ್ಪೆ ..... | • ಮಕ್ಕಳ ಮನೆಯಲ್ಲಿ ಸಾಕುವ ಮತ್ತು ಸಾಕದೇ ಇರುವ ಪ್ರಾಣಿಗಳ ಬಗ್ಗೆ ಚರ್ಚೆ.<br>• ವೀಕ್ಷಣೆ, ಚಿತ್ರಗಳ ವರ್ಗೀಕರಣ. | • ಚಿತ್ರಪಟಗಳು, ಮಕ್ಕಳ ಅನುಭವಗಳು. | 1. ಕೊಟ್ಟಿರುವ ಚಿತ್ರಗಳಲ್ಲಿ ಮನೆಯಲ್ಲಿ ಸಾಕದ ಪ್ರಾಣಿಗಳನ್ನು ಗುರ್ತಿಸು.<br>2. ನಿನಗೆ ಗೊತ್ತಿರುವ ನಾಲ್ಕು ಸಾಕು ಪ್ರಾಣಿಗಳ ಹೆಸರನ್ನು ಬರೆ. | 3 |
| • ಸಾಕು ಪ್ರಾಣಿಗಳ ಪಾಲನೆ ಮತ್ತು ಪೋಷಣೆಯ ಅಭ್ಯಾಸಗಳನ್ನು ಬೆಳೆಸಿಕೊಳ್ಳುವರು. | • ಸಾಕು ಪ್ರಾಣಿಗಳಿಂದ ಅನೇಕ ಉಪಯೋಗಗಳಿವೆ. ಆದ್ದರಿಂದ ಅವುಗಳ ರಕ್ಷಣೆ ಮತ್ತು ಪಾಲನೆ ಮಾಡುವ ಅಭ್ಯಾಸದ ಅಗತ್ಯ. | • ಚಿತ್ರದ ಸಹಾಯದಿಂದ ಪ್ರಾಣಿಗಳಿಂದಾಗುವ ಉಪಯೋಗಗಳನ್ನು ಮನದಟ್ಟು ಮಾಡುವುದು.<br>• ಅವುಗಳ ಆಹಾರದ ಬಗ್ಗೆ ಚರ್ಚೆ.<br>• ಅವುಗಳ ಆರೈಕೆಯ ಬಗ್ಗೆ ಹಿರಿಯರೊಂದಿಗೆ, ಸ್ನೇಹಿತರೊಂದಿಗೆ ಚರ್ಚೆ.<br>• ಪ್ರಾಣಿಗಳಿಗೆ ಸಂಬಂಧಿಸಿದ ಹಾಡುಗಳು. | • ಚಿತ್ರಪಟಗಳು, ಪರಿಸರ, ಹಿರಿಯರ ಅನುಭವಗಳು. | • ಪ್ರಾಣಿಗಳಿಂದ ನಿನಗಾಗುವ ಉಪಯೋಗಗಳನ್ನು ಹೇಳು?<br>• ಪ್ರಾಣಿಗಳನ್ನು ಹೊಡೆಯಬಾರದು ಏಕೆ?<br>• ನಿನಗೆ ಯಾವ ಪ್ರಾಣಿ ಕಂಡರೆ ಇಷ್ಟ ಏಕೆ? | 5 |
| **1.4. ಸಸ್ಯಗಳು** | | | | | |
| • ಸ್ಥಳೀಯ ಮರಗಿಡಗಳನ್ನು ಗುರುತಿಸುವರು.<br>• ಸಸ್ಯಗಳ ಎತ್ತರ, ಹೂವು, ಬಣ್ಣ, ಎಲೆಗಳ ಆಕಾರ ಮುಂತಾದವುಗಳನ್ನು ಹೋಲಿಸುವರು. | • ಮಕ್ಕಳು ನೋಡಿರುವ ಚಿಕ್ಕ ಮತ್ತು ದೊಡ್ಡ ಮರ ಗಿಡಗಳು, ಬಳ್ಳಿಗಳ ಪರಿಚಯ ಹೆಸರಿಸುವುದು.<br>• ಸಸ್ಯಗಳ ಹೂವಿನ ಬಣ್ಣ, ಎಲೆಗಳ ಆಕಾರ ಮುಂತಾದವುಗಳ ಹೋಲಿಕೆ (ಸಾಮಾನ್ಯವಾದ) | • ಮಕ್ಕಳು ನೋಡಿರುವ ಸಸ್ಯಗಳ ಹೆಸರನ್ನು ಹೇಳಿಸುವುದು.<br>• ಚಿತ್ರಪಟಗಳ ಸಹಾಯದಿಂದ ಚಿಕ್ಕ, ದೊಡ್ಡ ಗಿಡಗಳ ವರ್ಗೀಕರಣ.<br>• ಹೊರ ಸಂಚಾರ ಕೈಗೊಂಡು ಸಸ್ಯಗಳ ಎತ್ತರ, ಹೂವು, ಎಲೆ ಮುಂತಾದವುಗಳ ಪರಿಚಯ ಹೋಲಿಕೆ, ನಾಟಕ. | • ಸಸ್ಯಗಳ ಚಿತ್ರಪಟಗಳು<br>ನೈಜ ಸಸ್ಯಗಳು (ಪರಿಸರ ವೀಕ್ಷಣೆ)<br>• ವಿವಿಧ ಎಲೆ, ಹೂಗಳ ಸಂಗ್ರಹ. | • ನೀನು ನೋಡಿರುವ ಸಸ್ಯಗಳನ್ನು ಹೆಸರಿಸು?<br>• ಯಾವ ರೀತಿಯ ಗಿಡಗಳನ್ನು ನೋಡಿರುವೆ?<br>• ನೀನು ನೋಡಿರುವ ಸಸ್ಯಗಳಲ್ಲಿ ಇರುವ ವ್ಯತ್ಯಾಸವನ್ನು ಹೇಳು?<br>ಉದಾ : ಬಾಳೆಗಿಡ, ತೆಂಗಿನ ಮರ. | 8 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ದೈನಂದಿನ ಆವಶ್ಯಕತೆಗಳಿಗಾಗಿ ನಾವು ಸಸ್ಯಗಳನ್ನು ಅವಲಂಬಿಸಿರುವ ಬಗ್ಗೆ ಗುರ್ತಿಸುವರು. | • ವಿವಿಧ ಆಹಾರ<br>– ಧಾನ್ಯ, ತರಕಾರಿಗಳು, ಹಣ್ಣುಗಳು<br>• ಅಲಂಕಾರಿಕ ವಸ್ತುಗಳು<br>– ಹೂವು, ಎಲೆ.<br>• ನಾರು ಪದಾರ್ಥಗಳು<br>– ತೆಂಗು, ಸೆಣಸು.<br>• ಔಷಧ<br>– ತುಂಬೆ, ನಿಂಬೆ, ಬೆಳ್ಳುಳ್ಳಿ ... | • ಸಸ್ಯಗಳಿಂದ ದೊರೆಯುವ ಉತ್ಪನ್ನಗಳ ಸಂಗ್ರಹ, ಪರಿಚಯ.<br>• ಗಿಡಗಳಿಗೆ ಸಂಬಂಧಿಸಿದ ಹಾಡುಗಳು, ಕಥೆಗಳನ್ನು ಹೇಳುವುದು. | • ಸುತ್ತಲಿನ ಪರಿಸರ<br>• ಕುಟುಂಬದವರಿಂದ ಮಾಹಿತಿ ಸಂಗ್ರಹಣೆ. | • ಸಸ್ಯಗಳಿಂದ ನಮಗೆ ಆಗುವ ಉಪಯೋಗಗಳಾವುವು? | 6 |
| **2. ಆಹಾರ** | | | | | |
| • ಸಸ್ಯ ಮತ್ತು ಪ್ರಾಣಿಗಳಿಂದ ದೊರೆಯುವ ಆಹಾರವನ್ನು ಗುರುತಿಸುವರು. | ಸಸ್ಯ ಮತ್ತು ಪ್ರಾಣಿಗಳಿಂದ ದೊರೆಯುವ ಆಹಾರ ಪದಾರ್ಥಗಳು (ಸಾಮಾನ್ಯವಾದ / ಪರಿಚಿತವಾದ) | • ಸಸ್ಯ ಮತ್ತು ಪ್ರಾಣಿಗಳಿಂದ ದೊರೆಯುವ ಆಹಾರ ಪದಾರ್ಥಗಳ ಪಟ್ಟಿ ತಯಾರಿಸುವುದು. ಪ್ರಾಣಿಗಳಿಂದ, ಸಸ್ಯಗಳಿಂದ ಎಂದು ಗುರುತಿಸಿ ವರ್ಗೀಕರಿಸುವುದು.<br>• ಆಹಾರ ಪದಾರ್ಥಗಳ ಬಗ್ಗೆ ನಿರೂಪಣೆ. | • ಕಥೆಗಳು<br>• ಆಹಾರ ಪದಾರ್ಥಗಳ ಸಂಗ್ರಹ.<br>• ಹಿರಿಯರೊಂದಿಗೆ ಚರ್ಚೆ. | • ನೀನು ಬಳಸುವ ಆಹಾರ ವಸ್ತುಗಳ ಹೆಸರನ್ನು ಪಟ್ಟಿ ಮಾಡು.<br>• ಇವುಗಳಲ್ಲಿ ಪ್ರಾಣಿಗಳಿಂದ ದೊರೆಯುವ ಆಹಾರ ಪದಾರ್ಥಗಳನ್ನು ಗುರುತಿಸು. | 5 |
| • ಹಸಿಯಾಗಿ, ಬೇಯಿಸಿ ತಿನ್ನುವ ಆಹಾರ ಪದಾರ್ಥಗಳನ್ನು ಹೆಸರಿಸುವರು. | ಹಸಿಯಾಗಿ, ಬೇಯಿಸಿ, ಕರಿದು, ಹಬೆಯಲ್ಲಿ ಬೇಯಿಸಿ ತಿನ್ನುವ ಆಹಾರ ಪದಾರ್ಥಗಳ ಪರಿಚಯ, ವರ್ಗೀಕರಣ, ಆಹಾರದ ವೈವಿಧ್ಯತೆಯನ್ನು ಮೆಚ್ಚುವುದು. | • ಗೊತ್ತಿರುವ ಆಹಾರ ಪದಾರ್ಥಗಳ ಪಟ್ಟಿ ತಯಾರಿಸಿ ಅವುಗಳನ್ನು ವರ್ಗೀಕರಿಸುವುದು.<br>• ವಿಶೇಷ ಸಂದರ್ಭಗಳಲ್ಲಿ ,ಹಬ್ಬಗಳಲ್ಲಿ ಮಾಡುವ, ತಿನ್ನುವ ಆಹಾರ ಪದಾರ್ಥಗಳ ಬಗ್ಗೆ ಚರ್ಚೆ. | • ಆಹಾರ ಪದಾರ್ಥಗಳ ಸಂಗ್ರಹ.<br>• ಚಿತ್ರಗಳು. | • ನೀನು ಹಸಿಯಾಗಿ ತಿನ್ನುವ 5 ಆಹಾರ ಪದಾರ್ಥಗಳ ಹೆಸರು ಹೇಳು?<br>• ದಿನವೂ ಒಂದೇ ರೀತಿಯ ಅಡುಗೆ ಇದ್ದರೆ ನಿನಗೆ ಏನೆನಿಸುತ್ತದೆ?<br>• ಯಾವ ರೀತಿಯ ಆಹಾರ ಪದಾರ್ಥಗಳು ನಿನಗೆ ಇಷ್ಟ? | 4 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| • ಅಡುಗೆ ಮಾಡಲು ಬಳಸುವ ವಿವಿಧ ಪಾತ್ರೆಗಳನ್ನು ಹೆಸರಿಸುವರು. | • ಆಹಾರ ತಯಾರಿಕೆಯಲ್ಲಿ ವಿವಿಧ ಪರಿಕರಗಳ ಬಳಕೆ - ವೈವಿಧ್ಯತೆ (ಸಾಮಾನ್ಯವಾಗಿ ಬಳಸುವ ಪಾತ್ರೆಗಳು) | • ಮಕ್ಕಳ ದಿನನಿತ್ಯದ ಅನುಭವ ಆಧರಿಸಿ ಚರ್ಚೆ.<br>• ನೀನು ನೋಡಿರುವ ಅಡುಗೆ ಮಾಡಲು ಬಳಸುವ ಪಾತ್ರೆಗಳ ಹೆಸರು ಹೇಳು.<br>• ಅಮ್ಮ ಊಟ ಯಾವುದರಲ್ಲಿ ಬಡಿಸುವರು? ಇತ್ಯಾದಿ.<br>• ಚಿತ್ರ ನೋಡಿ ಇದರ ಉಪಯೋಗ ಹೇಳು?<br>• ಚಿತ್ರಗಳು, ಮಾದರಿಗಳಿಂದ ಪರಿಕರಗಳ ಪರಿಚಯ. ಮಾದರಿಗಳ ತಯಾರಿಕೆ (ಮಣ್ಣಿನಲ್ಲಿ) | • ಪಾತ್ರೆಗಳ ಮಾದರಿಗಳು,<br>• ಚಿತ್ರಗಳು, ಮಕ್ಕಳ ಅನುಭವ ಗಳು, ಹಾಡುಗಳು, ಕಥೆಗಳು. | • ನಿಮ್ಮ ಮನೆಯಲ್ಲಿ ಅಡುಗೆ ಮಾಡಲು ಬಳಸುವ ಪಾತ್ರೆಗಳನ್ನು ಹೆಸರಿಸು?<br>• ಮಣ್ಣಿನಿಂದ ಮಾದರಿಗಳನ್ನು ತಯಾರಿಸು.<br>• ಚಿತ್ರ ಬರೆ (ಪಾತ್ರೆಗಳ) | 5 |
| • ಕುಟುಂಬದಲ್ಲಿನ ವಿವಿಧ ಆಹಾರಾಭ್ಯಾಸಗಳನ್ನು ವಿವರಿಸುವರು. | ಕುಟುಂಬದಲ್ಲಿರುವ ಆಹಾರ ಅಭ್ಯಾಸದ ಪರಿಚಯ. ಸಸ್ಯಾಹಾರಿ, ಮಾಂಸಾಹಾರಿ, ಬಳಸುವ ಆಹಾರ ಪದಾರ್ಥಗಳ ಪರಿಚಯ / ಸಮಯ ಊಟದ ಅಭ್ಯಾಸಗಳು. | • ಮಕ್ಕಳ ಮನೆಯಲ್ಲಿ ಬಳಸುವ ಆಹಾರ ಪದಾರ್ಥಗಳ ಬಗ್ಗೆ ಚರ್ಚೆ. ಊಟ ಮಾಡುವ ಸಮಯ, ವಿಧಾನವನ್ನು ಕುರಿತು ಚರ್ಚಿಸುವುದು. ಊಟದ ಅಭ್ಯಾಸಗಳ ಬಗ್ಗೆ ವೀಕ್ಷಣೆ. ಹಿರಿಯರೊಂದಿಗೆ ಚರ್ಚೆ. | • ಮಕ್ಕಳ ಅನುಭವಗಳು<br>• ವೀಕ್ಷಣೆ (ಪರಿಸರ)<br>• ಇತರರೊಂದಿಗೆ ಚರ್ಚೆ. | • ನಿಮ್ಮ ಮನೆಯಲ್ಲಿ ನೀವು ಬಳಸುವ ಆಹಾರವನ್ನು ಹೆಸರಿಸು?<br>• ನಿನ್ನ ಸ್ನೇಹಿತರ ಮನೆಯಲ್ಲಿ ಬಳಸುವ ಆಹಾರದ ಹೆಸರನ್ನು ಹೇಳು? | 5 |
| ಪ್ರಾಣಿಗಳ ಆಹಾರವನ್ನು ಗುರ್ತಿಸುವರು. | ಪ್ರಾಣಿಗಳು ತಿನ್ನುವ ಆಹಾರ ಸ್ಥಳೀಯ / ಸಾಮಾನ್ಯ ಪ್ರಾಣಿಗಳು ತಿನ್ನುವ ಆಹಾರ<br>ಕೋಳಿ, ಕುರಿ, ಮೇಕೆ, ಹಸು, ಬೆಕ್ಕು, ನಾಯಿ, ಗುಬ್ಬಚ್ಚಿ, ಕಾಗೆ. | • ನಿಮ್ಮ ಮನೆಯಲ್ಲಿ ಯಾವ ಪ್ರಾಣಿಗಳನ್ನು ಸಾಕಿದ್ದಾರೆ?<br>• ಅವುಗಳ ಆಹಾರವೇನು?<br>• ಸರಳ ಪ್ರಶ್ನೆಗಳ ಮೂಲಕ ಚರ್ಚೆ.<br>• ಸಾಮಾನ್ಯ ಪ್ರಾಣಿಗಳ ಚಿತ್ರ ತೋರಿಸಿ ಅದರ ಆಹಾರ ಕೇಳುವುದು.<br>• ಹಿರಿಯರೊಂದಿಗೆ ಪ್ರಾಣಿಗಳ ಆಹಾರದ ಬಗ್ಗೆ ಚರ್ಚೆ. | • ಮಕ್ಕಳ ಅನುಭವ<br>• ಹಿರಿಯರ ಅನುಭವ | • ಕೆಲವು ಪ್ರಾಣಿಗಳ ಹೆಸರು ಹೇಳಿ. ಅವುಗಳ ಆಹಾರವನ್ನು ಹೇಳಿಸುವುದು.<br>ಉದಾ : ಹಸು, ಬೆಕ್ಕು.<br>• ಸಸ್ಯ ತಿನ್ನುವ, ಮಾಂಸವನ್ನು ತಿನ್ನುವ ಪ್ರಾಣಿಗಳ ಹೆಸರನ್ನು ಹೇಳಿಸುವುದು. | 6 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| **3. ವಸತಿ** | | | | | |
| • ಮನೆಯ ಅವಶ್ಯಕತೆ ಗುರುತಿಸುವರು. ಒಟ್ಟಾಗಿ ಬಾಳುವ ಅಗತ್ಯ ತಿಳಿಯುವರು. | • ನಮಗೆ ಮನೆ ಏಕೆ ಬೇಕು? ನಾವು ಒಟ್ಟಾಗಿ ಬಾಳಬೇಕು, ಇದಕ್ಕೆ ಮನೆ ಆವಶ್ಯಕ ಎಂಬುದನ್ನು ತಿಳಿಸುವುದು. | • ''ಮನೆ, ಮನೆ ನಮ್ಮ ಮನೆ ಅಪ್ಪ ಅಮ್ಮ ಇರುವ ಮನೆ'' ಹಾಡನ್ನು ಹೇಳಿಕೊಡುವುದು.<br>• ಮನೆಯ ಉಪಯೋಗಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು.<br>• ಮನೆಯ ಸ್ವಚ್ಛತೆಯ ಬಗ್ಗೆ ಚರ್ಚಿಸುವುದು.<br>• ರಟ್ಟು ಬಳಸಿ ಮನೆಕಟ್ಟು, ಮಣ್ಣಿನ ಮನೆ ಕಟ್ಟು. | • ಹಾಡುಗಳು<br>• ಕಥೆಗಳು<br>• ಮಕ್ಕಳ ಅನುಭವ | • ನಮಗೆ ಮನೆ ಏಕೆ ಬೇಕು?<br>• ನಮಗೆ ಮನೆಯಿಲ್ಲದಿದ್ದರೆ ಏನಾಗುತ್ತದೆ?<br>• ಎಲ್ಲರಿಗೂ ಒಂದೊಂದು ಮನೆ ಇದ್ದರೆ ಏನಾಗುತ್ತದೆ? | 2 |
| • ಸಾಮಾನ್ಯವಾಗಿ ಮನೆಯಲ್ಲಿರುವ ವಿವಿಧ ಭಾಗಗಳನ್ನು ಪರಿಚಯ ಮಾಡಿಕೊಳ್ಳುವರು. | • ಸಾಮಾನ್ಯ ಮನೆಯಲ್ಲಿರುವ ಅನುಕೂಲತೆಗಳು ಮತ್ತು ವಿಭಾಗಗಳು. | • ನಿಮ್ಮ ಮನೆಯಲ್ಲಿರುವ ಕೊಠಡಿಗಳನ್ನು ಹೆಸರಿಸಿ – ಮಕ್ಕಳೊಂದಿಗೆ ಮನೆಯಲ್ಲಿ ಇರಬೇಕಾದ / ಇರಬಹುದಾದ ಬಚ್ಚಲು, ಅಡುಗೆ ಕೋಣೆ, ಪಡಸಾಲೆ ಬಗ್ಗೆ ಚರ್ಚಿಸುವುದು.<br>• ಮಗುವಿನ ಅನುಭವಗಳನ್ನು ಆಧರಿಸಿ ಚರ್ಚೆ. | • ಮನೆಯ ಚಿತ್ರ<br>• ಮಕ್ಕಳ ಮನೆಗಳು. | • ನಿನ್ನ ಮನೆಯ ಚಿತ್ರ ಬರೆ.<br>• ನೀನು ಮನೆಯಲ್ಲಿ ಯಾವ ಯಾವ ಕೊಠಡಿಯನ್ನು ಬಳಸುವೆ? ಏಕೆ? | 5 |
| • ಮನೆಯಲ್ಲಿ ಉಂಟಾಗುವ ವಿವಿಧ ಕಸವನ್ನು ಗುರುತಿಸುವರು.<br>ಇದರ ಸರಿಯಾದ ವಿಲೇವಾರಿ ಕ್ರಮವನ್ನು ಅರಿಯುವರು. | • ಮನೆಯಲ್ಲಿ ಉಂಟಾಗುವ ಹಸಿಕಸ, ಒಣಕಸದ ಕಲ್ಪನೆ. ಕಸವನ್ನು ಕಸದ ತೊಟ್ಟಿಗೆ ಹಾಕಬೇಕು ಎಂಬ ಪರಿಕಲ್ಪನೆ. | • ಮನೆಯಲ್ಲಿ ಉಂಟಾಗುವ ಕಸಗಳ ವೀಕ್ಷಣೆ, ಪರಿಶೀಲನೆ.<br>• ಈ ಕಸವನ್ನು ಕುಟುಂಬದಲ್ಲಿ ಎಲ್ಲಿ ಹಾಕುತ್ತಾರೆ? ಎಲ್ಲಿ ಹಾಕಬೇಕು ಎಂಬುದರ ಬಗ್ಗೆ ಚರ್ಚೆ. ಹಿರಿಯರೊಂದಿಗೆ ಮಾಹಿತಿ ಸಂಗ್ರಹಿಸಿ. | • ಕಸ ಸಂಗ್ರಹಣಾ ವಿಧಾನ (ಸ್ಥಳೀಯ ಜ್ಞಾನ)<br>• ಮಕ್ಕಳ ಅನುಭವ | • ಮನೆಯಲ್ಲಿ ಉಂಟಾಗುವ ವಿವಿಧ ಕಸಗಳನ್ನು ಪಟ್ಟಿ ಮಾಡು?<br>• ಮನೆಯ ಕಸದ ವಿಲೇವಾರಿ ಹೇಗೆ? ಎಲ್ಲಿ ಹಾಕಬೇಕು? ಎಲ್ಲಿ ಹಾಕಬಾರದು? | 4 |
| • ಹಿಂದೆ, ಮುಂದೆ, ಎಡಬಲ, .... ಪದ ಬಳಸಿ ಮನೆಯ ಸುತ್ತಮುತ್ತಲಿನ ಸನ್ನಿವೇಶವನ್ನು ಗುರುತಿಸುವರು. | ತನ್ನ ಮನೆಯ ಹಿಂದೆ, ಮುಂದೆ, ಎಡಬಲ ದಿಕ್ಕುಗಳನ್ನು ಗುರ್ತಿಸಿ ಸನ್ನಿವೇಶವನ್ನು ವಿವರಿಸುವುದು. | • ಒಂದು ಮನೆಯ ಸನ್ನಿವೇಶದ ಚಿತ್ರ ತೋರಿಸಿ ಅದರ ಹಿಂದೆ, ಮುಂದೆ, ಎಡಬಲಗಳನ್ನು ಪರಿಚಯಿಸುವುದು. ಮನೆಯ ಹಿಂದೆ, ಮುಂದೆ, ಎಡಬಲಗಳಲ್ಲಿರುವ ಮನೆ / ತೋಟ / ಬಾವಿಗಳನ್ನು ಗುರ್ತಿಸುವುದು. | • ಸನ್ನಿವೇಶದ ಚಿತ್ರಪಟಗಳು.<br>• ಸ್ಥಳೀಯ ಜ್ಞಾನ ಮಕ್ಕಳ ಅನುಭವ ಆಧರಿಸಿ ಚರ್ಚೆ. | • ನಿಮ್ಮ ಮನೆಯ ಹಿಂದೆ, ಮುಂದೆ, ಎಡಬಲಗಳಲ್ಲಿ ಏನೇನು ಇದೆ?<br>• ಮನೆ ಚಿತ್ರ ಬರೆದು ಎಡಬಲ, ಹಿಂದೆ ಮುಂದೆ ಏನು ಇದೆ ಎಂಬುದನ್ನು ಚಿತ್ರದಲ್ಲಿ ಬರೆ. | 6 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | | • ಮಕ್ಕಳ ಅನುಭವಗಳನ್ನು ಆಧರಿಸಿ ಅವರ ಮನೆಯ ಸುತ್ತಮುತ್ತಲಿನ ಬಗ್ಗೆ ಚರ್ಚಿಸುವುದು. | | | |
| **4. ನೀರು** | | | | | |
| • ಸ್ಥಳೀಯ ನೀರಿನ ಮೂಲಗಳನ್ನು ಗುರುತಿಸುವರು. | • ಸ್ಥಳೀಯ ಹಾಗೂ ಸಾಮಾನ್ಯ ನೀರಿನ ಮೂಲಗಳನ್ನು ಗುರ್ತಿಸುವುದು. | • ಸ್ಥಳೀಯವಾಗಿ ಇರುವ ನೀರಿನ ಮೂಲಗಳ ಪರಿಚಯ.<br>• ಚಿತ್ರಗಳ ಸಹಾಯದಿಂದ ಇತರ ನೀರಿನ ಮೂಲಗಳ ಪರಿಚಯ.<br>• ನೀರಿನ ಮೂಲಗಳ ಬಗ್ಗೆ ಕಥೆ, ಹಾಡು, ಆಟ. | • ಸ್ಥಳೀಯ ಜ್ಞಾನ.<br>• ಸನ್ನಿವೇಶದ ಪರಿಚಯ.<br>• ಚಿತ್ರಗಳು. | • ನಿನ್ನ ಊರಿನಲ್ಲಿರುವ ನೀರಿನ ಮೂಲಗಳನ್ನು (ಬಳಸುವ ನೀರನ್ನು ಎಲ್ಲಿಂದ ತರುವಿರಿ) ಹೆಸರಿಸು.<br>• ಈ ಮೂಲಗಳು ನಿನ್ನ ಊರಿನಲ್ಲಿ ಇವೆಯೇ ಗುರ್ತಿಸು. | 4 |
| • ಕುಡಿಯಲು ಶುದ್ಧ ನೀರು ಬೇಕು ಎಂಬುದನ್ನು ಅರಿಯುವರು.<br>• ನೀರಿನ ಸಂಗ್ರಹಣೆ ಮತ್ತು ಬಳಕೆ ತಿಳಿಯುವರು. | ಪ್ರತಿ ವ್ಯಕ್ತಿಯ ಕುಡಿಯುವ ನೀರಿನ ಅವಶ್ಯಕತೆ<br>ಶುದ್ಧ ನೀರಿನ ಅವಶ್ಯಕತೆಯ ಬಗ್ಗೆ ಕಲ್ಪನೆ. ನೀರಿನ ಮುಖ್ಯ ಉಪಯೋಗ.<br>ನೀರಿನ ಸಂಗ್ರಹಣೆ, ಶೇಖರಣೆ ಮತ್ತು ಬಳಕೆಯಲ್ಲಿನ ಸ್ವಚ್ಛತೆಯನ್ನು ಗುರುತಿಸುವವರು. | • ನೀರು ಮತ್ತು ಆರೋಗ್ಯ ಕುರಿತು ಸ್ಥಳೀಯ ವೈದ್ಯರಿಂದ ಮಾಹಿತಿ ಪಡೆಯುವರು.<br>• ನೀರಿನ ಉಪಯೋಗಗಳನ್ನು ಚರ್ಚಿಸುವುದು.<br>• ಅಶುದ್ಧ ನೀರಿನಿಂದ ಕಾಯಿಲೆ ಬರುವುದು ಎಂಬುದನ್ನು ವಿವರಿಸುವುದು.<br>• ಶುದ್ಧ ನೀರಿನ ಬಗ್ಗೆ ಕುಟುಂಬದವರೊಡನೆ ಚರ್ಚೆ. | • ಸ್ಥಳೀಯ ನೀರಿನ ಮೂಲಗಳು.<br>• ಸ್ಥಳೀಯ ಜ್ಞಾನ.<br>• ಹಿರಿಯರ ಅನುಭವ. | • ಶುದ್ಧ ನೀರು ನಮಗೆ ಏಕೆ ಬೇಕು?<br>• ಅಶುದ್ಧ ನೀರು ಬಳಸಿದರೆ ಏನಾಗುತ್ತದೆ? | 2 |
| • ಸಸ್ಯ ಮತ್ತು ಪ್ರಾಣಿಗಳಿಗೆ ನೀರಿನ ಅವಶ್ಯಕತೆಯಿದೆ ಎಂಬುದನ್ನು ಗುರುತಿಸುವರು. | ಗಿಡಗಳಿಗೆ ಮತ್ತು ಸಸ್ಯಗಳಿಗೆ ನೀರಿನ ಅವಶ್ಯಕತೆ. | • ನೀರಿನ ಮೂಲಗಳ ವೀಕ್ಷಣೆ, ಪರಿಶೀಲನೆ.<br>• ಮನೆ ಮತ್ತು ಶಾಲೆಗಳಲ್ಲಿನ ಕುಡಿಯುವ ನೀರಿನ ಮೂಲಗಳ ತಿಳಿಯುವರು<br>• ಕುಡಿಯುವ ನೀರು ಸಂಗ್ರಹಿಸುವ ಪಾತ್ರೆಗಳ ಸ್ವಚ್ಛತೆ ಗಮನಿಸುವರು ಮತ್ತು ವಿವರಿಸುವರು.<br>• ಕೈ ಅದ್ದದಂತೆ ನೀರು ಕುಡಿಯುವ ಅಭ್ಯಾಸ ಬೆಳೆಸಿಕೊಳ್ಳುವರು, ಪ್ರದರ್ಶಿಸುವರು. | • ಸ್ಥಳೀಯ ಗಿಡಮರಗಳು.<br>• ಚಿತ್ರಗಳು.<br>• ಮಕ್ಕಳ ಅನುಭವಗಳು.<br>• ಹಿರಿಯರ ಜ್ಞಾನ. | • ಸಸ್ಯ ಮತ್ತು ಪ್ರಾಣಿಗಳಿಗೆ ನೀರು ಇಲ್ಲದಿದ್ದರೆ ಏನಾಗುತ್ತದೆ?<br>• ಎಲ್ಲಾ ಸಸ್ಯಗಳಿಗೂ ಒಂದೇ ಪ್ರಾಮಾಣದ ನೀರು ಬೇಕೆ? ಅಥವಾ ನೀನು ಗಮನಿಸಿರುವ ವ್ಯತ್ಯಾಸ ಹೇಳು? | 5 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | | • ನೀರು ಹಾಕಿದ, ನೀರು ಹಾಕದ ಗಿಡಗಳ ವೀಕ್ಷಣೆ / ಹೋಲಿಕೆ – ಚರ್ಚೆ.<br>• ಹಸು, ಕುರಿಗೆ ನೀರು ಇಡುವ ದೃಶ್ಯಗಳ ಪರಿಚಯ, ಚರ್ಚೆ.<br>• ಮನೆಯಲ್ಲಿರುವ ಸಾಕು ಪ್ರಾಣಿಗಳಿಗೆ ನೀರಿನ ಅವಶ್ಯಕತೆ ಬಗ್ಗೆ ಹಿರಿಯರೊಂದಿಗೆ ಚರ್ಚೆ. | | • ಸರಿ ತಪ್ಪು ಹೇಳು :<br>ಗಿಡಗಳಿಗೆ ನೀರು ಬೇಕು.<br>ನಾಯಿಗೆ ಕುಡಿಯಲು ನೀರು ಬೇಡ. | |
| **5. ಪ್ರಯಾಣ (ಸಾರಿಗೆ ಮತ್ತು ಸಂಪರ್ಕ)** | | | | | |
| • ಸಾರಿಗೆ ಸಾಧನಗಳನ್ನು ವೇಗದ ವಾಹನ ಮತ್ತು ನಿಧಾನದ ವಾಹನಗಳೆಂದು ವರ್ಗೀಕರಿಸುವರು.<br>• ಭೂ, ಜಲ ಮತ್ತು ವಾಯು ಸಾರಿಗೆಗಳನ್ನು ಗುರುತಿಸುವರು. | • ಪರಿಚಿತ ವಾಹನಗಳನ್ನು ವೇಗದ ಮತ್ತು ನಿಧಾನದ ವಾಹನಗಳೆಂದು ವರ್ಗೀಕರಣ.<br>• ಸಾರಿಗೆಯ ವಿಧಗಳನ್ನು ಗುರುತಿಸುವುದು. ಭೂ, ಜಲ ಮತ್ತು ವಾಯು. | • ನಿನಗೆ ತಿಳಿದಿರುವ ವಾಹನಗಳ ಹೆಸರು ಹೇಳು.<br>(ಸೈಕಲ್‌ನಲ್ಲಿ ನೀನು ಯಾವ ಊರಿಗೆ ಹೋಗಬಹುದು? ಕಾರಿನಲ್ಲಿ ಯಾವ ಊರಿಗೆ ಹೋಗಬಹುದು? ಯಾವ ವಾಹನದಲ್ಲಿ ಬೇಗ ಹೋಗಬಹುದು?) ಎಂಬ ಪ್ರಶ್ನೆಗಳಿಂದಿಗೆ ಚರ್ಚೆ<br>• ವಾಹನಗಳ ಹೆಸರಿನ ಪಟ್ಟಿ<br>• ಭೂ, ಜಲ, ವಾಯು ಸಾರಿಗೆಯ ವಾಹನಗಳ ಪಟ್ಟಿಯನ್ನು ಮಾಡಿಸುವುದು.<br>• ಈ ಸಾರಿಗೆಯ ಉಪಯೋಗಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವುದು.<br>• ಬೆಂಕಿಪೊಟ್ಟಣದಿಂದ ರೈಲು ತಯಾರಿಸು. | • ಮಕ್ಕಳ ಅನುಭವ, ಚಿತ್ರಗಳು (ವಾಹನಗಳ)<br>• ಮಾದರಿಗಳು.<br>• ಸ್ಥಳೀಯ ಜ್ಞಾನ.<br>• ಸಾರಿಗೆಯ ಚಿತ್ರಗಳು.<br>• ಮಾದರಿಗಳು<br>• ಆಟಿಕೆಗಳು. | • ಕೊಟ್ಟಿರುವ ಚಿತ್ರಗಳನ್ನು ವೇಗದ ಮತ್ತು ನಿಧಾನದ ವಾಹನಗಳೆಂದು ವರ್ಗೀಕರಿಸಿ ಹೇಳು.<br>ಕಾರು, ಆಟೋ, ಸೈಕಲ್ – ಈ ಮೂರರಲ್ಲಿ ಯಾವ ವಾಹನದಲ್ಲಿ ನೀನು ಪಕ್ಕದ ಊರಿಗೆ ಬೇಗ ತಲುಪುವೆ. ಏಕೆ?<br>• ಈ ಚಿತ್ರಗಳನ್ನು ಭೂ ಸಾರಿಗೆ, ಜಲ ಸಾರಿಗೆ ಮತ್ತು ವಾಯು ಸಾರಿಗೆಯೆಂದು ಗುಂಪುಗಳಾಗಿ ಮಾಡು. | 4<br><br>4 |
| **6. ನಮ್ಮ ಇತರ ಅವಶ್ಯಕತೆಗಳು** | | | | | |
| • ಮಕ್ಕಳು ತಮ್ಮ ಅವಶ್ಯಕತೆಗಳ ಬಗ್ಗೆ ಅರಿಯುವರು. | • ಊಟ, ಬಟ್ಟೆ, ಗೆಳೆಯರು, ಆರೋಗ್ಯ, ಪ್ರೀತಿ ವಿಶ್ವಾಸ, ಸಹಕಾರ, ಶಿಕ್ಷಣ, | • ನಮಗೇನು ಬೇಕು ಎಂಬುದನ್ನು ಮಕ್ಕಳೊಂದಿಗೆ ಚರ್ಚೆ ಮಾಡುವುದು.<br>• ಶಾಲೆಯಲ್ಲಿ / ಗೆಳೆಯರ ಜೊತೆಯಲ್ಲಿ | • ಚರ್ಚೆ.<br>• ಅನುಭವಗಳು.<br>• ಸ್ಥಳೀಯ ಸೌಲಭ್ಯಗಳ ಜ್ಞಾನ. | • ಶಾಲೆಗೆ ಹೋಗುವುದರಿಂದ ನಿನಗೇನು ಪ್ರಯೋಜನ? | 7 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | ಇತ್ಯಾದಿಗಳ ಅವಶ್ಯಕತೆಯ ಬಗ್ಗೆ ತಿಳಿಯುವುದು. | ತನ್ನ ಇತರೆ ಅವಶ್ಯಕತೆಗಳನ್ನು ಹೇಗೆ ಪೂರೈಸಿಕೊಳ್ಳಬಹುದೆಂಬುದರ ಚರ್ಚೆ.<br>• ಹಿರಿಯರೊಂದಿಗೆ ಚರ್ಚೆ, ಯಾರಿಗೆ ಏನು ಬೇಕು? | | • ನಾವು ಸಂತೋಷವಾಗಿ ಇರಲು ನಮಗೆ ಏನೇನು ಬೇಕು? ಹೇಳು.<br>• ನಮಗೆ ಇವು ಬೇಕೆ ಬೇಕು ಎಂಬುದನ್ನು ಈ ಚಿತ್ರದಲ್ಲಿ ಗುರ್ತಿಸಿ. | |
| **7. ಸ್ವಚ್ಛತೆ ಮತ್ತು ಸುರಕ್ಷತೆ** | | | | | |
| • ದೇಹದ ಅಂಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು.<br>• ಉತ್ತಮ ಆರೋಗ್ಯಕ್ಕಾಗಿ ವೈಯಕ್ತಿಕ ಸ್ವಚ್ಛತೆಯ ಅವಶ್ಯಕತೆಯನ್ನು ಅರಿಯುವರು. | • ದೇಹದ ಹೊರಾಂಗಗಳು, ಅವುಗಳ ಪ್ರಮುಖ ಕಾರ್ಯಗಳು, ಆರೋಗ್ಯಕ್ಕೆ ವೈಯಕ್ತಿಕ ಸ್ವಚ್ಛತೆಯ ಅವಶ್ಯಕತೆ. [ತನ್ನ ದೇಹದ ಭಾಗಗಳ ಸ್ವಚ್ಛತೆ] | • ಚಿತ್ರಗಳ ಸಹಾಯದಿಂದ ಹೊರ ಅಂಗಗಳ ಪರಿಚಯ.<br>• ಹಾಡಿನ ಮೂಲಕ ದೇಹದ ಅಂಗಗಳ ಪರಿಚಯ.<br>• ದೇಹದ ಭಾಗಗಳು ಮಾಡುವ ಕೆಲಸಗಳನ್ನು ಹೇಳಿ ಅಭಿನಯ ಮಾಡುವಂತೆ ಆಟವಾಡಿಸುವುದು. | • ದೇಹದ ಭಾಗಗಳ ಚಿತ್ರಗಳು.<br>• ಪ್ರಾತ್ಯಕ್ಷಿತೆಯ ಮೂಲಕ ದೇಹದ ಭಾಗಗಳನ್ನು ತೋರಿಸುವುದು. | • ಕೈ / ಕಾಲುಗಳಿಂದ ಯಾವ ಯಾವ ಕೆಲಸ ಮಾಡುವೆ?<br>• ಕಾಲಿನ ಚಿತ್ರ ತೋರಿಸಿ ಭಾಗಗಳ ಹೆಸರು ಹೇಳಿಸುವುದು.<br>• ಕೈ ಕಾಲುಗಳನ್ನು ತೊಳೆಯುವುದರಿಂದ ಏನು ಉಪಯೋಗ?<br>• ಕೆಲಸ ಹೇಳಿ ಅಭಿನಯ ಮಾಡುವಂತೆ ತಿಳಿಸುವುದು. | 10 |
| • ಸ್ಥಳೀಯ ಪರಿಸರದಲ್ಲಿ ವೈಯಕ್ತಿಕ ಸಂರಕ್ಷತೆಯ ಅಭ್ಯಾಸಗಳನ್ನು ಹಾಗೂ ಸುರಕ್ಷತೆಗೆ ಸರಳ ಕ್ರಮಗಳನ್ನು ಕೈಗೊಳ್ಳುವರು. | ಬ್ಲೇಡ್ ಉಪಯೋಗಿಸುವಾಗ, ಪಟಾಕಿ ಬಳಸುವಾಗ, ಮನೆಯಲ್ಲಿ, ಶಾಲೆಯಲ್ಲಿ ಕತ್ತರಿ ಬಳಸುವಾಗ, | • ಮನೆಯಲ್ಲಿ, ಶಾಲೆಯಲ್ಲಿ ವಹಿಸಬೇಕಾದ ಎಚ್ಚರಿಕೆಗಳನ್ನು ಮಕ್ಕಳೊಂದಿಗೆ ಚರ್ಚಿಸುವುದು. ಎಚ್ಚರ ತಪ್ಪಿದರೆ ಏನಾಗುತ್ತದೆ ಎಂಬುದನ್ನು ಉದಾಹರಣೆಗಳಿಂದ ವಿವರಿಸುವುದು. ತೊಂದರೆಯಾದಾಗ ಏನು | • ಮಕ್ಕಳ ಅನುಭವ<br>• ಚಿತ್ರಪಟಗಳು<br>• ಹೀಗೆ ಮಾಡು – ಮಾಡಬೇಡ ಚಾರ್ಟ್. | • ಈ ಸಂದರ್ಭದಲ್ಲಿ ನೀನು ಏನು ಮಾಡುವೆ?<br>• ಬ್ಲೇಡಿನ ತುಂಡು ಕೆಳಗೆ ಬಿದ್ದಿದೆ.<br>• ವಿದ್ಯುತ್ ತಂತಿ ಹರಿದು ಕೆಳಗೆ ಬಿದ್ದಿದೆ? | 8 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| | ಬೆಂಕಿಯ ಬಳಿ, ಈಜಲು ಹೋದಾಗ, ರಸ್ತೆಯಲ್ಲಿ ಹೋಗುವಾಗ, ಆಟ ವಾಡುವಾಗ, ಹರಿತವಾದ ವಸ್ತುಗಳನ್ನು ಬಳಸುವಾಗ, ಇತ್ಯಾದಿ ಸಂದರ್ಭಗಳಲ್ಲಿ ಸುರಕ್ಷತೆಯ ಸರಳ ಕ್ರಮಗಳು. | ಮಾಡಬೇಕೆಂಬುದನ್ನು ವಿವರಿಸುವುದು. ಹೀಗೆ ಮಾಡು – ಹೀಗೆ ಮಾಡಬೇಡ ಪಟ್ಟಿಯ ಬಗ್ಗೆ ಚರ್ಚೆ, ಮಿಂಚು ಫಲಕ ತಯಾರಿಕೆ. | • ಘೋಷಣೆಗಳ ಮಿಂಚು ಫಲಕ, ಕಥೆ, ನಾಟಕ. | • ನೆಲದ ಮೇಲೆ ಎಣ್ಣೆ ಚೆಲ್ಲಿದೆ.<br>• ಪಕ್ಕದಲ್ಲಿ ಬೆಂಕಿಯ ಕೆಂಡ ಬಿದ್ದಿದೆ. | |
| • ಸಾರ್ವಜನಿಕ ಆಸ್ತಿಗಳನ್ನು ಗುರುತಿಸುವರು. ಅಗತ್ಯ ಪೂರೈಕೆಯ ಬಗ್ಗೆ ಹಿರಿಯರಿಂದ ಕೇಳಿ ತಿಳಿಯುವರು. | • ಆಸ್ಪತ್ರೆ, ರಸ್ತೆ, ಶಾಲೆ, ಬಸ್ ನಿಲ್ದಾಣ, ಬಸ್ಸುಗಳು, ಬೀದಿ ದೀಪ, ಬೀದಿನಲ್ಲಿ, ಶೌಚಾಲಯ, ಅಂಚೆ ಕಛೇರಿ, ನ್ಯಾಯ ಬೆಲೆ ಅಂಗಡಿ ಇತ್ಯಾದಿಗಳ ಗುರುತು.<br>ಇವುಗಳ ಪೂರೈಕೆಯ ಬಗ್ಗೆ ಹಿರಿಯರಿಂದ ಮಾಹಿತಿ. | • ನಾವುಗಳೆಲ್ಲರು ಬಳಸಬಹುದಾದ ಆಸ್ತಿಗಳ ಬಗ್ಗೆ ಚರ್ಚೆ.<br>• ಚಿತ್ರಗಳ ಸಹಾಯದಿಂದ ಸಾರ್ವಜನಿಕ ಆಸ್ತಿಗಳ ಪರಿಚಯ.<br>• ಹಿರಿಯರೊಂದಿಗೆ ಸಾರ್ವಜನಿಕ ಆಸ್ತಿಗಳ ಬಗ್ಗೆ ಚರ್ಚೆ. | • ಹಿರಿಯರ ಅನುಭವಗಳು<br>• ಸಾರ್ವಜನಿಕ ಆಸ್ತಿಗಳ ಚಿತ್ರಪಟಗಳು. | • ಚಿತ್ರ ತೋರಿಸಿ ಸಾರ್ವಜನಿಕ ಆಸ್ತಿಗಳ ಹೆಸರು ಕೇಳುವುದು.<br>ಉದಾ : ಆಸ್ಪತ್ರೆ, ಶಾಲೆ. | 8 |
| **8. ನಮ್ಮ ಭೂಮಿ** | | | | | |
| • ಸೂರ್ಯ – ಚಂದ್ರ – ನಕ್ಷತ್ರಗಳನ್ನು ವೀಕ್ಷಿಸಿ, ಕಣ್ಣಿಗೆ ಕಾಣುವ ಇವುಗಳ ಲಕ್ಷಣಗಳನ್ನು ಗುರುತಿಸುವರು. | ಸೂರ್ಯ – ಚಂದ್ರ – ನಕ್ಷತ್ರಗಳನ್ನು ವೀಕ್ಷಿಸಿ, ಕಣ್ಣಿಗೆ ಕಾಣುವ ಬಾಹ್ಯ ಲಕ್ಷಣಗಳಾದ ಸೂರ್ಯನ ಆಕಾರ, ಚಂದ್ರನ ಬದಲಾಗುವ ಆಕಾರ ಮತ್ತು ನಕ್ಷತ್ರಗಳ ಮಿನುಗುವ ಲಕ್ಷಣಗಳನ್ನು ಗುರುತಿಸುವುದು. | • ಮಕ್ಕಳ ಅನುಭವದ / ವೀಕ್ಷಣೆಯ ಆಧಾರದ ಮೇಲೆ ಪ್ರಶ್ನಿಸುವುದರ ಮುಖಾಂತರ ಸೂರ್ಯ, ಚಂದ್ರ, ನಕ್ಷತ್ರಗಳ ಬಾಹ್ಯ ಲಕ್ಷಣಗಳನ್ನು ಗುರುತಿಸುವಂತೆ ಮಾಡುವುದು.<br>• ಚಿತ್ರಪಟಗಳ ಸಹಾಯದಿಂದ ಸೂರ್ಯ – ಚಂದ್ರ, ನಕ್ಷತ್ರಗಳ ಬಾಹ್ಯ ಲಕ್ಷಣಗಳನ್ನು ಗುರುತಿಸುವಂತೆ ಮಾಡುವುದು.<br>• ಹಾಡುಗಳ ಮೂಲಕ ಸೂರ್ಯ – ಚಂದ್ರ, ನಕ್ಷತ್ರಗಳ ಪರಿಚಯ. | • ಸೂರ್ಯ, ಚಂದ್ರ, ನಕ್ಷತ್ರ ವೀಕ್ಷಣೆ.<br>• ಸೂರ್ಯ, ಚಂದ್ರ, ನಕ್ಷತ್ರಗಳ ಚಿತ್ರ ಪಟ.<br>• ಹಾಡು. | • ಸೂರ್ಯ ನಿಮ್ಮ ಕಣ್ಣಿಗೆ ಯಾವ ಆಕಾರದಲ್ಲಿ ಕಾಣಿಸುತ್ತಾನೆ?<br>• ಬೆಳಿಗ್ಗೆ ಯಾವ ಬಣ್ಣದಲ್ಲಿ ಕಾಣಿಸುತ್ತಾನೆ.<br>• ಸೂರ್ಯ, ಚಂದ್ರ, ನಕ್ಷತ್ರಗಳ ಚಿತ್ರ ಬರೆದು ಬಣ್ಣ ಹಾಕು. | 6 |

| ಸಾಮರ್ಥ್ಯ | ವ್ಯಾಪ್ತಿ | ಚಟುವಟಿಕೆ | ಸಂಪನ್ಮೂಲ | ಮೌಲ್ಯಮಾಪನ | ಅವಧಿಗಳು |
|---|---|---|---|---|---|
| (ತನ್ನ ಊರಿಗೆ)<br>• ಸ್ಥಳೀಯ ಭೌಗೋಳಿಕ ಲಕ್ಷಣಗಳನ್ನು ಗುರುತಿಸುವರು. | • ಸ್ಥಳೀಯ ಕೆರೆ, ಕಾಡು, ಬೆಟ್ಟ, ನದಿ, ಸಮುದ್ರ ಇತ್ಯಾದಿಗಳ ಭೌಗೋಳಿಕ ಲಕ್ಷಣಗಳನ್ನು ಗುರುತಿಸುವುದು.<br>ಬೇರೆ ಊರಿಗೆ ಹೋಗಿರುವ ಅನುಭವಗಳನ್ನು ಹಂಚಿಕೊಳ್ಳುವರು. | • ಚಿತ್ರಪಟಗಳ ಸಹಾಯದಿಂದ ಸ್ಥಳೀಯ ಕೆರೆ, ಕಾಡು, ಬೆಟ್ಟ, ನದಿ, ಸಮುದ್ರ ಇತ್ಯಾದಿಗಳ ಭೌಗೋಳಿಕ ಲಕ್ಷಣಗಳನ್ನು ಗುರುತಿಸುವಂತೆ ಮಾಡುವುದು.<br>• ಮಕ್ಕಳನ್ನು ಹೊರ ಸಂಚಾರಕ್ಕೆ ಕರೆದುಕೊಂಡು ಹೋಗಿ ಸ್ಥಳೀಯ ಭೌಗೋಳಿಕ ಲಕ್ಷಣಗಳನ್ನು ಗುರುತಿಸುವಂತೆ ಮಾಡುವುದು.<br>ಮಕ್ಕಳು ಬೇರೆ ಊರಿಗೆ ಪ್ರಯಾಣ ಮಾಡಿರುವ ಅನುಭವದ ಆಧಾರದ ಮೇಲೆ ಅಲ್ಲಿನ ಸ್ಥಳೀಯ ಭೌಗೋಳಿಕ ಲಕ್ಷಣಗಳನ್ನು ಗುರುತಿಸುವಂತೆ ಮಾಡುವುದು. | • ಸ್ಥಳೀಯ ಭೌಗೋಳಿಕ ಲಕ್ಷಣಗಳಾದ ಕೆರೆ, ಕಾಡು, ಬೆಟ್ಟ, ನದಿ ಸಮುದ್ರಗಳ ಚಿತ್ರಪಟ.<br>• ಹೊರ ಸಂಚಾರ.<br>ಮಕ್ಕಳ ಅನುಭವ. | • ಗುಡ್ಡ, ನದಿ, ಕಾಡುಗಳಲ್ಲಿ ಏನೇನಿರುತ್ತದೆ ಹೇಳು?<br>• ಈ ಕೆಳಗಿನ ಭೌಗೋಳಿಕ ಪರಿಸರ ಚಿತ್ರ ಬರೆ.<br>ಉದಾ : ಬೆಟ್ಟ, ನದಿ, ಕೆರೆ, ಬಾವಿ.<br>• ಭೌಗೋಳಿಕ ಪರಿಸರದ ಕೆಲವು ಚಿತ್ರ ತೋರಿಸಿ. ನಿಮ್ಮ ಊರಿನಲ್ಲಿ ಇವೆಯೋ? ಎಂದು ಕೇಳುವುದು.<br>ಉದಾ : ಕಾಡು, ಸಮುದ್ರ, ಬಾವಿ. | 9 |